# ಅಧ್ಯಾಯ ಎರಡು

# ಮಠಗಳ ಪರಂಪರೆ : ಅರ್ಥ, ಸ್ವರೂಪ, ವೈವಿಧ್ಯತೆಗಳು

# ಅಧ್ಯಾಯ : ೨

## ಮಠಗಳ ಪರಂಪರೆ : ಅರ್ಥ, ಸ್ವರೂಪ ಮತ್ತು ವೈವಿಧ್ಯತೆಗಳು

"ಮಠ" ಎನ್ನುವುದನ್ನು ನಾವು ನಾನಾ ರೀತಿಯಲ್ಲಿ ಅರ್ಥೈಸಬಹುದು 'ಮಠ' ನಾಮಪದವಾಗಿ, ಸನ್ಯಾಸಿಗಳು ವಾಸಿಸುವ ಕುಟೀರವಾಗಿ, ಆಶ್ರಮವಾಗಿ ಅರ್ಥಮಾಡಿಕೊಳ್ಳಲಾಗಿದೆ ವಿದ್ಯೆ, ಜ್ಞಾನ ಧರ್ಮಬೋಧನೆ ಮತ್ತು ಇವುಗಳ ಪ್ರಸಾರ ಕಾರ್ಯ ನಡೆಸುವ ಆಧ್ಯಾತ್ಮಿಕ ಸಂಸ್ಥೆ ಅಥವಾ ಸಂಸ್ಥಾನ. ಅಲ್ಲದೆ ಗುಡಿ ದೇವಾಲಯ, ಮಹಾವ್ಯಕ್ತಿಗಳು ದೇಹ ತ್ಯಜಿಸಿದ ಮೇಲೆ ಅವರ ಯಾವುದಾದರೊಂದು ಕುರುಹನ್ನು ಪೂಜಿಸುವ ಸ್ಥಳ ಹಾಗೂ ಯಾತ್ರಾರ್ಥಿಗಳಿಗೆ, ಸಾಧು, ಸಂತರಿಗೆ, ನಿರಂತರವಾಗಿ ಅನ್ನದಾನ ನಡೆಸುವ ಸ್ಥಳ. ಬೋಜನಶಾಲೆ, ನಿವಾಸ , ವಾಸಸ್ಥಳ, ಪಾಠಶಾಲೆ, ಶಿಕ್ಷಣ ಶಾಲೆಯಂತಲೂ, ಸಂಸ್ಕೃತಿ ಮತ್ತು ಧರ್ಮೋಪದೇಶ ಮಾಡುವ ಜಾಗವೆಂತಲೂ,[೧] ಕೊನೆಯದಾಗಿ ಸಾಮಾಜಿಕ ಚಿಂತನೆಗೆ ಒಳಪಡಿಸುವ ಆತ್ಮೋದ್ಧಾರ ಮಾಡುವ ಮಾರ್ಗದರ್ಶನ ನೀಡುವ ಕೇಂದ್ರವೆಂತಲೂ ಕರೆಯಬಹುದು.

ಮಠವೆಂದರೆ ಸಂಸ್ಕೃತದ ನಿಘಂಟುಕಾರನಾದ 'ಅಮರಸಿಂಹನು' 'ಮಠ:ಛಾತ್ರಾದಿ ನಿಲಯಃ' ಎಂದಿದ್ದಾನೆ. 'ಛಾತ್ರ' ಎಂದರೆ ವಿದ್ಯಾರ್ಥಿ ಎಂದರ್ಥ ಅಂದರೆ ಅಮರಸಿಂಹನ ಪ್ರಕಾರ ವಿದ್ಯಾರ್ಥಿಗಳು ವಾಸಿಸುವ ಸ್ಥಳವೇ ಮಠ.[೨] ಇಲ್ಲಿ ಗುರುಗಳೂ, ಶಿಷ್ಯರೂ, ಸನ್ಯಾಸಿಗಳೂ ಮತ್ತು ಬ್ರಹ್ಮಚಾರಿಗಳೂ ವಾಸಿಸುತ್ತಿದ್ದರು. ಇಂತಹ ಜಾಗದಲ್ಲಿ , ಜ್ಞಾನದಾಸೋಹ, ಧರ್ಮಪ್ರಚಾರ ನಡೆಯುತ್ತಿತ್ತು. ಪುರಾಣವೇದಗಳ ಕಾಲಘಟ್ಟದಲ್ಲಿ ಋಷಿಮುನಿಗಳು ತಮ್ಮ ಶಿಷ್ಯರಿಗಾಗಿ ಪರ್ಣಕುಟೀರಗಳನ್ನು ನಿರ್ಮಿಸಿ ಆಮೂಲಕ ವಿದ್ಯಾರ್ಥಿಗಳಿಗೆ ವಿದ್ಯೆಕಲಿಸುತ್ತಿದ್ದರು. ಇವೆಮುಂದೆ ಗುರುಕುಲಗಳಾಗಿ ಮಾರ್ಪಡುಗೊಂಡಿರುವುದು ಕಂಡುಬರುತ್ತದೆ. ಗುರುಕುಲ ಪದದ ಮೂಲಹೆಸರೆ 'ಮಠ'. ಪುರಾಣಭಾರತ ಅಥವಾ ಪ್ರಾಚೀನ ಭಾರತದಲ್ಲಿ ತತ್ವಚಿಂತನೆ ಮತ್ತು ಧರ್ಮಬೋಧನೆ ಅರಣ್ಯಗಳ ನಡುವೆ ನಡೆಯುತ್ತಿತ್ತು. ಈರೀತಿ ವಿದ್ಯೆ ಮತ್ತು ಧರ್ಮಬೋಧನೆಯನ್ನು ಪ್ರಾಚೀನ ಗ್ರೀಕ್‌ನಲ್ಲಿ "ಜಿಮ್ನಾಶಿಯಂ" ಎಂದು ಕರೆಯುತ್ತಿದ್ದರೆಂಬುದು ಕಂಡುಬರುತ್ತದೆ.[೩]

---------------

೧. ಕನ್ನಡ ನಿಘಂಟು , ಕನ್ನಟ ಸಾಹಿತ್ಯ ಪರಿಷತ್- ಪುಟ – ೯೬೪ –೨೦೦೧
೨. ಅಮರಕೋಶ ಸಂಖ್ಯೆ ರೈಸ್ ಪುಟ- ೪೭
೩. ಪಿ.ವಿ.ಆಚಾರ್ಯ ಮಠಗಳು ಅವು ಏನು ಮಾಡಬಲ್ಲವು? 'ಚಿತ್ರಬೆ' ಸಂ. ಜಿ ಎಸ್ ಹನ್ನೆರಡು ಮಠ ಪುಟ- ೫೭೬

ಮಠ ಎಂಬ ಮಾತಿಗೊಂದು ನಿರ್ದಿಷ್ಟ ಪರಿಭಾಷೆ ನೀಡುವುದು ಅಷ್ಟೇನೂ ಸುಲಭವಲ್ಲ. ದೈವತ್ವಕ್ಕೇರಿದ ಪುಣ್ಯಪುರುಷರ ಆರಾಧನಾ ಕೇಂದ್ರಗಳನ್ನಾಗಲಿ, ಸನ್ಯಾಸಿಗಳ ವಾಸಸ್ತಾನಗಳನ್ನಾಗಲಿ 'ಮಠ' ಎಂದು ಕರೆಯಬಹುದು. ಸನ್ಯಾಸಿಗಳ ವಾಸಸ್ಥಾನಗಳಾಗಿದ್ದರೂ ಸರಿ ಅಲ್ಲಿ ದೈವತ್ವಕೇರಿದ ಪುಣ್ಯಪುರುಷರ ಪೂಜೆ ನಡೆಯುತ್ತಿದ್ದರೆ ಸಾಕು ಅದು ಮಠವೆಂಬ ಅಭಿಧಾನಕ್ಕೆ ಯೋಗ್ಯವಾಗುತ್ತದೆ. ಮಠವೆಂಬುದೊಂದು ಗೌರವಪೂರ್ಣವಾದ ಪೀಠ. ಅಲ್ಲಿನ ಪೀಠಾಧಿಪತಿಗಳು ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣವನ್ನು ಸಾಧಿಸುವ ಪುಣ್ಯ ಜೀವಿಗಳಾಗಿರುತ್ತಾರೆ. ಅವರು ತಮ್ಮಲ್ಲಿರುವ ಸಂಪನ್ಮೂಲಗಳಿಗೆ ಹೊಂದುವ ಹಾಗೆ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವಾಕಾರ್ಯಗಳನ್ನು ಸಂಪನ್ನಗೊಳಿಸುತ್ತ ಲೋಕಪೂಜಿತರಾಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಮಠಗಳು ದೇವಾಲಯದಂತೆಯೂ ಕಾರ್ಯನಿರ್ವಹಿಸುತ್ತವೆ. ದೇವಾಲಯದ ವಠಾರದೊಳಗೆ ಅರ್ಚಕರು ವಾಸವಾಗಿದ್ದರೂ, ಅಂತಹ ಪೂಜಾಸ್ಥಾನಗಳನ್ನು "ಮಠ" ಎಂಬ ಹೆಸರಿನಿಂದ ಕರೆಯುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂಢಿಯಲ್ಲಿದೆ. ಆಶ್ರಯ, ಆಶ್ರಮ ಎಂಬುದು ಮಠಕ್ಕಿರುವ ಪರ್ಯಾಯ ಪದಗಳು.

"ಮಠ" ಎಂಬ ಪದಕ್ಕೆ ಇಂಗ್ಲೀಷನಲ್ಲಿ "Monastery" ಎಂದು ಕರೆಯುತ್ತಾರೆ. ಈ ಪದವು ಗ್ರೀಕ್ ಮೂಲವಾದ "Monachers" ನಿಂದ ಬಂದಿದ್ದು ಇದು "Living alone" ಎಂಬ ಅರ್ಥವನ್ನು ಒಳಗೊಂಡಿದೆ[೪] ಏಕಾಂತತೆ ಅಥವಾ ಮುಕ್ತತೆ ಎಂಬುದೆ ಇದರ ತಾತ್ಪರ್ಯ

'ಮ್ಯಾಕ್‌ಡೊನಲ್'ರ ಸಂಸ್ಕೃತ ಶಬ್ದಕೋಶದಲ್ಲಿ ಒಬ್ಬ ಸನ್ಯಾಸಿಯ, ಇಲ್ಲವೆ ವಿದ್ಯಾರ್ಥಿಯ ಕುಟೀರ ಒಂದು ಧಾರ್ಮಿಕ ಪಾಠಶಾಲೆ ಎಂದು ವ್ಯಾಖ್ಯಾನಿಸಲಾಗಿದೆ. 'ಶಬ್ದಕಲ್ಪದ್ರುಮ'ದಲ್ಲಿ ಮಠವನ್ನು ಆಧ್ಯಾತ್ಮ ಗುರುವೊಬ್ಬನ ನಿವಾಸಸ್ಥಾನ ಅಲ್ಲಿಗೆ ಬರುವವರಿಗೆ ಆಶ್ರಯ ಕೊಡುವ ಸ್ಥಾನ ಎಂದು ವಿವರಿಸಲಾಗಿದೆ.[೫] ನ್ಯಾಯಾಂಗ ಭಾಷೆಯಲ್ಲಿ ಹೇಳುವುದಾದರೆ 'ಮಠವು ಸನ್ಯಾಸಿಗಳ ಸಂಸ್ಥೆ' ಒಂದು ವಿಶಿಷ್ಟ ಸಂಪ್ರಾದಾಯದ ಸನ್ಯಾಸಿಗಳ ಉಪಯೋಗ ಹಾಗೂ ಅನುಕೂಲಕ್ಕಾಗಿ ಅದು ಸ್ಥಾಪಿತವಾಗಿರುತ್ತದೆ. ಒಟ್ಟಾರೆ ಮಠವೆಂದರೆ ಸನ್ಯಾಸಿಗಳು ವಾಸಿಸುವ ಸ್ಥಳ, ಕುಟೀರ, ತಪಸ್ಸಿನ ಜ್ಞಾನಾನ್ವೇಷಣೆಯ ಕೇಂದ್ರ, ಕಾಲಕ್ರಮೇಣ ಆಶ್ರಮಗಳು ಗುರುಮನೆ, ಗುರುಕುಲಗಳಾಗಿ ಮಾರ್ಪಟ್ಟು ವಿದ್ಯಾಪ್ರಸಾರ ಮಾಡುವ ಕೇಂದ್ರವಾಗಿ ಬೆಳೆಯಿತು.

---

೪. The New Encylopaedia Britanica – Vol-12 Page-335

೫. B. K.Mukherjea. The Hindu Raw of Religious and Charitable trust-page -293

**ಮಠಗಳ ಹಿನ್ನಲೆ :** ಭಾರತೀಯ ಇತಿಹಾಸದಲ್ಲಿ ಕ್ರಿ.ಪೂ ೫ನೇ ಶತಮಾನದಲ್ಲಿ ಗುರುಕುಲಗಳಿದ್ದವು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ರಾಮಾಯಣದಲ್ಲಿನ ಅನೇಕ ಋಷಿಮುನಿಗಳ ಆಶ್ರಮಗಳು ತಪೋಕೇಂದ್ರಗಳು ಕರ್ನಾಟಕದಲ್ಲಿ ಇದ್ದುದು ಕಂಡುಬರುತ್ತದೆ. ಅಲ್ಲದೆ ಪ್ರಾಚೀನ ಬೌದ್ಧ ವಿಹಾರಗಳು ಮತ್ತು ಜೈನಬಸದಿಗಳು ಇಂದಿನ ಮಠದ ಸ್ವರೂಪವನ್ನು ಹೊಂದಿದ್ದವು. 'ಮಠ' ಎಂಬ ಮೊದಲ ಪ್ರಯೋಗ ನಮಗೆ ದೊರೆಯುವುದು ಬೌದ್ದ ಸಾಹಿತ್ಯದಲ್ಲಿ. ೩ನೇ ಶತಮಾನದ ಜೀವಿಸಿದ್ದ 'ಅಶ್ವಘೋಷ' ತನ್ನ 'ಬುದ್ದಚರಿತ'ದಲ್ಲಿ ಮಠದ ಬಗೆಗೆ ಹೀಗೆ ಹೇಳಿದ್ದಾನೆ.

> "ಬ್ರಹ್ಮಘೋಷೋ ಭವತ್ ಯತ್ರಯತ್ರ ಬ್ರಹ್ಮಾಶ್ರಯೀ ಸ್ಥಿತಃ
> ದೇವಸ್ಥ ಪೂಜನಂ ದಾನಂ ಮಠಮಿತ್ಯಭಿದೀಯತೆ"[೬]

ಎಲ್ಲಿ ವೇದಾಧ್ಯಯನ, ದೇವತಾಪೂಜೆ ದಾನ, ಧರ್ಮ, ಪರೋಪಕಾರ ಇದೇ ಮೊದಲಾದ ಸತ್ಕಾರ್ಯಗಳು ನಡೆಯುತ್ತವೆಯೋ, ಯಾವುದು ಬ್ರಹ್ಮಜ್ಞಾನಿಗಳಾದ ಸನ್ಯಾಸಿಗಳಿಗೆ ಆಶ್ರಯತಾಣವೋ ಅದೇ ಮಠವೆಂದು ಅವನ ಅಭಿಪ್ರಾಯ. ಪ್ರಾಚೀನ ಕಾಲದ ಬೌದ್ದವಿಹಾರಗಳು, ಜೈನ ಚೈತ್ಯಾಲಯ(ಬಸದಿ)ಗಳು ಇಂದಿನ ಮಠದ ಸ್ವರೂಪವನ್ನು ಹೊಂದಿದ್ದವು. "ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸಿದ ಬೌದ್ದ ಸನ್ಯಾಸಿಗಳ ಕುಟೀರಕ್ಕೆ 'ಆವಾಸ' ಎಂದೂ, ಇಲ್ಲಿ ಶ್ರೀಮಂತವರ್ಗದ ಶಿಷ್ಯರು, ನಗರ ಪ್ರದೇಶದಲ್ಲಿದ್ದ ಕುಟೀರಕ್ಕೆ 'ಆರಾಮ' ಎಂದು ಕರೆಯುತ್ತಿದ್ದರು. ಇವೇ ಮುಂದೆ 'ಸಂಘರಾಮ'ಗಳಾದವೆಂದು ತಿಳಿಯಲಾಗಿದೆ. ಜೈನಧರ್ಮದಲ್ಲಿ ಸನ್ಯಾಸಿಗಳನ್ನು 'ಸವಣರು' ಎಂದು ಕರೆಯುತ್ತಿದ್ದರು. ಇವರು ವಾಸಿಸುವ ಸ್ಥಳಗಳನ್ನು 'ಬಸದಿ' ಚೈತ್ಯ ಅಥವಾ ವಿಹಾರ ಎಂದು ಗುರುತಿಸಲಾಗಿದೆ. ಈ ಬೌದ್ದ ಮತ್ತು ಜೈನ ಧರ್ಮದ ಸಂಪ್ರಾದಾಯ, ಧರ್ಮಪ್ರಚಾರ ಮಾಡುತ್ತಿದ್ದ ಪರಿಯೇ ಮುಂದೆ ಹಿಂದು ಧರ್ಮದ ಮಠಗಳ ಸ್ಥಾಪನೆಗೆ ಪ್ರೇರಣೆ ನೀಡಿವೆ ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ಅಶೋಕನ ಕಾಲಕ್ಕಾಗಲೆ (ಕ್ರಿ.ಪೂ ೩ನೇ ಶತಮಾನದಲ್ಲಿ) ಬೌದ್ದ ವಿಹಾರ ಕೇಂದ್ರಗಳು ಹುಟ್ಟಿರಬೇಕು."[೭] ಈ ಹಿನ್ನಲೆಯಲ್ಲಿ ಭಾರತೀಯ ಚರಿತ್ರೆಯಲ್ಲಿ ಬೌದ್ದ ಧರ್ಮದ ನವೋದಯದ ಕಾಲಕ್ಕಾಗಲೆ ಸನ್ಯಾಸಿ ಮಠಗಳು ಅಸ್ತಿತ್ವದಲ್ಲಿದ್ದ ಬಗೆಗೆ ಸ್ಪಷ್ಟ ಸೂಚನೆಗಳು ದೊರೆಯುತ್ತವೆ.

---------------

೬. ಕನ್ನಡ ನಿಘಂಟು , ಕನ್ನಟ ಸಾಹಿತ್ಯ ಪರಿಷತ್– ಪುಟ – ೯೬೪ –೨೦೦೧

೭. Kerns Manual of Buddhism page -81

"ಮಠ ಇಲ್ಲವೆ ಸನ್ಯಾಸಿಗಳ ನಿವಾಸಕ್ಕೆ ಬೌದ್ದರು 'ವಿಹಾರ' ಅಥವಾ 'ಸಂಘ' ಎನ್ನುತ್ತಿದ್ದರು ಎಂಬುದು 'ಕೆರ್ನೆಸ್'ರ ಮಾತುಗಳು ಈ ಧರ್ಮದಲ್ಲಿ ಮಠಗಳಿಗೆ ಉನ್ನತವಾದ ಸ್ಥಾನವಿತ್ತು. ಬೌದ್ದ ಸನ್ಯಾಸಿಗಳನ್ನು ಪರಿವ್ರಾಜಕರೆಂದು ಕರೆಯುತ್ತಿದ್ದರು. ಮನುಷ್ಯ ಕೈಯಲ್ಲಿ ಕಮಲ ಹಿಡಿದಿರುವುದು ಬೌದ್ದ ಧರ್ಮದ ಚಿಹ್ನೆ. ಇದು ಸ್ವಚ್ಛತೆಯ ಸ್ವರೂಪ ಬೌದ್ದ ಮಠಗಳನ್ನೂ ವಿಹಾರ ಕೇಂದ್ರಗಳೆಂದು ಕರೆಯುತ್ತಿದ್ದರು. ಈ ಸಂಘ ಅಥವಾ ವಿಹಾರಗಳು ಹಿಂದಿನ ಆಶ್ರಮ ಅಥವಾ ಗುರುಕುಲಗಳ ರೀತಿ ಅರಣ್ಯಕೇಂದ್ರವಾಗಿರದೆ ನಗರಕೇಂದ್ರಗಳಾಗಿದ್ದುದು ವಿಶೇಷವಾಗಿತ್ತು."[೮] ಧರ್ಮಕ್ಕೆ ಸಂಘಟನಾ ಸ್ವರೂಪ ಬಂದದ್ದೆ ಬೌದ್ಧ ಹಾಗೂ ಜೈನ ಧರ್ಮಗಳ ಕಾಲದಲ್ಲಿ. ಮಠಗಳಂತಹ ಧಾರ್ಮಿಕ ಕೇಂದ್ರಗಳು ಪ್ರಾರಂಭವಾಗಿದ್ದೆ, ಈ ಕಾಲ ಘಟ್ಟದಲ್ಲಿ. ಜನಸಾಮಾನ್ಯರನ್ನು ಗಮನದಲ್ಲಿರಿಸಿಕೊಂಡಿದ್ದ ಈ ಧರ್ಮಗಳು ಸಂಘ ಸ್ವರೂಪದ ಧರ್ಮೋಪದೇಶ ಕೈಗೊಂಡವು. ಮುಂದೆ ವೈದಿಕ ಮತ್ತು ಅವೈದಿಕ ಪಂಥಗಳು ಕೂಡ ಇಂಥದೆ ಸಂಘಟನೆಯನ್ನು ಅನುಸರಿಸಿ ಧರ್ಮ ಪ್ರಚಾರವನ್ನ ಕೈಗೊಂಡವು.

ಮಠಗಳ ಇತಿಹಾಸವನ್ನು ಗುರುತಿಸುವಾಗ ಕ್ರಿ.ಶ ಎಂಟನೇ ಶತಮಾನವು ಪ್ರಾಮುಖ್ಯತೆ ಪಡೆಯುತ್ತದೆ. ಈ ಕಾಲಘಟ್ಟದಲ್ಲಿ ಬೌದ್ದ ಮತ್ತು ಜೈನ ಧರ್ಮಗಳ ವಿರುದ್ದ ಹಿಂದೂಧರ್ಮವು ಪುನರುತ್ಥಾನಗೊಂಡ ಕಾಲ. ಹಿಂದೂ ಧರ್ಮದ ಪರಂಪರೆಯಲ್ಲಿ ಪ್ರಪ್ರಥಮವಾಗಿ ಒಂದು ನಿರ್ಧಿಷ್ಟ ಮಾದರಿಯ ಮಠಗಳನ್ನು ನಿರ್ಮಾಣ ಮಾಡಿದವರು 'ಶ್ರೀಶಂಕರಚಾರ್ಯರು'. "ಶಂಕರರು ಬೌದ್ದಧರ್ಮವನ್ನು ವಿರೋಧಿಸಿದರೂ ಬುದ್ದನು ಉಪದೇಶಿಸಿದ ಸನ್ಯಾಸದ ಆದರ್ಶಗಳ ಪರವಾಗಿದ್ದರು. ಹಿಂದೂ ಸಂಸ್ಕೃತಿಯಲ್ಲಿ ಬೌದ್ಧ ಸನ್ಯಾಸಿ ಸಂಸ್ಥೆಗಳನ್ನು ಅಳವಡಿಸಿ ಅವಕ್ಕೆ ವೈದಿಕ ಹೊದಿಕೆಯನ್ನು ಕೊಟ್ಟರು. ಹಿಂದೂ ಧರ್ಮದಲ್ಲಿದ್ದ ಕಳಂಕರೂಪದ ಕೀಳು ಪದ್ದತಿಯನ್ನು ಮೂಲೋತ್ಪಾಟನೆ ಮಾಡಿ ಹಿಂದೂ ಧರ್ಮ ತತ್ವ ಪ್ರಚಾರ ಮಾಡುವುದು ಇವರ ಮಠಗಳ ಮುಖ್ಯ ಉದ್ದೇಶವಾಗಿತ್ತು."[೯]

ಇತ್ತೀಚಿಗೆ ಭಾರತೀಯ ಮಠಗಳನ್ನು ಕುರಿತು ಅಧ್ಯಯನ ನಡೆಸಿದ 'Hindu Religious Endowment Commission' ಪ್ರಕಾರ ಕೇವಲಾದ್ವೈತ ಸಿದ್ದಾಂತ ಪ್ರವರ್ತಕರು ಬೌದ್ದ ಮತ್ತು ಜೈನಧರ್ಮಗಳ ಪ್ರಭಾವವನ್ನು ಕಡಿಮೆ ಮಾಡಿ ವೇದೋಪನಿಷತ್ ಪ್ರತಿಪಾದಿತ ಧರ್ಮವನ್ನು ಪುನರತ್ಥಾನಗೊಳಿಸಿದವರೂ ಆದ ಆದಿಶಂಕರಚಾರ್ಯರೆ, ಮೊಟ್ಟ ಮೊದಲ ಶ್ರೀಗಳು. ಇಂದಿನ ಮಾದರಿ ಮಠಗಳನ್ನು ಅಂದೇ ಸ್ಥಾಪಿಸಲಾರಂಭಿಸಿದರು. "ಮೂಲದಲ್ಲಿ ಬೌದ್ದ ಮತ್ತು ಜೈನವಿಹಾರ ಚೈತ್ಯಾಲಗಳೇ

---------------

೮. B.K.Mukherjar. The Hindu Raw of Religious and Charitable trust-page -296
೯. ಡಾ.ಬಿ.ವಿ.ಮಲ್ಲಾಪುರ.ವೀರಶೈವ ಮಠಗಳ ಹಿನ್ನಲೆ, ವಿಶ್ವ ಪುಟ ಸಂ–೩ ಸಂ ಜಿ ಎಚ್ ಹನ್ನೆರಡು ಮಠ ಪುಟ ೫೦೩–೫೦೪

ಹಿಂದೂ ಮತೀಯರು ಮಠಗಳನ್ನು ನಿರ್ಮಿಸಿಕೊಳ್ಳಲು ಮೂಲ ಪ್ರೇರಣೆಗಳಾಗಿರಬೇಕು. ಶಂಕರಚಾರ್ಯರನ್ನು ಅನುಸರಿಸಿ ಮತ್ತು ರಾಮಾನುಜ, ಮದ್ವಚಾರ್ಯರು, ಶೈವರು ಮೊದಲಾದ ಬೇರೆ ಬೇರೆ ಮತ ಧರ್ಮಗಳ ಮಠಗಳು ಆರಂಭವಾದ ನಿದರ್ಶನಗಳಿವೆ. ಆರನೇ ಶತಮಾನಕ್ಕಿಂತ ಹಿಂದೆ ಆಗಮ ಪ್ರಾಮಾಣ್ಯದ ರೀತ್ಯ ವೀರಶೈವ ಪಂಚಾಚಾರ್ಯರ ಪಂಚಪೀಠಗಳಿದ್ದುದಾಗಿ ಪ್ರತಿಪಾದನೆಗಳಿವೆ."[೧೦] ಇದೇ ಕಾಲದಲ್ಲಿ ಶೈವರಲ್ಲಿ ಮಠಗಳಿದ್ದು ಬಹುದೊಡ್ಡ ದೇವಾಲಯಗಳ ನಿರ್ಮಾಣಕಾರರಾಗಿದ್ದ ಶೈವಯತಿಗಳು ದೇವಾಲಯಗಳಲ್ಲಿ ವಾಸಮಾಡುತ್ತ , ಆಧ್ಯಾತ್ಮ ಸಾಧನೆಯ ಜೊತೆಗೆ ವಿದ್ಯಾ ಪ್ರಸಾರವನ್ನು ನಡೆಸುತ್ತಿದ್ದರು. ಆಗಿನವರ ದೇವಸ್ಥಾನವೆ ಮುಂದೆ ಮಠವಾಗಿ, ಮಠವೇ ಶಾಲೆಯು ಆಗಿತ್ತು. "ಕರ್ನಾಟಕದಲ್ಲಿ ಈ ಕಾಲದ ಪ್ರಾಚೀನ ದೇವಾಲಯ ಬಾದಾಮಿಯ ಬಳಿಯಿರುವ ಮಹಾಕೂಟೇಶ್ವರ(ಮಕುಟೇಶ್ವರ) ಕ್ರಿ.ಶ.೬೦೨ರ ಇದರ ಆಧಾರದ ಮೇರೆಗೆ ಕರ್ನಾಟಕದಲ್ಲಿ ಕ್ರಿ.ಶ.ಆರನೇ ಶತಮಾನದ ವೇಳೆಗಾಗಲೆ ಶೈವಧರ್ಮದ ಪ್ರಭಾವ ಕಂಡು ಬರುತ್ತದೆ."[೧೧]

ಕ್ರಿ.ಶ ೧೦-೧೨ನೇ ಶತಮಾನದಲ್ಲಿ ಲಾಕುಳ-ಶೈವ ಪರಂಪರೆಯ ಅನೇಕ ದೇವಾಲಯಗಳು ದೊರೆತಿರುವುದನ್ನು ನಾವು ಇತಿಹಾಸದಲ್ಲಿ ಕಾಣಬಹುದು. "ಮಠಗಳು ನಾಡಿನ ನಾನಾಭಾಗಗಳಲ್ಲಿ ಹರಡಿದುದ್ದಕ್ಕೆ ಶಾಸನಾಧಾರಗಳಿವೆ. ಮಲಕಪುರದ ಶಾಸನ(ಕ್ರಿ.ಶ.೧೨ನೇ ಶತಮಾನ)ದ ಪ್ರಕಾರ ೧೦ನೇ ಶತಮಾನದ ಪೂರ್ವಾರ್ಧದಲ್ಲಿ ಪ್ರಾರಂಭವಾಗಿದ್ದ ಮಯೂರಮಠ ಮತ್ತು ಗೋಳಕಿಮಠಗಳು ಪ್ರಾಚೀನಚೇದಿ ಪ್ರಾಂತ್ಯದಲ್ಲಿ ಕ್ರಿ.ಶ ೧೩ನೇ ಶತಮಾನದವರೆಗೂ ತಮ್ಮ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದಿದ್ದವು."[೧೨] "ಲಾಕುಳ ಶೈವರ ಬಹುಮುಖ್ಯ ಕೇಂದ್ರ ಬಳ್ಳಿಗಾವೆಯ ಕೇದಾರೇಶ್ವರಮಠ ಅಥವಾ ಕೋಡಿಯಮಠ (ಕೋಡಿಮಠ) ಕ್ರಿ.ಶ೧೨ನೇಶತಮಾನದ ಪ್ರಸಿದ್ದ ಶೈವಕೇಂದ್ರವಾಗಿ ದಕ್ಷಿಣದ ಕೇದಾರವೆಂದೇ ಪ್ರಸಿದ್ದವಾಗಿತ್ತು. ನೈಷ್ಟಿಕ ಬ್ರಹ್ಮಚಾರಿಗಳ ವಾಸಸ್ಥಾನವು ಆಗಿದ್ದವು."[೧೩]

ಪ್ರಾಚೀನ ಕರ್ನಾಟಕದಲ್ಲಿ ದೇವಾಲಯ ಮತ್ತು ಮಠಗಳಿಗೆ ನಿಕಟವಾದ ಸಂಬಂದವಿತ್ತು. ಸಾಮಾನ್ಯವಾಗಿ ಇಲ್ಲಿ ದೇವಾಲಯವೇ ಮುಖ್ಯವಾಗಿದ್ದು ಮಠ ಅದರ ಅಂಗವಾಗಿತ್ತು. ಮಠವಿದ್ದು ದೇವಾಲಯ ಮುಖ್ಯಸ್ಥರಾಗಿದ್ದವರಿಗೆ ಮುನಿಪತಿ (ಸ್ಥಾನಪತಿ)ಗಳ ಸ್ಥಾನವಹಿಸಲಾಗಿತ್ತು. ಈ ಮುನಿಪತಿಗಳು ಮಠಗಳಲ್ಲೆ ವಾಸ ಮಾಡುತ್ತಿದ್ದುದು ಕಂಡು ಬರುತ್ತದೆ. "ಮಠಗಳ ಹೆಸರನ್ನು ಹೇಳುವಾಗ ದೇವಾಲಯಗಳ ಹೆಸರನ್ನು ಸೂಚಿಸಿಯೇ ಹೇಳಲಾಗುತ್ತಿತ್ತು. ಕರ್ನಾಟಕದಲ್ಲಿ

---

೧೦. ಜಚನಿ ಶ್ರೀಶೈಲ ಪೀಠದರ್ಶನ ಪುಟ- ೮೭-೮೮
೧೧. ಡಾ.ಎಂ.ಚಿದಾನಂದ ಮೂರ್ತಿ ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ- ೧೩೮-೧೩೯
೧೨. ಕಪಟರಾಳ ಕೃಷ್ಣರಾಯ ಕರ್ನಾಟಕ ಲಾಕುಳಶೈವರ ಇತಿಹಾಸ ಪುಟ- ೩೨
೧೩. Epigraphia Cornatica Vol-VII Shikaripur -118,1054,AD

ಲಾಕುಳ ಶೈವಧರ್ಮವು ಬಹಳ ಪ್ರಚಾರವಾದ ಬಳಿಕ (ಕ್ರಿ.ಶ.೬–೭ನೇ ಶತಮಾನದಿಂದೀಚೆಗೆ) ಈಬಗೆಯ ದೇವಸ್ಥಾನದ ಅಂಗವಾದ ಮಠಗಳು ಕಾಣಿಸಿಕೊಳ್ಳಲಾರಂಭಿಸಿದ್ದನ್ನು ನಾವು ಗಮನಿಸಬಹುದು."[೧೪]

ಡಾ.ಜ.ಚ.ನಿ.ಯವರು ಆದಿಶಂಕರಚಾರ್ಯರಿಗಿಂತ ಬಹಳ ಹಿಂದಿಯೇ, ಅಂದರೆ ಕ್ರಿ.ಶ ೬ನೆಯ ಶತಮಾನಕ್ಕಿಂತ ಮುಂಚೆ ಆಗಮ ಪ್ರಮಾಣ್ಯದ ರಿತ್ಯಾ ವೀರಶೈವ ಪಂಚಾಚಾರ್ಯರ ಪಂಚಪೀಠಗಳೆಂಬ ಮಠಗಳಿದ್ದುದಾಗಿ ತಮ್ಮ "ಶ್ರೀಶೈಲ ಪೀಠದರ್ಶನ"ದಲ್ಲಿ ಪ್ರತಿಪಾದಿಸಿದ್ದಾರೆ. ಭರತಖಂಡದಲ್ಲೆ ಪ್ರಾಚೀನ ಧರ್ಮಗಳಲ್ಲೊಂದಾದ 'ಶೈವ ಅಥವಾ ಲಾಕುಳಶೈವ' ರಲ್ಲಿ ಮಠಗಳಿದ್ದುದಕ್ಕೆ ಸಾಕಷ್ಟು ಆಧಾರಗಳಿವೆ. ಇದೇ ಶೈವಧರ್ಮವನ್ನು ಹಿಂದೆ, ಲಾಕುಳ–ಪಾಶುಪತ–ಕಾಳಾಮುಖ ಎಂಬ ಬೇರೆಬೇರೆ ಹೆಸರುಗಳಿಂದ ಕರೆಯುವುತ್ತಿದುಂಟು. ಶಾಸನಗಳಲ್ಲಿ ಇದನ್ನು ಶಿವಸಮಯ, ಶಿವಧರ್ಮ, ಲಗುಡಿಗಳಧರ್ಮ, ಕಾಳಾಮುಖಸಮಯ ಎಂಬ ಇವೇ ಮೊದಲಾದ ಹೆಸರುಗಳಿಂದ ಗುರುತಿಸಲಾಗಿದೆ. ಈ ಕೇಂದ್ರಗಳಲ್ಲಿ ವಾಸಿಸುತ್ತಿದ್ದ ಗುರುಗಳು ಬ್ರಹ್ಮಚಾರಿಗಳಾಗಿದ್ದು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದರು. ಇದಕ್ಕೂ ಮುಂಚೆ ಇದೇ ಬಳ್ಳಿಗಾವೆಯಲ್ಲಿ ಐದು ಮಠಗಳಿದ್ದುದಾಗಿ ಹೇಳಲಾಗುತ್ತಿದೆ. ಅವು ಪಂಚಮಠ, ಪಂಚಲಿಂಗಮಠ, ಹಿರಿಯಮಠ, ಬೇರುಂಡೇಶ್ವರಮಠ ಮತ್ತು ತ್ರಿಪುರಾಂತಕಮಠ ಎಂದಾಗಿವೆ. ಪ್ರಾಚೀನ ಕಾಲದಲ್ಲಿ ದೇವಾಲಯ ಮತ್ತು ಮಠಗಳಿಗೆ  ನಿಕಟವಾದ ಸಂಬಂಧವಿತ್ತು. ಆದ್ದರಿಂದ ದೇವಾಲಯದ ಇನ್ನೊಂದು ಭಾಗ 'ಮಠ' ಎಂದರೆ ತಪ್ಪಾಗಲಾರದು. ಇದಕ್ಕೆ ಉದಾಹರಣೆಯಾಗಿ ಮುಳುಗುಂದದ ನಗರೇಶ್ವರದ ಮಠ, ವಿಕ್ರಮಪುರದ ಶ್ರೀಸ್ವಯಂಭುನಗರೇಶ್ವರ ದೇವರಮಠ, ಶ್ರೀಪರ್ವತದಗಸ್ತ್ಯೇಶ್ವರದ ಮಠ, ಲಾಕಳಶೈವ ಧರ್ಮ ಪ್ರಚಾರವಾದಂತೆ ಮಠಗಳು ಪ್ರಸಿದ್ದಿಯನ್ನು ಪಡೆದವು. ಆ ಮೂಲಕ ಸಮಾಜೋಧಾರ್ಮಿಕ ಕ್ರಿಯೆಗಳಾದ ವಿದ್ಯಾದಾನ, ಸಾಮಾಜಿಕ ಪ್ರಜ್ಞೆ ಮೂಡಿಸುವತ್ತ, ಭಾಷೆ, ಸಾಹಿತ್ಯ, ಧರ್ಮ, ತರ್ಕ, ನಾಟಕ ಮತ್ತು ಜೋತಿಷ್ಯ ಇನ್ನು ಮುಂತಾದ ವಿಷಯಗಳ ಬಗ್ಗೆ ಬೋಧಿಸಲಾಗುತ್ತಿದ್ದು, ಈ ರೀತಿಯಾಗಿ ಶೈವಮಠಗಳು ತುಂಬಾ ಪ್ರಸಿದ್ದಿಯನ್ನು ಪಡೆದಿದ್ದವು. ಇಂಥ ಕಾಲಘಟ್ಟದಲ್ಲೆ ಇದರ ಮುಂದುವರಿದ ಸಾಮಾಜಿಕ ಕಳಕಳಿಯೇ ೧೨ನೇ ಶತಮಾನದಲ್ಲಾದ ಬಸವಾದಿ ಪ್ರಮುಖರ ಶರಣ ಸಾಮಾಜಿಕ ಕ್ರಾಂತಿ. ಇದರ ಫಲವಾಗಿ ವೀರಶೈವ ಧರ್ಮ ಪ್ರವರ್ಧಮಾನಕ್ಕೆ ಬಂದಿತು.

---

೧೪ ಡಾ.ಬಿ.ಎಂ.ಚಿದಾನಂದ ಮೂರ್ತಿ ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ ಪುಟ – ೧೮೬–೧೮೮

“ವೀರಶೈವಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮಪ್ರಚಾರ ಹೆಚ್ಚಾದಂತೆ ಈಧರ್ಮದೊಂದಿಗೆ ಸರಿಯಾಗಿ ನಿಲ್ಲಲಾರದೆ ಎಷ್ಟೋ ಶೈವಮಠಗಳು ಮುಂದೆ ವೀರಶೈವ ಮಠಗಳಾಗಿ ಪರಿವರ್ತನೆಯಾದವು. ಈ ದೇವಾಲಯ ಮಠದಲ್ಲಿದ್ದ ಸ್ಥಾನಪತಿಯು ಸನ್ಯಾಸಿಯಾಗಿದ್ದು ಇಲ್ಲಿ ವಾಸಿಸುವುದರ ಜೊತೆಗೆ ಅದರ ಆಡಳಿತ ಮೇಲ್ವಿಚಾರಕನಾಗಿ ತಪಸ್ವಿಯಾಗಿ ವಿದ್ಯಾದಾನ ಮಾಡುತ್ತಿದ್ದನು. ಇಂತಹ ಶೈವಸನ್ಯಾಸಿಯನ್ನು ಸ್ಥಾನಾಚಾರ್ಯ ಎಂದು ಇವರಿಂದ ಇಂತಹ ಕೇಂದ್ರಗಳಿಗೆ ನೈಷ್ಠಿಕಸ್ಥಾನ ಎಂದು ಕರೆಯುತ್ತಿದ್ದರು.”[೧೬] ಈ ಪ್ರಾಚೀನ ಧಾರ್ಮಿಕ ಮಠ, ದೇವಾಲಯಗಳು ಏಕಕಾಲದಲ್ಲಿ ಸಮಾಜೋಧಾರ್ಮಿಕ ಸೇವಾಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಕರ್ನಾಟಕದಲ್ಲಿದ್ದ ಲಾಕುಲೀಶ, ಪಾಶುಪತ, ಕಾಳಾಮುಖ ಮತ್ತು ಶೈವಮುನಿಗಳು ಸ್ಥಾನಪತಿಗಳಾಗಿದ್ದ ಸಮಯದಲ್ಲಿ ತಾವಿದ್ದ ದೇವಾಲಯವನ್ನು ಶ್ರೇಷ್ಠ ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರಗಳನ್ನಾಗಿ ಮಾಡಿ ಮಠಗಳ ಅಧಿಕೃತ ಬೆಳವಣಿಗೆಗೆ ಕಾರಣರಾದರು. “೧೦ ರಿಂದ ೧೪ನೇ ಶತಮಾನದವರೆಗೆ ಇಂತಹ ಸಹಸ್ರ ಸಂಖ್ಯೆಯ ಶೈವಮಠಗಳು ಉತ್ತುಂಗ ಸ್ಥಿತಿಯಲ್ಲಿದ್ದವು. ನಂತರದ ದಿನಗಳಲ್ಲಿ ಈ ಶೈವಮಠಗಳು ವೀರಶೈವಮಠಗಳಾಗಿ ಪರಿವರ್ತನೆಯಾದಂತಹ ನಿದರ್ಶನಗಳು ದೊರುಕುತ್ತವೆ.”[೧೭] ಉದಾಹರಣೆಗೆ “ ಬೆಳಗಾವಿಯ ಪೂವಲಿ(ಹೊಲಿ)ಮಠ”ವು ಹಿಂದೆ ರಾಜ ಮಹಾರಾಜರಿಂದ ಪೂಜಿತರಾಗಿದ್ದ ಶೈವಗುರುಗಳ ಪ್ರಸಿದ್ದ ಕೇಂದ್ರವಾಗಿತ್ತು. ಕಾಲಾನಂತರದಲ್ಲಿ ಅದು ಶೈವಮಠ ಹೋಗಿ ವೀರಶೈವ ಮಠವಾಗಿ ಪರಿವರ್ತನೆಗೊಂಡಿದೆ. ವಿಶೇಷವಾಗಿ ಉತ್ತರ ಕರ್ನಾಟಕದ ಹಾಗೂ ಇತರ ಕಡೆಯ ಅನೇಕ ದೇವಸ್ಥಾನಗಳು, ಶೈವಮಠಗಳು ವೀರಶೈವ ಕೇಂದ್ರಗಳಾಗಿ ವರ್ಗಾವಣೆ ಆಗಿರುವುದು ಕಂಡುಬರುತ್ತದೆ. ಇದಕ್ಕೆ ಪುಷ್ಠಿ ನೀಡುವಂತೆ ೧೨ನೇ ಶತಮಾನದ ಪ್ರಸಿದ್ದ ವಚನಕಾರ ಸೊನ್ನಲಿಗೆ ಸಿದ್ದರಾಮನು ಮೊದಲು ಲಾಕುಳ ಪಾಶುಪತ ಶೈವಪಂಥಕ್ಕೆ ಸೇರಿದವನಾಗಿದ್ದು, ಮುಂದೆ ಚೆನ್ನಬಸವಣ್ಣನಿಂದ ದೀಕ್ಷೆ ಪಡೆದು ವೀರಶೈವನಾಗುತ್ತಾನೆ.”[೧೮] ಈ ಹಿನ್ನಲೆಯಲ್ಲಿ ವೀರಶೈವಜಂಗಮರಿಗೆ ಕಾಳಾಮುಖ ಗುರುಗಳೇ ಪೂರ್ವಜರು(ಪೂರ್ವಿಕರು) ಎಂಬ ‘ಕಪಟರಾಳ ಕೃಷ್ಣರಾಯರ ಮಾತು ಸತ್ಯಕ್ಕೆ ಹತ್ತಿರವಾಗಿದೆ ಎನ್ನಬಹುದು. ಇಂದಿನ ವೀರಶೈವರ ಗುರು–ವಿರಕ್ತ ಮಠಗಳಿಗೆ ಸರ್ವವಿಧದಲ್ಲಿಯೂ ಹಿಂದಿನ ಶೈವ ಮಠಗಳೇ ಮಾದರಿ ಎಂಬ ವಾದವನ್ನು ಒಪ್ಪಬಹುದು.

---------------

೧೬. ಡಾ.ಬಿ.ಸಿ.ವೀರಪ್ಪ, ಬೆಂಗಳೂರು ನಗರ ವೀರಶೈವ ಮಠಗಳ ಸಾಂಸ್ಕೃತಿಕ ಅಧ್ಯಯನ ಪುಟ – ೩೬

೧೭. S. C.Nandimath , A Hand book of Virasaivism – Page- 9-10

೧೮. G.S.Dikshit Social and Religious Conditions of KarnatakaBefore Basava [Sri Basaveswara Eight centerruy commemorution Volume] Page - 123

"ಈ ಶೈವ ಮಠಗಳಲ್ಲಿದ್ದ ಆಚಾರ್ಯರು, ಸ್ಥಾನಪತಿಗಳು ತಮ್ಮ ತಮ್ಮ ವಿದ್ವತ್ ತಪಃ ಪ್ರಭಾವಗಳ ಮೂಲಕ ಜನ ಸಾಮಾನ್ಯರಿಗೆ ಹತ್ತಿರವಾಗಿದ್ದರು. ಈ ಪವಾಡಗಳನ್ನು ಕಂಡು ಅಲ್ಲಿ ನಡೆಯುತ್ತದ್ದ ಅನ್ನಸತ್ರ, ಔಷಾಧಾಲಯ ಮತ್ತು ವಿದ್ಯಾಭ್ಯಾಸವನ್ನು ಗಮನಿಸಿದ ರಾಜಮಹಾರಾಜರು, ಅಧಿಕಾರಿ ವರ್ಗದವರು ಹಾಗೂ ಸಾಮಾನ್ಯರು ಕೂಡ ಈ ಮಠಗಳ ಸ್ಥಾನಪತಿಗಳ ಕಾಲುತೊಳೆದು ಊರು, ಭೂಮಿ, ಧನಕನಕಾದಿಗಳನ್ನು ದತ್ತಿ ರೂಪದಲ್ಲಿ ನೀಡಿರುವುದು ಕಂಡುಬರುತ್ತದೆ. ಈವಿಷಯವನ್ನು ನಾವು ಹಲವಾರು ಶಾಸನಗಳ ಮೂಲಕ ತಿಳಿಯಬಹುದು. ಇಲ್ಲಿ ಈ ಮಠಸ್ಥಾನಪತಿಗಳನ್ನು 'ರಾಜಗುರು'ಗಳೆಂದು ಬಣ್ಣಿಸಿವೆ."[೧೮] ಈ ಕಾರಣದಿಂದ ಆಕಾಲದ ಶೈವ ದೇವಾಲಯಗಳು–ಮಠಗಳೂ ಅಲ್ಲಿನ ಸ್ಥಾನಚಾರ್ಯರು ಎಷ್ಟೊಂದು ಪ್ರಭಾವಶಾಲಿಗಳಾಗಿದ್ದರೆಂದು ವ್ಯಕ್ತವಾಗುತ್ತಿದೆ. ಹೀಗೆ ಕರ್ನಾಟಕದಲ್ಲಿ ಸುಮಾರು ಕ್ರಿ.ಶ ೬–೭ನೇ ಶತಮಾನದ ವೇಳೆಗಾಗಲೆ ಕಾಣಸಿಗುವ ಶೈವ ದೇವಾಲಯಗಳು–ಮಠಗಳು ಕ್ರಿ.ಶ ೧೦ನೇ ಶತಮಾನದಿಂದ ೧೪ನೇ ಶತಮಾನದವರೆಗೆ ಸಮೃದ್ಧವಾದ ಧಾರ್ಮಿಕ–ಶೈಕ್ಷಣಿಕ ಕೇಂದ್ರಗಳಾಗಿದ್ದವು ಎಂಬುದನ್ನು ಇತಿಹಾಸದಿಂದ ತಿಳಿಯಬಹುದು. ಮುಂದಿನ ವೀರಶೈವ ಮಠಮಾನ್ಯಗಳಿಗೆ ಆದರ್ಶಪ್ರಾಯವಾಗಿದ್ದ ಈ ಶೈವದೇಗುಲ ಮಠಗಳು ೧೫ನೇ ಶತಮಾನದ ವೇಳೆಗೆ ವೀರಶೈವಮಠಗಳೊಂದಿಗೆ ವಿಲೀನವಾದಂತೆ ತೋರುತ್ತದೆ.

---------------

೧೮. South Indian Inscriptions IX I 31. 1252 AD .

# ವೀರಶೈವ ಧರ್ಮದ ಹಿನ್ನಲೆ ಮತ್ತು ಪ್ರಾಚೀನತೆ

**ವೀರಶೈವ ಪದದ ಅರ್ಥ :**

ವಿವಿಧ ಜಾತಿ ಮತಗಳಿಂದ ತುಂಬಿರುವ ಭರತ ಖಂಡದ ಪ್ರಮುಖ ಮತಗಳಲ್ಲಿ ಅಥವಾ ಧರ್ಮಗಳಲ್ಲಿ ವೀರಶೈವವೂ ಒಂದು. ಅಂಗದ ಮೇಲೆ ಸದಾ ಲಿಂಗವನ್ನು ಧರಿಸಿ, ಅದನ್ನು ಏಕಾಗ್ರಚಿತ್ತದಿಂದ ಪೂಜಿಸುವವರು 'ವೀರಶೈವ'ನಾಗುತ್ತಾನೆ. (ಯೋ ಹಸ್ತಿಪೀಠೇ, ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನ: ಪ್ರ ಚಾರಃ॥ ಬಾಹ್ಯಕ್ರಿಯಾ ಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸ ವೀರಶೈವಂ॥) ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ಅಂಗದ ಮೇಲೆ ಲಿಂಗಧಾರಣೆಯೇ ವೀರಶೈವದ ಕುರುಹು ಎಂಬುದು ಇದರಿಂದ ಸ್ಪಷ್ಟ.

"ವಿದ್ಯಾಯಾಂ ರಮತೇ ಇತಿ ವೀರಃ, ವೀರಶ್ಚಾ ಸೌ ಶೈವಶ್ವ ವೀರಶೈವಃ" ಎಂದು ವೀರಶೈವ ಶಬ್ಧದ ನಿರ್ವಚನವನ್ನು ನೊಡಬಹುದಾಗಿದೆ. ಈ ನಿರ್ವಚನಕ್ಕೆ ಸಮರ್ಥನೆ ಸಿದ್ಧಾಂತ ಶಿಖಾಮಣಿಯಲ್ಲಿ ನೀಡಿರುವ 'ವೀರಶೈವ' ಶಬ್ದದ ಅಕ್ಷರಾರ್ಥ ಪ್ರತಿಪಾದನೆ ಸಾಕ್ಷಿಯಾಗಿದೆ. ವೀರಶಬ್ದೇನೋಚ್ಯತೇ ವಿದ್ಯಾಶಿವಜೀವೈಕ್ಯ ಬೋಧಿಕಾ । ತಸ್ಯಾಂ ರಮಂತೇ ಮೇ ಶೈವಾಃ ವೀರಶೈವಾಸ್ತು ತೇ ಮತಾಃ ॥ (ಸಿದ್ಧಾಂತಶಿಖಾಮಣಿ ೮.೫.೧೫) 'ವೀ' ಎಂದರೆ ವಿದ್ಯೆ, ಜ್ಞಾನ, ಶಿವ, ಜೀವರ ಐಕ್ಯವನ್ನೂ ಬೋಧಿಸುವ ವಿದ್ಯೆ ಅದರಲ್ಲಿ 'ರ' ಎಂದರೆ ರಮತೇ ಆನಂದವನ್ನು ಅನುಭವಿಸುವ ಶೈವರು ವೀರಶೈವರು ಎನ್ನಲಾಗಿದೆ. 'ವಿದ್ಯೆ' ಎಂದರೆ ವೇದಾಂತ ಜನ್ಯವಾದ ಜ್ಞಾನ (ವೇದಾಂತಜನ್ಯ ಯತ್ ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ । ಎಂದ ಈ ಗ್ರಂಥದಲ್ಲೆ ಉಲ್ಲೇಖಿಸಲಾಗಿದೆ. ವೀರಶೈವದ ಪರಮಗುರಿ ಜೀವಾತ್ಮನು ಪರಮಾತ್ಮನಲ್ಲಿ ಐಕ್ಯವಾಗುವುದು. ಅದನ್ನೇ ವೀರಶೈವ ಪರಿಭಾಷೆಯಲ್ಲಿ "ಲಿಂಗಾಂಗ ಸಾಮರಸ್ಯ" ಎಂದು ಕರೆಯಲಾಗಿದೆ. ಲಿಂಗಾಂಗ ಸಾಮರಸ್ಯವನ್ನು ಬೋಧಿಸುವ ವಿದ್ಯೆಯಲ್ಲಿ ಅರ್ಥಾತ್‌ವನ್ನು ಷಟ್‌ಸ್ಥಲಾತ್ಮಕವಾದ ವಿದ್ಯೆಯನ್ನು ಗುರುಮುಖದಿಂದ ಕಲಿತು ಅದರಲ್ಲಿ ಆನಂದವನ್ನು ಅನುಭವಿಸುವ ಶೈವ (ಶಿವನಲ್ಲಿ ಅಚಲವಾದ ಭಕ್ತಿಯುಳ್ಳ) ಸಾಧಕ ವೀರಶೈವನೆಂದೆನಿಸುತ್ತಾನೆ ಎಂಬುದು ಸಿದ್ಧಾಂತ ಶಿಖಾಮಣಿಯ ತಾತ್ಪರ್ಯ. ಈ ಅಭಿಪ್ರಾಯಕ್ಕೆ ಪುಷ್ಟಿಯಂಬಂತೆ ಪರಮೇಶ್ವರಾಗಮದಲ್ಲಿನ 'ಯಥಾ ವೀರೋ ರಣೇ ಶೂರೋ ವೀರಶೈವ ಮತೆ ತಥಾ ॥ ಭಕ್ತ್ಯಾ ವೀರೋನ ವೈರೇಣನ ಬಲೇನ ನ ಚ ಕಾಯತಃ॥ (ಕ್ರಿಯಾಪಾದ ೭.೩೪) ವೀರಶೈವಧರ್ಮಶಿರೋಮಣಿಯಲ್ಲಿನ ವೀರತ್ವಮಸ್ಯ............ದೃಢಶಂಭುಬಕ್ತ್ಯಾ (೧-೧೬) ಎಂಬುದೂ ಅದಕ್ಕೆ ಪೋಷಕವಾಗಿದೆ. ವೀರೋಧಾರ್ಥೋ ವಿ ಶಬ್ದ : ಸ್ಯಾತ ರ ಶಬ್ದೋ ರಹಿತಾರ್ಥಕಃ । ವಿರೋಧರಹಿತಂ ಶೈವಂ ವೀರಶೈವಂ ವಿಧುರ್ಬುಧಾಃ॥ (ಕ್ರಿಯಾಸಾರ, ಭಾಗ-೧, ಪು.೧೧) ಅಂದತಿ

'ವೀ' ಎಂದರೆ ವಿರೋಧ 'ರ' ಎಂದರೆ ರಹಿತ, ಮತ–ಸಿದ್ಧಾಂತಗಳನ್ನು ವಿರೋಧಿಸದೆ ಅವುಗಳೆಲ್ಲವುಗಳನ್ನು ಸಮನ್ವಯ ದೃಷ್ಟಿಯಿಂದ ಕಾಣುವವನೇ ವೀರಶೈವ. ಹೀಗೆ ವೀರಶೈವ ಮತ/ಧರ್ಮದ ವೈಶಿಷ್ಟ್ಯ 'ವೀರಶೈವ' ಎಂಬ ಪದದಲ್ಲಿಯೇ ಅಂತರ್ಗತವಾಗಿರುವುದು ಸ್ಪಷ್ಟವಾಗುತ್ತದೆ."[೧೯]

"ಪಾರಮೇಶ್ವರಾಗಮದಲ್ಲಿ 'ನ ವೀರಶೈವ ಸದೃಶ್ಯಂ ಮತಮಸ್ತಿ ಜಗತ್ರಯ' ಎಂದು ಹೇಳಿರುವುದನ್ನು ಗಮನಿಸಿದರೆ ಈ ವೀರಶೈವ ಧರ್ಮದ ಹಿನ್ನಲೆ ವೇದಗಳ ಕಾಲಕ್ಕೆ ಹೋಗುತ್ತದೆ. ಶೈವ ಧರ್ಮವು ಪ್ರಪಂಚದ ಧರ್ಮಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದ ಧರ್ಮವೆಂಬುದು ಸಿಂಧೂ ನದಿಯ ತೀರದ ಅವಶೇಷಗಳಿಂದ ವ್ಯಕ್ತವಾಗುವ ಮಹತ್ವದ ವಿಷಯವೆಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ವೀರಶೈವ ಧರ್ಮವು ವಿಶ್ವಧರ್ಮವಾಗಿ ಬೆಳೆದುದು ಹತ್ತು ಹನ್ನೆರಡನೆಯ ಶತಮಾನಗಳ ಅಂತರದಲ್ಲಿ ಎಂಬುದು ನಿಜವಾದರೂ, ಅದು ಆದಿಮಾನವನ ಕಾಲದಲ್ಲಿ ಮೊಳೆಕೆಯೊಡೆದಿದ್ದ ಈ ಸಸಿಯು ಮುಂದೆ ಮಹಾವೃಕ್ಷವಾದುದನ್ನು ನಾವು ಗಮನಿಸಬಹುದು."[೨೦] ಈ ಹಿನ್ನಲೆಯಲ್ಲಿ ವೀರಶೈವ ಧರ್ಮದ ಉಗಮ ವಿಕಾಸ, ಪ್ರಗತಿ ಮಹೋನ್ನತಿಗಳ ಚರಿತೆಯು ಪರಿಶೋಧನಾರ್ಹವಾಗಿದೆ. "ರಾಜರ್ಷಿಗಳಾದ ಮೈಸೂರಿನ ಶ್ರೀಮನ್ಮರಾಜರಿಂದ 'ಚಿಕ್ಕದೇವರಾಜ ಒಡೆಯರು' ತಮ್ಮ ಕೃತಿ 'ಲಿಂಗತತ್ವದರ್ಪಣದಲ್ಲಿ' ಮುನ್ನುಡಿಯಲ್ಲಿ ಅಪ್ಪಣೆ ಕೊಡಿಸಿರುವಂತೆ ನಮ್ಮ ಭಾರತೀಯ ಇತಿಹಾಸದಲ್ಲಿ ಲಿಂಗೋಪಾಸನೆಯು ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದು ಎಂದು ನಾವು ಧಾರಳವಾಗಿ ಹೇಳಬಹುದು."[೨೧]

ಮಾನವನ ಅನುಭವವು ವಿಚಾರದಾರೆಯಿಂದ ವಿಕಾಶವಾಗುತ್ತ ಬಂದಂತೆ ಲಿಂಗತತ್ವದ ಕಲ್ಪನೆ ಮತ್ತು ಪ್ರತಿಪಾದನೆಯು ವೀರಶೈವ ಧರ್ಮದಲ್ಲಿ ಪರಿಪೂರ್ಣತೆಯನ್ನು ಪಡೆದಿರುವುದು ಕಂಡುಬರುತ್ತದೆ.

ಸುಪ್ರಸಿದ್ದ ಪಂಡಿತರಾದ ಸರೋಜಿನಿದೇವಿಯವರು ಈ ವೀರಶೈವ ಧರ್ಮವು ಸೌಹಾರ್ದಬಾವದಿ ಉದಾತ್ತ ತತ್ವಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಇದು ವಿಶ್ವಧರ್ಮವಾಗಿರಲು ತಕ್ಕುದೆಂದು ಘೋಷಿಸಿದ್ದಾರೆ. ೧೯೭೪ರ ಬೆಳಗಾವಿ ಕಾಂಗ್ರೆಸ್ ೩೯ನೇ ಅಧಿವೇಶನದಲ್ಲಿ

---

೧೯ ಡಾ. ಶಿವಕುಮಾರಸ್ವಾಮಿ, ವಿಜಯವಾಣಿ ದಿನಪತ್ರಿಕೆ ದಿನಾಂಕ : ೧೯–೦೬–೨೦೧೪

೨೦, ಟಿ. ಎನ್. ಮಲ್ಲಪ್ಪ ವೀರಶೈವ ಪ್ರಾಚೀನತೆ , ಮಹಾಸಂಗಮ ಸು.ಮಲೆಯೂರು ಗುರುಸ್ವಾಮಿ, ಪುಟ – ೦೧

೨೧. ನಾಲ್ವಡಿಕೃಷ್ಣರಾಜ ಒಡೆಯರು ಲಿಂಗ ತತ್ವ ದರ್ಪಣ– ಪುಟ – ೭೮

ಮಹಾತ್ಮಗಾಂಧೀಜಿಯವರು ಹೀಗೆ ಹೇಳಿದ್ದಾರೆ. ಹಿಂದಿನ ಎಂಟುನೂರು ವರ್ಷಗಳ ಆಚೆ ಬಸವೇಶ್ವರರು ಯಾವ ತತ್ವ ಆಚರಿಸಿ ಉಪದೇಶ ಮಾಡಿದರೋ ಅಷ್ಟೆಲ್ಲಾ ತತ್ವಗಳನ್ನು ನನಗೆ ಆಚರಿಸಲಿಕ್ಕೆ ಆಗುವುದಿಲ್ಲ. ಅದರಲ್ಲಿ ಕೆಲವು ತತ್ವಗಳನ್ನ ನಾನು ಆಚರಿಸಿತ್ತಿದ್ದೇನೆ, ಸಾಧಕ ಸ್ಥಿತಿಯಲ್ಲಿದ್ದೇನೆ, ಸಿದ್ದನಲ್ಲ. ಆದರೆ ಬಸವಣ್ಣನವರು ಹೇಳಿದ ತತ್ವಗಳನ್ನು ಆಚರಣೆಯಲ್ಲಿ ತಂದಿದ್ದರು. ಅದರಲ್ಲಿ ಅಸ್ಪೃಶ್ಯತಾ ನಿವಾರಣೆ–ಕಾಯಕತತ್ವ ಬಹುಮುಖ್ಯವಾದವು. ಯಾವುದೇ ಜಾತಿಭೇದ ಅವರಲ್ಲಿ ಕಂಡುಬರುವುದಿಲ್ಲ. ಈ ಕಾಲದಲ್ಲಿ ಅವರು ಇರುತ್ತಿದ್ದರೆ ಜಗತ್ತಿಗೆ ಪೂಜ್ಯವ್ಯಕ್ತಿಯಾಗಿ ಪರಿಣಮಿಸುತ್ತಿದ್ದರು. ಆ ಧರ್ಮಾನುಯಾಯಿಗಳಾದ ನೀವು ಅವರು ಉಪದೇಶಿಸಿದ ತತ್ವಗಳನ್ನು ಆಚರಣೆಯಲ್ಲಿ ತಂದರೆ ಭಾರತ ಭೂಮಿಯಷ್ಟೆ ಏಕೆ ಈ ಜಗತ್ತನ್ನೆ ಉದ್ದಾರ ಮಾಡಬಲ್ಲಿರಿ.

ವೀರಶೈವ ಧರ್ಮದ ಉಗಮ ಯಾವಾಗ ಆಯಿತು? ಎಂದು ಖಚಿತವಾಗಿ ಹೇಳಲು ಸುಸ್ಪಷ್ಟ ಆಧಾರಗಳು ಸಾಲದು ಆದರೆ ೧೨ನೆಯ ಶತಮಾನದಲ್ಲಿದ್ದ ಜಗಜ್ಯೋತಿ ಬಸವೇಶ್ವರಾದಿ ಪ್ರಮಥರಿಗಿಂತ ಸ್ವಲ್ಪ ಹಿಂದೆ ಮತ್ತು ಅವರ ಹಿಂದಿನ ಕಾಲದಲ್ಲಿ ಪ್ರಬುದ್ದ ಸ್ಥಿತಿಯನ್ನು ಪಡೆಯಿತು ಎನ್ನಲಾಗುತ್ತದೆ.

ಕ್ರೈಸ್ತ ಧರ್ಮವನ್ನ ಕ್ರಿಸ್ತನೂ, ಮಹಮದೀಯರ ಮತವನ್ನು ಮಹಮ್ಮದನು ಪ್ರಾರಂಭಿಸಿದಂತೆ. ಹಿಂದೂಧರ್ಮವು ಯಾವುದೇ ಪ್ರಮುಖ ಸಂತರಿಂದ ಸ್ಥಾಪನೆಯಾಗಲಿಲ್ಲ. ಅದ್ವೈತಮತದ ಶ್ರೀಶಂಕರಚಾರ್ಯರಾಗಲಿ, ದ್ವೈತಮತ ಪ್ರವರ್ತಕರಾದ ಶ್ರೀ ಮದ್ವಚಾರ್ಯರಾಗಲಿ ಅಥವಾ ವಿಶಿಷ್ಠದ್ವೈತ ಸಿದ್ದಾಂತದ ಪ್ರತಿಪಾದಕರಾದ ಶ್ರೀರಾಮಾನುಜಚಾರ್ಯರಾಗಲಿ, ತಮ್ಮಿಂದಲೆ ತಮ್ಮಮತ ಪ್ರಾರಂಭವಾಯಿತೆನ್ನುವುದಿಲ್ಲ, ವೇದಾಗಮೋಪಾನಿಷತ್ತುಗಳು ಹಾಗೂ ಬ್ರಹ್ಮಸೂತ್ರಗಳಲ್ಲಿ ಹೇಳುವುದರ ಅನುಸಾರವಾಗಿ ತಮ್ಮ ತಮ್ಮ ಮತವಿರುವುದಾಗಿ ತಿಳಿಸಿದ್ದಾರೆ. ಅದರಂತೆಯೇ ಅಗಸ್ತ್ಯವೃತ್ತಿಯ ಆಧಾರದ ಮೇಲೆ ಶ್ರೀ ಶಂಕರಬಾಷ್ಯವು ಬರೆಯಲ್ಪಟ್ಟಿರುವುದಾಗಿ ಹೇಳಿದೆ. ಸಿಧ್ದಾಂತ ಶಿಖಾಮಣಿಯು ಶ್ರೀಶಂಕರಭಾಷ್ಯೆಕ್ಕೆ ಆಧಾರಗ್ರಂಥ ಸಿದ್ದಾಂತಶಿಖಾಮಣಿಯ ಭಾಷಾಂತರವಾದ 'ಮಣಿಮಕುಟದಲ್ಲಿ "ಪರಶಿವಂ ಪಾರ್ವತಿ ಪುತ್ರ ಷಣ್ಮುಂಖಂಗೆ ಪೇಳಿದಂ" ಪೇಳಿದಂ ಪಳೆಯ ಷಟ್ಸಲದ ಸಿದ್ದಾಂತಮಂ' ಎಂದು ಹೇಳಿದೆ.

ವಚನಶಾಸ್ತ್ರದಲ್ಲಿಯಾಗಲಿ, ಸಿದ್ದಾಂತ ಶಿಖಾಮಣಿಯಲ್ಲಾಗಲಿ ಹೊಸಮತವನ್ನು ಸ್ಥಾಪಿಸುವ ಮಾತೆ ಇರುವುದಿಲ್ಲ. ವೀರಶೈವ, ವೀರಮಾಹೇಶ್ವರ, ಜಂಗಮಲಿಂಗಿ, ಲಿಂಗಾಯಿತ ಮೊದಲಾದ ಹೆಸರುಗಳಿಂದ ಈ ಮತದವರನ್ನು ಕರೆಯುತ್ತಾರೆ. ಅಲ್ಲದೆ ಮೊದಲ ಮೂರು ಹೆಸರುಗಳಿಂದ ಈಮತದವರನ್ನು ಗುರುತಿಸುತ್ತಾರೆ. ಮೊದಲ ಈ ಮೂರು ಹೆಸರುಗಳು ಬಹುಮಟ್ಟಿಗೆ

ಶಾಸ್ತ್ರಗ್ರಂಥಗಳಲ್ಲಿ ಉಪಯೋಗಿಸಲ್ಪಡುತ್ತದೆ. ಉಪಯೋಗಿಸಲ್ಪಟ್ಟಿದೆ. ಜಂಗಮ, ಲಿಂಗಿ, ಲಿಂಗಾಯಿತವೆಂಬ ಪದಗಳು ಜನ ಸಾಮಾನ್ಯರಿಂದ ಉಪಯೋಗಿಸಲ್ಪಡುವ ಪದಗಳು.

**'ಶೈವ' ಪದದೊಡನೆ ಸೇರಿರುವ 'ವೀರ' ಪದದ ಸಂಕೇತ ಮತ್ತು ಪ್ರಾಚೀನತೆ:–**

" 'ವೀ' ಎಂದರೆ ವಿದ್ಯಾ 'ರ' ಎಂದರೆ 'ರಮಿಸುವುದು' 'ವೀರಶೈವ' ಎಂದರೆ ಶೈವ ವಿದ್ಯೆಯಲ್ಲಿ ನಿರತನಾದವನು ಎಂದು ಅಕ್ಷರಗಳ ಸಹಾಯದಿಂದ ಅರ್ಥಮಾಡುವುದು ಹಿಂದಿನಿಂದ ನಡೆದು ಬಂದಿರುವ ಪದ್ದತಿ. ಇದಕ್ಕಿಂತ ಶಾಸ್ತ್ರದ ಆಧಾರದ ಮುಖಾಂತರ 'ವೀರಶೈವ' ಪದದ ವಿವೇಚನೆ ಸೂಕ್ತ ವೀರಶೈವದಲ್ಲಿನ 'ವೀರ' ಪದವು ಶಿವನಲ್ಲಿ ಅವ್ಯಬಿಚರಿತವಾದ ನಿಷ್ಠೆಯ ದಾರ್ಢ್ಯವನ್ನು ಸೂಚಿಸುತ್ತದೆ.

ಯಥಾ ವೀರೋ ರಾಣೇ ಶೋರೋ ವೀರಶೈವ ಮತೆತಥಾ।
ಭಕ್ತ್ಯಾ ವೀರೋ ನಿವೈರೇಣ ನಬಲೇ ನಚ ಕಾರ್ಯತಃ

ಈ ವೀರಶೈವ ಪದದ ಪ್ರಾಚೀನತೆಯನ್ನು ಶ್ರೀ ಶಂ.ಭಾ ಜೋಷಿಯವರು ವೇದಗಳ (ಋಗ್ವೇದ) ಕಾಲಕ್ಕೆ ಒಯ್ಯುವರು. ವೀರಶೈವರೆಂದು ಹೆಸರು ಬಂದ ಕಾರಣ ಯಾವುದು? ಎಂಬ ಪ್ರಶ್ನೆ ಹಾಕಿಕೊಂಡು "ಶಿವರಹಸ್ಯ" ಎಂಬ ಅವರ ಕಿರು ಹೊತ್ತಗೆಯಲ್ಲಿ ಹೀಗೆ ಉತ್ತರ ಕೊಡುತ್ತಾರೆ. ನನಗೆ ತಿಳಿದಮಟ್ಟಿಗೆ ಈ ಶಬ್ದದ ಮೂಲವು ಋಗ್ವೇದದಲ್ಲಿದೆ. ರುದ್ರನು, ವೃಷಭನು ಎಂದರೆ ವೀರನು ಆದುದರಿಂದ ಆತನ ಉಪಾಸಕರು ವೀರರು."[೨೨]

ಇಮಾರುದ್ರಾಯ ತವಸೇ ಕೂಪರ್ದಿನೇಕ್ಷಯದ್ವೀರಾಯ

ಪ್ರಭಾರಾಮ ಹೇ ಮತಿಃ

ಬಲಿಷ್ಟನೂ, ಜಟಾಧಾರಿಯೂ, ವೀರಪುತ್ರರನ್ನುಳ್ಳವವನು ಆದ ರುದ್ರನನ್ನೂ ಕೊಂಡಾಡುವ ಎಂದಿದೆ.

**ಆಗಮಾದಿ ಆಧಾರಗಳು:–**

ವೀರಶೈವ ಎಂಬ ಪದವಿರುವ ಕೆಲವು ಆಧಾರಗಳನ್ನೂ, ಲಿಂಗಾಧಾರಣೆಯ ವಿಷಯವಾಗಿರುವ ಕೆಲವು ಆಧಾರಗಳನ್ನು, ಲಿಂಗಾಧಾರಣೆಯ ವಿಷಯವಾಗಿರುವ ಕೆಲವು ಆಧಾರಗಳನ್ನು ಸೂಕ್ಷ್ಮಾಗಮ, ಕಾಮಿಕಾಗಮ, ಮತ್ತು ವಾತುರಾಗಮ ಇವೇ ಮೊದಲಾದವುಗಳಲ್ಲಿ ಕಾಣಬಹುದು.

---------------

೨೨. ಟಿ. ಎನ್. ಮಲ್ಲಪ್ಪ ವೀರಶೈವಪ್ರಾಚೀನತೆ , ಮಹಾಸಂಗಮ ಸು.ಮಲೆಯೂರುಗುರುಸ್ವಾಮಿ, ಪುಟ : ೫–೬

"ಸಾಮಾನ್ಯಶೈವಂ ಪ್ರಥಮಂ ಮಿಶ್ರಶೈವ ತತಃಪರಂ
ಶುದ್ದ ಶೈವಂ ತತೋಜ್ಞೇಯಂ ವೀರಶೈವಂ ತತಂ ಪರಂ ಸೂಕ್ಷ್ಮಾಗಮ
ಮೂರ್ಧ್ನಿ ಕಂಠೇ ಭುಜ್ಮೇ ಹಸ್ತೆ ಹೃದ್ದೇಶೇನಾಭಿಮಂಡಲೇ
ವಿಶೇಷಮೇಕಂದೇಶೇತು ಧಾರಯೋಚ್ಛಿದ ಲಿಂಗಪುರಂ ವತುಲಾಗಮ"[೨೩]

ವೀರಶೈವದ ಪ್ರಾಚೀನತೆ ಮತ್ತು ಘನತೆ ಎಂಬ ವಿಷಯವನ್ನು ರಿಟೈರ್ಡ್ ಛೀಫ್ ಜಸ್ಟೀಸ್ ಶ್ರೀ ಪಿ. ಮಹದೇವಯ್ಯನವರು ತಮ್ಮ ಲೇಖನದಲ್ಲಿ ಈ ರೀತಿ ವಿವರಿಸಿದ್ದಾರೆ.

ಶ್ವೇತಾಶ್ವತರ ಉಪನಿಷತ್ತಿನಲ್ಲಿ ವಿವರಿಸ್ಪಟ್ಟಿರುವ ವಿಶೇಷ ಶಕ್ತಿಯುಳ್ಳ ಪರಮಾತ್ಮ ತತ್ವವನ್ನುಸರಿಸಿ ದೇವತೆಗಳಲ್ಲಿ ಶಿವನೇ ಮಹೋನ್ನತೆನ್ನಂದು ವೀರಶೈವ ಮತಪ್ರಚಾರಕರು ಪ್ರಚಾರ ಮಾಡಿದರು. ಅಷ್ಟೆ ಅಲ್ಲದೆ ಅವರು, ವೇದಂತ ತತ್ವವು ಜಾತಿ ಕೋಮುಗಳ ಭೇದಭಾವವಿಲ್ಲದೆ ಇಡೀ ಮಾನವ ಜಾತಿಗೆ ಕೊಡಲ್ಪಟ್ಟಿರುವ ದೈವಿಕ ವರವೆಂದು ಸಾರಿದರು.

ಶೈವಧರ್ಮವು ಆದಿಮಾನವನ ಕಾಲದಲ್ಲೆ ಹುಟ್ಟಿ ವಿಕಾಸವಾಗುತ್ತ ಹೋಯಿತು. ಆಗಲೇ ಲಿಂಗದಾರಿ ಧರ್ಮದ ಚಿಗುರು ಕಾಣಿಸಿತು. ಸಿಂಧೂನದಿ ತೀರದ ನಾಗರೀಕತೆಯ ಕಾಲಕ್ಕಾಗಲೇ ಅದು ಬೆಳೆದು ನಿಂತು ಅದರ ಶಾಖೆಗಳು ಮೆಡಿಟರೇನಿಯನ್ ಸಮುದ್ರ ತೀರದವರೆಗೂ ಹಬ್ಬಿದವು. ಇದರ ಮುಂದಿನ ಕಾಲದಲ್ಲಿ ಆರ್ಯರ ಆಕ್ರಮಣದಿಂದ ಆತಂಕ ಬಂದು ಅದರ ಮುಲೋತ್ಕಟನ ಮಾಡುವ ಪ್ರಯತ್ನ ನಡೆಯಿತು. ಆದರೆ ಇದರ ತಾಯಿ ಬೇರುಗಳು ಭಾರತ ಭೂಮಿಯಲ್ಲಿ ಆಳವಾಗಿ ನೆಟ್ಟಿದ್ದವು. ಮುಂದೆ ಇದೇ ಬೇರು ಚಿಗುರೊಡೆದು ಆಗಮಿಕ ವೃಕ್ಷವಾಗಿ ಬೆಳೆದು ಆರ್ಯರ ಭೂಮಿಯನ್ನು ಆಕ್ರಮಿಸಿ ವೈದಿಕಲತೆಗೆ ಆಶ್ರಯ ಕೊಟ್ಟಿತು. ಇಂದು ಈ ವೈದಿಕಲತೆಯ ಹೂಗಳು ಆಗಮಿಕವೃಕ್ಷದ ಆಧಾರದಿಂದಲೇ ಇಂದು ಬೆಳಗುತ್ತಿದೆ. ಈ ಮರದ ಮುಖ್ಯಶಾಖೆಯೇ ವೀರಶೈವ ಧರ್ಮವೆನಿಸಿದೆಕೊಳ್ಳುತ್ತದೆ.

ವೀರಶೈವ ಧರ್ಮದ ಉಗಮ ಮತ್ತು ವಿಕಾಸವನ್ನು ಕುರಿತು ಸಂಶೋಧನೆ ಮಾಡುವ ನೆಪದಲ್ಲಿ ನಾವು ಭಾರತದಲ್ಲಿ ಸನಾತನ ಧರ್ಮದ ಉಗಮ ಮತ್ತು ವಿಕಾಸದ ಅನ್ವೇಷಣೆಯನ್ನು ಅಧ್ಯಯನ ಮಾಡಿದಂತಾಗುತ್ತದೆ. ಪ್ರಪಂಚದಲ್ಲೆ ಅತ್ಯಂತ ಪ್ರಾಚೀನವಾದ ಶೈವ ಧರ್ಮದ ಉಗಮವಾದುದು ಭಾರತದಲ್ಲೆ ಎಂಬುದು ಗಮನಿಸಬೇಕಾದ ವಿಷಯ ಭಾರತದ ಪೂರ್ವ ನಿವಾಸಿಗಳಾದ ದ್ರಾವಿಡರನ್ನು ನಾಗರಿಕತೆಯಲ್ಲಿ ಮೀರಿಸಿದವರು ಇಡೀ ಪ್ರಪಂಚದಲ್ಲೆ ಇರಲಿಲ್ಲ. ಶೈವ ಪರಿಪೂರ್ಣವಾದ ವೀರಶೈವ ಧರ್ಮದ ಪಶುಪತಿ, ಪರಶಿವನ ಕಲ್ಪನೆ ಕೆತ್ತಿ ವಿಶಿಷ್ಟ ಶಿವನ ಕಲ್ಪನೆ

---

೨೩. ಟಿ. ಎನ್. ಮಲ್ಲಪ್ಪ ವೀರಶೈವ ಪ್ರಾಚೀನತೆ , ಮಹಾಸಂಗಮ ಸು.ಮಲೆಯೂರು ಗುರುಸ್ವಾಮಿ, ಪುಟ : ೦೯

ಲಿಂಗಾಧಾರಣೆ, ಲಿಂಗಾರ್ಚನೆ ಮೊದಲಾದ ಕಲ್ಪನೆಗಳ ಮೂಲರೂಪಗಳು ಆಗಲೇ ದ್ರಾವಿಡರಲ್ಲಿದುದ್ದನ್ನ ನಾವು ಇತಿಹಾಸದಲ್ಲಿ ಗಮನಿಸಬಹುದು. ಆರ್ಯರ ಆಗಮನದಿಂದಲೆ ಈ ಧರ್ಮಕ್ಕೆ ಆಘಾತವಾದರೂ ಆರ್ಯದ್ರಾವಿಡ ಸಂಸ್ಕೃತಿಗಳು ಸಮ್ಮಿಳವಾದುದು ಉತ್ಕೃಷ್ಟ ಧರ್ಮದ ಉದಯಕ್ಕೆ ಕಾರಣವಾಯಿತು. ಅನೀತಿಯತವು ಕ್ರೂರವು ಆದ ಯಜ್ಞ ಯಾಗಾದಿಗಳನ್ನು ವಿರೋಧಿಸುವುದರಲ್ಲಿ ದ್ರಾವಿಡರಿಗೆ ಸಹಾಯ ಮಾಡಿದವರು ಆರ್ಯರೇ ಆದರೂ ಅಸುರವ್ರಾತ್ಯರು ದ್ರಾವಿಡರೂ ಒಂದಾಗಿ ವೃಷಭನು ಪುರಾತನ ಶೈವಮತವನ್ನು ಸ್ಥಾಪಿಸಲು ಕಾರಣರಾದರೂ, ಉಪನಿಷತ್ತಿನ ಜ್ಞಾನಮಾರ್ಗವು, ಆಗಮಗಳಲ್ಲಿನ ಭಕ್ತಿ ಮಾರ್ಗವೂ, ಯೋಗಿಗಳ ಯೋಗಮಾರ್ಗವು, ಮುಪ್ಪರಿಗೊಂಡು ವೀರಶೈವ ಸಾಧನ ಮಾರ್ಗವಾಗಿರುವುದರಿಂದ ಮೂಲವನ್ನು ಭೋಕ್ತೃ ಭೋಗ್ಯ ಪ್ರೇರಕರೂ ಅದ್ವೈತವೇ ಆದ ಪರಶಿವ ಬ್ರಹ್ಮದ ತ್ರಿವಿದವೆಂಬ ವೀರಶೈವ ಶಿವಾದ್ವೈತ ಸಿದ್ದಾಂತದ ಮೂಲವನ್ನು ಶ್ವೇತಾಶ್ವತಕೋಪನಿಷತ್ತಿನಲ್ಲಿ ಅವುಗಳ ವಿಸ್ತರಣೆಯನ್ನು ವಾಯುವೀಯ ಸಂಹಿತೆಯನ್ನೊಳಗೊಂಡ ಶಿವಾಮಹಾಪುರಾಣದಲ್ಲಿಯೂ, ಇವುಗಳ ಅಂತಿಮ ರೂಪವನ್ನು ಸಿದ್ದಾಂತಶಿಖಾಮಣಿಯಲ್ಲಿ ನೋಡಬಹುದು. ಸ್ತ್ರೀಯರಿಗೂ, ಶೂದ್ರರಿಗೂ ಸೂರೇಯವಾದ ಲಿಂಗಗಳನ್ನು ಪೂಜಿಸುವ ಅಧಿಕಾರವನ್ನು ಕೊಟ್ಟಿರವುದು ಹನ್ನೆರಡನೇ ಶತಮಾನಕ್ಕು ಹಿಂದಿನ ದಿನಗಳಲ್ಲೆ ಎಂಬುದು ಶಿವಪುರಾಣದಲ್ಲಿ ಕಂಡುಬರುತ್ತಿದೆ. ಆದರೂ ಜಾತಿ ತಾರತಮ್ಯವೂ ಲಿಂಗ ತಾರತಮ್ಯ ಇದ್ದುದು ಪುರಾಣದಲ್ಲಿ ಕಂಡುಬರುತ್ತದೆ. ಮೋಕ್ಷದಲ್ಲಿ, ಸಾಲೋಕ್ಯ, ಸಮಿಪ್ಯಗಳಿಗಿಂತ ಮುಂದೆ ಹೋಗಿ ಪ್ರತಿಪಾದಿಸಿರುವುದನ್ನು ನಾವು ಈ ಪುರಾಣದಲ್ಲಿ ಕಾಣಬಹುದು. ಈ ಪುರಾಣ ಗ್ರಂಥವು ಶ್ರೀಕಂಠಬಾಷ್ಯಕ್ಕು, ಶ್ರೀಕರಬಾಷ್ಯಕ್ಕು ಹಿನ್ನಲೆಯಾಗಿದ್ದ ಶಿವನು ಶಕ್ತಿ ವಿಶಿಷ್ಟನಾಗಿ ಜಗತ್ಕಾರಣನಾಗುವ ಎಂಬ ಸಿದ್ದಾಂತವನ್ನ ವಿಸ್ತರಿಸಿದೆ.

ವೀರಶೈವರು ಜೈನರಂತೆ ಯಜ್ಞಯಾಗಗಳನ್ನು ಹಿಂಸಾತ್ಮಕವಾದುದೆಂದು ಖಂಡಿಸುವುದು ಬಹು ಹಿಂದಿನ ಸಂಪ್ರದಾಯ. ಶೈವರಾದ ಅಸುರರಲ್ಲಿ ಯಜ್ಞಧ್ವಂಸ ಕಾರ್ಯವು ಒಂದು ವ್ರತವಾಗಿತ್ತೆಂದು ಹೇಳಬಹುದು. ಶಿವನ ವಿರುದ್ಧವಾಗಿ ನಡೆದ ಒಂದು ಯಾಗವನ್ನು ಧ್ವಂಸ ಮಾಡಿದ ವೀರಭದ್ರನೇ ಮೊದಲ ವೀರಶೈವನಾಗಿ ಅವನಿಂದಲೆ ಈ ಮತಕ್ಕೆ ಈ ಹೆಸರು ಬಂದಿತೇನೊ [ಸೂರ್ಯ ಸಿಂಹಾನಾದೀಶ್ವರ ಶ್ರೀ ಜಚನಿ ರವರ 'ವೀರಶೈವ' ತ್ರೈಮಾಸಿಕ ಪತ್ರಿಕೆ ೧೯೬೧ರ ಜೂನ್ ಸಂಚಿಕೆಯಲ್ಲಿ ಪ್ರಕಟವಾದ ಭಾಗ] ಪ್ರಮಥರಿಗೆ ನಂದಿ ಹೇಗೆ ಪ್ರಮುಖನೋ ರುದ್ರಗಣರಿಗೆ ವೀರಭದ್ರನು ಪ್ರಮುಖ. ವೀರಭದ್ರನು ವೀರಶೈವ ಮೂಲ ಸಂಸ್ಥಾಪಕ, ಶೈವ ಸಂಸ್ಕೃತಿಯ ಉದ್ದಾರಕ, ಪ್ರಸಾರಕ ಈ ದಿಸೆಯಲ್ಲಿ ಅವನಿಗೆ ಸಹಾಯಕರಾಗಿದ್ದ 'ರುದ್ರಗಣ' ಅಪರಿಮಿತವಾಗಿತ್ತು, ಅತಿಬಲವುಳ್ಳದಾಗಿತ್ತು. ಅವರೆಲ್ಲರ ನೆರವಿನಿಂದ, ತನ್ನ ವಿಶೇಷವಾದ ವೀರಶ್ರೀಯಿಂದ ಶೈವ

ಸಂಸ್ಕೃತಿಯನ್ನು ಭೂಲೋಕದಲ್ಲಿ ನೆಲೆ ನಿಲ್ಲಿಸಿದವನೂ ವೀರಭದ್ರನು. ಇದರ ಕುರುಹಾಗಿಯೇ ವೀರಶೈವವೆಂದು ಹೆಸರು ಬಂದಿರಲು ಕಾರಣವಿರಬೇಕು.

**ಮಹಾಪಾಸುಪತ [ವೀರಶೈವ] :**

ಅಂಗದ ಮೇಲೆ ಸದಾ ಲಿಂಗಧಾರಣೆ ಮಾಡಿ ಅದನ್ನು ಪೂಜಿಸುವಂತಹ ವಿಶಿಷ್ಟ ಲಕ್ಷಣವುಳ್ಳ ವೀರಶೈವಕ್ಕೆ 'ಮಹಾಪಾಶುಪತ' ಎಂದು ಹೆಸರಿದೆ. ಅದನ್ನು 'ಸಾರಸ್ವತೀ' ಎಂಬ ಗ್ರಂಥವೂ ಹೀಗೆ ನಿರೂಪಿಸಿದೆ.

"ದ್ವಿದಾ ಪಾಶುಪತಂಜ್ಞೇಯಂ ಪೂರ್ವಾಪರವಿಭೇದತಃ ।
ಶಿವಾಗಮಾನುಸಾರೇಣ ಭಸ್ಮರುದ್ರಾಕ್ಷಧಾರಣಮ್ ॥
ಲಬ್ಧ್ವಾ ಶಿವಂ ಮಹಾದೇವಂ ಲಿಂಗರೂಪಮುಮಾಪತಿಯ್ ।
ಅರ್ಚಯೆಡ್ ತು ತ್ರಿಕಾಲಂ ವೈ ಪೂರ್ವಂ ಪಾಶುಪತಂ ಹಿ ತತ್ ॥
ಶಿವಾಗಮಾನು ಸಂಧನಶೈವದೀಕ್ಷಾ ಸಮನ್ವಿತಃ ।
ಶಿವಲಿಂಗಂ ಕರೇ ಕಂಟೇ ಧೃತ್ವಾವಕ್ಷಃಸ್ಥಳೇಪಿವಾ॥
ತ್ರಿಕಾಲಂ ಯೋರ್ಚಯೇದ್ ಭಕ್ತ್ಯಾ ಮಹಾಪಾಶುಪತೋ ಹಿಸಃ ।"[೨೪]

ಇಲ್ಲಿ ಪೂರ್ವಪಾಶುಪತರು ಮತ್ತು ಉತ್ತರಪಾಶುಪತರು ಎಂದು ಎರಡು ಭೇದಗಳನ್ನು ಹೇಳಿ ಯಾರು ಭಸ್ಮ-ರುದ್ರಾಕ್ಷಿಧಾರಿಗಳಾಗಿ ಶಿವಲಿಂಗದ ರೂಪದಲ್ಲಿ ಮಹಾದೇವನನ್ನು (ಸ್ಥಾವರಲಿಂಗವನ್ನು) ಪೂಜಿಸುತ್ತಾರೆಯೋ ಅವರು ಪೂರ್ವ ಪಾಶುಪತರು (ಸಾಮಾನ್ಯಶೈವರು). ಆದರೆ ಯಾರು ಶಿವಾಗಮೋಕ್ತರೀತ್ಯಾ ಇಷ್ಟಲಿಂಗವನ್ನು ಪಡೆದು ಅದನ್ನು ಯಾವಾಗಲೂ ಕೈ, ಕುತ್ತಿಗೆ ವಕ್ಷಸ್ಥಲ ಇವೇ ಮೊದಲಾದ ಸ್ಥಾನಗಳಲ್ಲಿ ಧರಿಸಿ, ಶಾಸ್ತ್ರೋಕ್ತ ರೀತ್ಯಾ ಪ್ರಾತಃಕಾಲ ಮದ್ಯಾಹ್ನ ಮತ್ತು ಸಾಯಂಕಾಲಗಳೆಂಬ ತ್ರಿಕಾಲಗಳಲ್ಲಿ ಆ ಇಷ್ಟಲಿಂಗವನ್ನು ಪೂಜಿಸುತ್ತಾರೆಯೋ, ಅವರು "ಉತ್ತರ ಪಾಶುಪತರು" ಅವರನ್ನು ಮಹಾಪಾಶುಪತರು ಅರ್ಥಾತ್ 'ವೀರಶೈವರು' ಎಂದು ಕರೆಯಲಾಗಿದೆ. ನಿಟ್ಟೂರು ನಂಜಣಾರ್ಯನು 'ಅಥ ವೀರಶೈವಾಣಂ ಮಹಾಪಾಶುಪಾತಾನಾಂ ಕಥಮಂತ್ಯೇಷ್ಟಿ ಕ್ರಮಃ' [ವೀರಶೈವ ಮಹಾಪಾಶುಪತರ ಅಂತ್ಯಸಂಸ್ಕಾರ ಕ್ರಮವು ಹೇಗೆ? ವೀರಶೈವ ಚಿಂತಾಮಣಿ, ಉತ್ತರದಿಂದ ಪುಟ-೩೯೮]ರಲ್ಲಿ ಉಲ್ಲೇಖಿಸಿ ಇದರರ್ಥ ವೀರಶೈವರನು 'ಮಹಾಪಾಶುಪತರು' ಎಂದು ಕರೆದಿದ್ದಾರೆ. ಆದ್ದರಿಂದ ವೀರಶೈವಕ್ಕೆ 'ಮಹಾಪಾಶುಪತ' ಎಂಬ ಹೆಸರಿರುವುದೂ ಸ್ಪಷ್ಟವಾಗುತ್ತದೆ.

---

೨೪. ಡಾ. ಶಿವಕುಮಾರಸ್ವಾಮಿ, ವಿಜಯವಾಣಿ ದಿನಪತ್ರಿಕೆ ದಿನಾಂಕ : ೦೫-೦೬-೨೦೧೪

**ಶೈವರಾದ ವೀರಮತ್ಸರು:–**

ಈ ವಿಚಾರವು ವೇದಗಳ ಕಾಲಕ್ಕಿಂತಲೂ ಹಿಂದೆ ಇದ್ದ ಹರಪ್ಪ ಮತ್ತು ಮಹೆಂಜೊದಾರೋ ಕಾಲದ ನಾಗರೀಕತೆಯ ಕಡೆಗೆ ಒಯ್ಯುತ್ತದೆ. “ಆ ಕಾಲದಲ್ಲಿಯ ಜನಾಂಗವು ಆರ್ಯರಿಗಿಂತಲೂ ಉತ್ತಮ ರೀತಿಯ ನಾಗರೀಕತೆಯನ್ನು ಹೊಂದಿದ್ದಾರೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಶ್ರೀ ಎ.ಪಿ ಕರ್ಮಕರ್ ರವರ ಕೃತಿ (Religious of India) ಗ್ರಂಥದ ೧೬ನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ The pan’s were a mighty merebant tribe and their doring deed are recorded in the history of the phonenicians abroud and various of India ಅದೇ ಗ್ರಂಥದ ೭ನೇ ಪುಟದಲ್ಲಿ ಹೇಳಿದಂತೆ It should be noted in this connection that the early tribes of the minos and the panis actively travelled aborad and spread the indigenous culture of India. ಫಣಿ ಮತ್ತು ಮೀನಾ ಅಥವಾ ಮತ್ಸ್ಯರೆಂದು ಕರೆಯಲ್ಪಡುವ ಜನರು ವೇದಕಾಲಕ್ಕೂ ಹಿಂದೆ ಇದ್ದ ಸಿಂಧೂನದಿಯ ತೀರದ ನಾಗರಿಕತೆಯ ಕಾಲದ ಜನರು. ಆ ಕಾಲದ ಮುಖ್ಯ ದೇವರೆಂದರೆ ಶಿವ ಮೇಲೆ ಹೇಳಿದ ಗ್ರಂಥದ ೪೯ನೇ ಪುಟದಲ್ಲಿ ಈ ರೀತಿ ತಿಳಿಸಿದೆ. The inseriptions relate that the Suprem Being exists by itself. The name of the supreme Being is Shiva “ಈ ಮತ್ಸ ಜನಾಂಗವು ರಾಮಾಯಣ ಮಹಾಭಾರತದ ಕಾಲದವರೆಗೂ ಉಳಿದು ಬಂದಿತ್ತು. ಶೈವರಾದ ಈ ಮತ್ಸ್ಯ ಜನಾಂಗಕ್ಕೆ ವೀರಮತ್ಸರೆಂದು ಕರೆಯಲಾಗುತ್ತಿತೆಂದು ಕಂಡು ಬಂದಿದೆ. ರಾಮಾಯಣದಲ್ಲಿ (೨೭.೭೧–೫) ಭರತನು ರಾಜಗೃಹದಿಂದ ತೆರಳಿ, ನದನದಿ ಪರ್ವತಾರಣ್ಯಗಳನ್ನು ದಾಟಿ ಮುಂದುವರಿದುದನ್ನು ಹೀಗೆ ಹೇಳಿದೆ:

ಸರಸ್ವತಿ ಚ ಗಂಗಾ ಚ ಯುಗ್ಮೇನ ಪ್ರತಿಪದ್ಯ ಚ
ಉತ್ತರಾನ್ ವೀರಮತ್ಸ್ಯಾನಾಂ ಭಾರುಂಡಂ ಪ್ರಾವಿಶದ್‌ವನಂ”

ಈ ವಿಷಯದಲ್ಲಿ ಕರ್ಮರ್‌ಕರ್ ಅವರ ಅಭಿಪ್ರಾಯವು ಹೀಗಿದೆ ``The above possage is important from various points of view. Firstly it helps us to locate the country of the matiyas roundabout the Horappa site.The word Bharunda (or even Bherunda, Bheranda, Bharunda . etc) is also the name of Shiva (Wilson’s interpretation. Monier william’s Sanscrit-English Distionary).We doubt whether it can mean the same forest styled as Nyagrodharanya in the Skardapurana in which Shiva is said to have played the fierce Tandava dance along with Kali, Peeuliorly enough the MohenjoDoro inscriptions deserible that an image was Shiva in his Tandava Postare was installed in a forest.’’ ಇದರ ಮಥಿತಾರ್ಥವೇನೆಂದರೆ ‘ವೀರ’ ಪದವು ‘ಶೈವ’ ಕ್ಕೆ ಬಹು ಪುರಾತನ ಕಾಲದಿಂದಲೂ ಸಂಬಂಧಪಟ್ಟಿರುತ್ತದೆ.

ಶ್ರೀ ಪ್ರತಾಪಚಂದ್ರರಾಯರಿಂದ ಕೊಲ್ಕತ್ತೆಯಲ್ಲಿ ಮುದ್ರಿತವಾದ ಮಹಾಭಾರತದ ಅನುಶಾಸನ ಪರ್ವದ ೨೨ನೇ ಅಧ್ಯಾಯನದಲ್ಲಿನ ಎರಡು ಶ್ಲೋಕಗಳಿವು.

ಯುದಿಷ್ಠಿರ ಉವಾಚ:

ಕಿಮೂಹುರ್ಭರತ ಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಾ ।

ಬ್ರಾಹ್ಮಣಂ ಲಿಂಗನಂಚೈವ ಬ್ರಾಹ್ಮಣಂ ವ್ಯಾಪ್ಯಲಿಂಗಿನಂ ॥

ಭೀಷ್ಮ ಉವಾಚ :

ಸ್ವವೃತ್ತಿಮಭಿಪನ್ನಾಯ ಲಿಂಗಿನೇಚೇತರಾಯ ಚ

ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ ॥೨॥

ಈ ಶ್ಲೋಕಗಳ ವಿಷಯವಾಗಿ ಶ್ರೀ ಡಿ.ಎಲ್.ನರಸಿಂಹಚಾರ್ಯರರು ಜಯಕರ್ನಾಟಕದ ಸಂಪುಟ ೧೩ರ ಸಂಚಿಕೆ ೩ರ ೧೬೪ನೇ ಪುಟದಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ಹೀಗೆ ಹೇಳಿದ್ದಾರೆ. ಇವುಗಳಲ್ಲಿ ಎರಡನೆಯ ಶ್ಲೋಕದಲ್ಲಿರುವ 'ಉಭಾವೇತೌ ತಪಸ್ವಿನೌ' ಎಂಬ ಮಾತುಗಳಿಂದಲೆ ಲಿಂಗಿಗಳನ್ನು ಇತರರನ್ನು ತಪಸ್ವಿಗಳೆಂದು ಹೇಳಿರುವುದಲ್ಲ, ಆತಂಕವೇನೋ ಸ್ಪಷ್ಟ ಮಾಡಿಲ್ಲ. ಲಿಂಗಿಬ್ರಾಹ್ಮಣರಲ್ಲಿಯೂ, ಅಲಿಂಗಿಬ್ರಾಹ್ಮಣರಲ್ಲಿಯೂ ತಪಸ್ವಿಗಳಿರಬಹುದಷ್ಟೆ, ಧರ್ಮರಾಯನು ಧಾನವನ್ನು ಲಿಂಗಿಬ್ರಾಹ್ಮಣನಿಗೆ ಕೊಡಬೇಕೋ ಅಥವಾ ಅಲಿಂಗಿಬ್ರಾಹ್ಮಣನಿಗೆ ಕೊಡಬೇಕೋ ಎಂದು ಪ್ರಶ್ನಿಸಿದನು. ಸ್ವವೃತ್ತಿಯಲ್ಲಿ ಅಭಿಪನ್ನವಾಗಿರುವ ಲಿಂಗಿಬ್ರಾಹ್ಮಣನಾಗಲಿ, ಅಲಿಂಗಿಬ್ರಾಹ್ಮಣನಾಗಲಿ ದಾನ ಮಾಡಬಹುದೆಂದು ಭೀಷ್ಮನು ಉತ್ತರಲಿಂಗಿಗಳನ್ನು ಇತರರನ್ನು ಈ ಎರಡನೇ ಶ್ಲೋಕದಲ್ಲಿ ತಪಸ್ವಿಗಳೆಂದು ಹೇಳಿದೆಯಾದುದರಿಂದ 'ಲಿಂಗಿ' ಎಂಬ ಶಬ್ದವು ಲಿಂಗಾಧಾರಿಗಳನ್ನೂ ಉದ್ದೇಶಿಸಿ ಪ್ರಯೋಗವಾಗಿದೆಯೆಂದು, ಹೇಳುವುದಕ್ಕಾಗುವುದಿಲ್ಲ ಎಂದು ನರಸಿಂಹಚಾರ್ಯರು ಹೇಳುವ ಮಾತು ಸಮಂಜಸವಲ್ಲ. ಸ್ವವೃತ್ತಿ ನಿರತರಾದ ಲಿಂಗಿಗಳೂ ಅಲಿಂಗಿಗಳೂ ತಪಸ್ವಿಗಳಾದ್ದರಿಂದ ದಾನಾರ್ಹರೆಂದು ಅದರ ಭಾವ 'ಲಿಂಗಿ' ಎಂಬ ಪದಕ್ಕೆ 'ಶಬ್ದಕಲ್ಪದ್ರುಮ'ದಲ್ಲಿ 'ಲಿಂಗಾಅಸ್ಯ ಅಸ್ತಿಇತಿ' ಎಂದಿದೆ ಅಂದರೆ ಲಿಂಗವುಳ್ಳವನು ಲಿಂಗಿ ಎಂದಾಗುವುದೆಂದು ಹೇಳಿದೆ ಎಂದ ಮೇಲೆ ಲಿಂಗಿ ಎಂದರೆ ಲಿಂಗಾಧಾರಿಯಂತ ಹೇಳಲು ತೊಡರೇನು ಇರದು. ಅಲ್ಲದೆ ಶಂಕರ ದಿಗ್ವಜಯದಲ್ಲಿ "ಲಲಾಟೆ ಭುಜದ್ವಯೋ ಹೃನ್ನಾಭಿಷು ಲಿಂಗಾ ಧಾರಣಃ ಪಶುಪತಾ:" ಎಂದಿರುವುದರಿಂದ ಪಾಶುಪತವ್ರತವೆಂದರೆ ವೀರಶೈವ ವ್ರತವೆಂಬುದು ಸ್ಪಷ್ಟ.

ವೀರಶೈವದ ಉಗಮವು ಹನ್ನೆರಡನೆ ಶತಮಾನದಲ್ಲಿ ಆಯಿತೆನ್ನುವವಾದವು ಸರಿಯಲ್ಲವೆನ್ನುವುದನ್ನು ಸಾಕಷ್ಟು ಆಧಾರಗಳಿಂದ ಸಿದ್ದಾಂತ ಮಾಡಲಾಗಿದೆ. ವೀರಶೈವದ ಉಗಮವು ಬಹಳ ಪ್ರಾಚೀನ ಕಾಲದಲ್ಲೇ ಆಯಿತೆಂಬುದನ್ನು ಅಲ್ಲಗಳೆಯುವಂತಿಲ್ಲ.

ಬಸವಾದಿ ಶರಣರ ಕಾಲಘಟ್ಟದಲ್ಲಿ ರಚನೆಯಾಗಿರುವ ಕನ್ನಡ ಉಪನಿಷತ್ತುಗಳೆಂದು ಹೆಸರಾಗಿರುವ ಶಿವಶರಣರ ವಚನಗಳಲ್ಲಿ ಈ ಮೊದಲ ನಾಲ್ವರು ಚತುರಾಚಾರ್ಯರ ಹೆಸರು ಪ್ರಸ್ತಾಪವಾಗಿದೆ. ಐದನೆ ಆಚಾರ್ಯರಾದ ವಿಶ್ವರಾಧ್ಯರ ಪ್ರಸ್ತಾಪವಾಗಲಿ, ಉಲ್ಲೇಖವಾಗಲಿ ಕಂಡುಬರುವುದಿಲ್ಲ. "ನಮ್ಮ ಅನೇಕ ಶರಣ ವಚನಕಾರರಾದ ಹಾವಿನಹಾಳಕಲ್ಲಯ್ಯ, ಮೆರೆಮಿಂಡಯ್ಯ ಮತ್ತು ಆದಯ್ಯನವರೇ ಮೊದಲಾದ ವಚನಕಾರರು ಚತುರಾಚಾರ್ಯರನ್ನು ಸ್ಮರಿಸಿದ್ದಾರೆ. ನಂತರದ ದಿನಗಳಲ್ಲಿ ಸುಮಾರು ೧೬ನೇ ಶತಮಾನದಲ್ಲಿ ಬರುವ ತೋಂಟದಸಿದ್ದಲಿಂಗೇಶ್ವರರ ವಚನಗಳಲ್ಲಿ ಚತುರಾಚಾರ್ಯರ ಪ್ರಸ್ತಾವಾಗಿರುವುದು ಕಂಡು ಬರುತ್ತದೆ. ಹನ್ನೆರಡನೆ ಶತಮಾನಕ್ಕಿಂತ ಮೊದಲು ಚತುರಾಚಾರ್ಯರೆ ಇದ್ದು ನಂತರದ ದಿನಗಳಲ್ಲಿ ಹದಿನೈದು ಹದಿನಾರನೇ ಶತಮಾನ ವೇಳೆಗೆ ಐದನೆಯ ಆಚಾರ್ಯರಾದ ವಿಶ್ವಾರಾಧ್ಯರ ಉಗಮವಾಗಿರಬೇಕು ಎಂಬ ಮಾತನ್ನು ಡಾ. ಚಿದಾನಂದ ಮೂರ್ತಿಯವರು ತಿಳಿಸಿದ್ದಾರೆ."[೨೫] ಎಲ್.ಕೆ. ಅನಂತಕೃಷ್ಣ ಅಯ್ಯರ್, ಸಿ.ಪಿ.ಬ್ರೌನ್ ಇವರೆ ಮೊದಲಾದ ವಿದ್ವಾಂಸರೂ ಕೂಡ ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ ಮತ್ತು ಪಂಡಿತರಾಧ್ಯ ಈ ನಾಲ್ವರೇ (ಬಸವನಿಗಿಂತ ಪೂರ್ವದ) ವೀರಶೈವ ಧರ್ಮದ ಮೊದಲ ಪೀಠಾಚಾರ್ಯರೆಂದು ಹೇಳಿರುವುದನ್ನ ನಾವಿಲ್ಲಿ ಗಮನಿಸಬಹುದು.

**ಚತುರಾಚಾರ್ಯರು** : ಮೊದಲಿಗೆ ಇದ್ದವರು ಚತುರಾಚಾರ್ಯರು ಮಾತ್ರ ಐದನೆಯ ಆಚಾರ್ಯರು ಕಾಲಾನಂತರದಲ್ಲಿ ಸೇರ್ಪಡೆಯಾದವರೆಂಬ ನಂಬಿಕೆಯಿದೆ. ಈ ಮಾತಿಗೆ ಪೂರಕವಾಗಿ ಅನೇಕ ದಾಖಲೆ, ಆಧಾರಗಳಿವೆ. ಈ ಪಂಚಾಚಾರ್ಯರ ಪ್ರಾಚೀನತೆಯನ್ನು ಕುರಿತು ಅನೇಕ ಶಿವಾಗಮಗಳಲ್ಲಿ ಬಂದಿರುವ ವಿಚಾರಗಳನ್ನು ಈ ಮೊದಲೆ ನಾವು ಗಮನಿಸಿದ್ದೇವೆ. ಇಂಥ ಶಿವಾಗಮಗಳಲ್ಲಿ ಹಿನ್ನೆಲೆಯಾಗಿಟ್ಟುಕೊಂಡು ನಿಜಗುಣಶಿವಯೋಗಿಗಳ 'ವಿವೇಕ ಚಿಂತಾಮಣಿ' ರಚನೆಯಾಗಿದೆ ಎಂಬುದು ಹಿರಿಯ ಸಂಶೋಧಕರ ಅಭಿಪ್ರಾಯ. ಈ ಗ್ರಂಥ ಆಗಮಶಾಸ್ತ್ರದ ಕನ್ನಡದ ಜ್ಞಾನಕೋಶವಿದ್ದಂತೆ. ಶೈವಾಗಮನಗಳಲ್ಲಿ ಅಸಂಖ್ಯಾತ ವಿಷಯಗಳನ್ನು ಸಂಗ್ರಹವಾಗಿ ಕನ್ನಡದಲ್ಲೆ ರಚನೆಯಾಗಿರುವ ಅಪೂರ್ವ ಕೃತಿಯಿದು. ಇದರಲ್ಲೆ ಶಿವಯೋಗಿಗಳು ಚತುರಾಚಾರ್ಯರಾದ ರೇವಣ್ಣಸಿದ್ದ, ಮರುಳಸಿದ್ದ, ಏಕೋರಾಮ ಮತ್ತು ಪಂಡಿತರಾಧ್ಯರನ್ನು ಮಾತ್ರ ಉಲ್ಲೇಖಿಸಿದ್ದಾರೆ. ಈ

---

೨೫. ಡಾ. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪು.೮೯

ಗ್ರಂಥದಲ್ಲಿ ಐದನೆಯ ಆಚಾರ್ಯರಾದ ವಿಶ್ವಾರಾಧ್ಯರ ಪ್ರಸ್ತಾಪ ಎಲ್ಲೂ ಮಾಡಿಲ್ಲದಿರುವುದು ಕಂಡುಬರುತ್ತದೆ. ಅದೇ ರೀತಿ ಕನ್ನಡ ಪ್ರಸಿದ್ಧ ಕವಿ ವಿರೂಪಾಕ್ಷ ಪಂಡಿತನ 'ಚನ್ನಬಸವ ಪುರಾಣ' ಮತ್ತು ಕೆಳದಿಯ ಹಿರಿಯ ಬಸವಪ್ಪನಾಯಕನ 'ಶಿವರತ್ನಾಕರ' ದಲ್ಲಿ 'ವೀರಶೈವ ಗುರುಪರಂಪರೆ'ಯ ಎಂಟನೆಯ ಪಟಲದಲ್ಲು ಮತ್ತು ಪ್ರಾರಂಭದಲ್ಲಿ ಹುಟ್ಟಿರಬಹುದಾದ ಕೆಲವು 'ಮಠಸ್ಥಲ'ಗಳಲ್ಲೂ ಚತುರಾಚಾರ್ಯರ ಪ್ರಸ್ತಾವವಿದೆಯೋ, ಹೊರತು ಪಂಚಾಚಾರ್ಯರ ವಿಷಯದಲ್ಲಿ ಮೇಲಾಗಿ ಚತುರಾಚಾರ್ಯರನ್ನು ಪ್ರಧಾನವಾಗಿಸಿಕೊಂಡು ರಚಿತವಾದ ಸಂಪಾದನೆಯು, ಪರ್ವತೇಶನ 'ಚತುರಾಚಾರ್ಯರಚಾರಿತ್ರ'ವೂ ಸಹ ಪಂಚಾಚಾರ್ಯರನ್ನು ಸ್ಮರಿಸಿದೆಯಾದರೂ, ಮೊದಲ ನಾಲ್ವರೂ ಆಚಾರ್ಯರನ್ನು ಮಾತ್ರ ವರ್ಣಿಸುತ್ತದೆ. ಈ ರೀತಿಯಾಗಿ ಒಂದು ಕಡೆ ಸಂಪ್ರಾದಾಯವಾಗಿ ಪಂಚಾಚಾರ್ಯ ಪರಂಪರೆಯು ನಡೆದು ಬಂದಿದೆಯಾದರೂ, ಮತ್ತೊಂದು ಕಡೆ ಕನ್ನಡ ಕವಿಗಳು ಮಾತ್ರ ಚತುರಾಚಾರ್ಯರ ಪುರಾಣವನ್ನು ಬರೆದಿರುವುದು ವಿಶೇಷವಾಗಿದೆ.

**ಪಂಚಾಚಾರ್ಯರು:–**"ಪಾಶುಪತಾಗಮ, ವೀರಾಗಮ, ಸ್ವಯಂಭುವಾಗಮ ಮತ್ತು ಸುಪ್ರಬೇಧಾಗಮ ಇವೇ ಮೊದಲಾದ ೨೮ ಶಿವಾಗಮಗಳಲ್ಲಿ ವೀರಶೈವ ಪೀಠಾಚಾರ್ಯರನ್ನು ಕುರಿತು ಹೇಳುವಾಗ ಮೊದಲನೇ ಪಾಶುಪತಾಗಮದಲ್ಲಿ ರೇವಣ್ಣಸಿದ್ದ, ಮರುಳಸಿದ್ದ, ಏಕೋರಾಮ ಮತ್ತು ವಿಶ್ವಾರಾಧ್ಯ ಎಂದು ಗುರುತಿಸಲಾಗಿದೆ. ಸುಪ್ರಬೇದಾಗಮದಲ್ಲಿ ಐವರನ್ನು ಆರಾಧ್ಯರೆಂದು ಸಂಭೋದಿಸಲಾಗಿದೆ. ಕೆಲವೆಡೆ ಈ ಆಗಮಗಳಲ್ಲಿ ಈ ಪಂಚಾಚಾರ್ಯರನ್ನು 'ಮಹಂತರು' ಎಂದು ಕರೆಯಲಾಗಿದೆ."[೨೬] ಇದಲ್ಲದೆ ಮತ್ತೊಂದು ಶೈವಾಗಮ ಕೃತಿಯಾದ ಸ್ವಯಂಭುವಾಗಮದಲ್ಲಿ ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದ ಪಂಚಾಚಾರ್ಯರ ಪ್ರಸ್ತಾಪ ಮಾಡಲಾಗಿದೆ. ಅಲ್ಲದೆ ಈ ಶಿವಾಗಮಗಳಲ್ಲಿ ಕಲ್ಯಾಣದ ಪ್ರಭುಸ್ವಾಮಿಯು ಮೇಲಿನ ಆಚಾರ್ಯರಿಗೆ ಪೂಜ್ಯರೆಂದು ಹೇಳಿರುವುದು ಕಂಡುಬರುತ್ತದೆ. ಈವಿಚಾರಕ್ಕೆ ಪೂರಕವಾಗಿ ಅಚಿಂತ್ಯಾಗಮದಲ್ಲಿ ರೇಣುಕಾದಿ ಆಚಾರ್ಯರು ಮೊದಲು ಹುಟ್ಟಿದವರಾದರೂ ಧರ್ಮಭೋಧನೆಯಲ್ಲಿ ಶಿಷ್ಯಶಾಪಕ್ಕಂಜಿ ಪರಶಿವನಲ್ಲಿ ಮೊರೆಹೋದಾಗ ಪರಶಿವನು ತನ್ನ ಶಿಖಾಮಧ್ಯದಲ್ಲಿದ್ದ ನಿರಂಜನ ಜಂಗಮನನ್ನು ಕಳುಹಿಸಿದನು ಎಂಬ ವಿಚಾರ ಕಂಡುಬರುತ್ತದೆ. ಈ ನಿರಂಜನ ಜಂಗಮನೆ ಮೊದಲ ಶೂನ್ಯಪೀಠಾಧಿಪತಿ ಅಲ್ಲಮಪ್ರಭು ಎಂಬುದು ನಂಬಿಕೆಯಾಗಿದೆ. ಹೀಗೆ ಆಗಾಮೋಕ್ತವಾಗಿ ಪರಮೇಶ್ವರನ ಅಪ್ಪಣೆಯ ಮೇರೆಗೆ ನಾಲ್ಕು ಯುಗಗಳಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ಭೂಲೋಕದಲ್ಲಿ ಉದ್ಭವಿಸಿದರು. ಈ ಪಂಚಾಚಾರ್ಯರು ವೀರಶೈವ ಧರ್ಮವನ್ನು ಉದ್ಭವಿಸಿದರು. ಇವರು ಕಲಿಯುಗದಲ್ಲಿ ಶಿವನ ಐದು ಮುಖಗಳಿಂದ ಒಬ್ಬೊಬ್ಬರು ಜನಿಸಿದರು ಎಂದು ಸುಪ್ರಭೇದಾಗಮದಲ್ಲಿ ಈ ರೀತಿ ವರ್ಣಿಸಲಾಗಿದೆ.

---

೨೬. ವಿವೇಕ ಚಿಂತಾಮಣಿ ಸಂ.ಜಿ.ಎಂ ಉಮಾಪತಿ ಶಾಸ್ತ್ರಿ ದ್ವಿತೀಯ ಪರಿಚ್ಛೇದ ಪುಟ –೨೨

| | ಶಿವನ ಪಂಚ ಮುಖಗಳು | ಜನ್ಮಭೂಮಿ | ಪಂಚಾಚಾರ್ಯರು | ಸ್ಥಳಗಳು | ಪೀಠಗಳು |
|---|---|---|---|---|---|
| ೧ | ಸದ್ಯೋಜಾತ | ಕೊಲ್ಲಿಪಾಕಿಯ ಸೋಮನಾಥ ಲಿಂಗ | ರೇವಣಾಧ್ಯರು | ರಂಭಾಪುರಿ | ವೀರಸಿಂಹಾಸನ |
| ೨ | ವಾಮದೇವ | ವಟ ಕ್ಷೇತ್ರದ ಸಿದ್ದಲಿಂಗ | ಮರುಳಾರಾಧ್ಯರು | ಉಜ್ಜಯಿನಿ | ಧರ್ಮಸಿಂಹಾಸನ |
| ೩ | ಅಘೋರ | ದ್ರಾಕ್ಷಾರಾಮ ಕ್ಷೇತ್ರದ ರಾಮನಾಥ ಲಿಂಗ | ಏಕೋರಾಮಾರಾಧ್ಯರು | ಹಿಮವತ್ಕೇಧಾರ | ವೈರಾಗ್ಯ ಸಿಂಹಾಸನ |
| ೪ | ತತ್ಪುರುಷ | ಸುಧಾಕುಂಡ ಕ್ಷೇತ್ರದ ಮಲ್ಲಿಕಾರ್ಜುನ ಲಿಂಗ | ಪಂಡಿತಾರಾಧ್ಯರು | ಶ್ರೀಶೈಲ (ಸೂರ್ಯ) | ದೇವಸಿಂಹಾಸನ |
| ೫ | ಈಶಾನ | ಕಾಶಿಕ್ಷೇತ್ರದ ಶ್ರೀ ವಿಶ್ವಾನಾಥ ಲಿಂಗ | ವಿಶ್ವಾರಾಧ್ಯರು | ಕಾಶಿ | ಜ್ಞಾನ ಸಿಂಹಾಸನ |

ಈ ವಿಚಾರದ ಬಗ್ಗೆ ವಿಭಿನ್ನ ಹೇಳಿಕೆಗಳನ್ನು ನಾವು ಗಮನಿಸಬಹುದು. ಕೆಲವಡೆ ರೇವಣಸಿದ್ದರು ಮರಳಸಿದ್ದರು ಎಂದು ಉದ್ಗರಿಸಿದರೆ ಕೆಲವಡೆ ಆರಾಧ್ಯ ಎಂಬ ಪದ ಬಳಕೆಯಲ್ಲಿದೆ. ಆದರೆ ಜಗದಾಚಾರ್ಯರು ದೇಶದ ಐದು ದಿಕ್ಕುಗಳಲ್ಲಿ ಸ್ಥಾಪಿಸಿದ ಪಂಚಮಹಾಪೀಠಗಳೇ ಈ ಮೇಲ್ಕಂಡವು ಎಂದು ಕೆಲವಡೆ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಂದರೆ ಒಟ್ಟಾರೆ ಇಂದಿಗೂ ಬೆಳೆಯುತ್ತಿರುವ ಬಾಳೆಹೊನ್ನೂರುರಂಬಾಪುರಿ, ಉಜ್ಜಯಿನಿಯ(ಮೂಲದಲ್ಲಿ ಮೊದಲು ಮಧ್ಯಪ್ರದೇಶದ ಉಜ್ಜಯಿನಿ ನಂತರದಲ್ಲಿ ಕರ್ನಾಟಕದ ಬಳ್ಳಾರಿಯಹತ್ತಿರದ ಉಜ್ಜಯಿನಿ) ಕೇದರಾನಾಥ, ಶ್ರೀಶೈಲ ಹಾಗೂ ಕಾಶಿಗಳಲ್ಲಿರುವ ಗುರು ಪೀಠಗಳಿಗೆ ಕಾರಣ ಕರ್ತೃಗಳೆಂದು ತಿಳಿದು ಬರುತ್ತದೆ. ಈ ಮೇಲ್ಕಂಡ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆ ನಡೆಸಿದೆ. ``E.THEERSTON ರವರು ತಮ್ಮ ಗ್ರಂಥವಾದ Coster and Tribes of Southern India Voll-IV ಪುಟ–೨೬೪–೨೬೫ ರಲ್ಲಿ ಈ ರೀತಿ ಹೇಳಿದ್ದಾರೆ. ಇವರ ಪ್ರಕಾರ ಪಂಚಾಚಾರ್ಯರೈವರು ಮಹಾಗೋತ್ರಕರ್ತರು. ಭರತಖಂಡದ ಬೇರೆ ಬೇರೆ ಭಾಗಗಳಲ್ಲಿದ್ದ ಐದು ದೊಡ್ಡ ದೊಡ್ಡ ಮಠಗಳೆಂದು, ಇವುಗಳನ್ನು ಸಿಂಹಾಸನದ ಮಠಗಳೆಂದು ಕರೆಯುತ್ತಾರೆ ಎಂದಿದ್ದಾರೆ. ಜಿ.ಆರ್ ಜೋಯಿಷ್‌ರವರು ಕೂಡ ಈ ದಿಕ್ಕಿನಲ್ಲಿ ತಮ್ಮ ಉಕ್ತಿಯನ್ನು ತಮ್ಮ ಕೃತಿಯಿಂದ Politics Philosophy and Fhorthy .P 16೦ ರಲ್ಲಿ ಮತ್ತು R.G. Bhandarkar ರವರು Vaisnavism Saivism and Miner Religious System P–೧೩೨ದಲ್ಲಿ ಈ ಐದು ಪಂಚಪೀಠಗಳೇ ಪ್ರಾಚೀನ ವೀರಶೈವ ಮಠಗಳೆಂದು ತಿಳಿಸುತ್ತಾರೆ." ವೀರಶೈವರ ದೀಕ್ಷಾಕ್ರಮವನ್ನು ಪ್ರಸ್ತಾಪ ಮಾಡುವಾಗ ಮಧ್ಯಮಕಲಶವು ಗುರುಸ್ಥಾನದ ಪ್ರಾಚೀನಆಚಾರ್ಯರ ಪ್ರತಿನಿಧಿಗಳೆನಿಸಿದ ವಿಶ್ವಾರಾಧ್ಯರೆಂದು, ಮಿಕ್ಕ ನಾಲ್ಕು ಕಲಶಗಳು ರೇವಣಸಿದ್ದ, ಮರುಳಸಿದ್ದ, ಏಕೋರಾಮ ಮತ್ತು ಪಂಡಿತಾರಾಧ್ಯ ಎಂಬ ನಾಲ್ವರು ಆಚಾರ್ಯರಿಗೆ

ಸಂಬಂಧಪಟ್ಟಿದೆ. ಈ ಐದು ಕಲಶಗಳು ಶಿವನ ಸದ್ಯೋಜಾತಕ ಪಂಚಕಲಶಗಳಾಗಿ ಪ್ರತಿಸ್ಥಾಪಿಸಲ್ಪಟ್ಟಿದೆ. ಈ ಆಚಾರ್ಯರು ಶಿವನ ಪಂಚಮುಖಗಳಿಂದ ಅವತರಿಸಿದವರಾಗಿರುತ್ತಾರೆ ಎಂಬ ವಿವರಣೆ ನೀಡಿರುತ್ತಾರೆ. ಈ ಎಲ್ಲಾ ಸಂಪ್ರದಾಯ ವಿವರಣೆಗಳೇ ಹೊರತು, ಐತಿಹಾಸಿಕ ಸ್ಪಷ್ಟತೆಗೆ, ನಿಖರತೆಯ ಹತ್ತಿರಕ್ಕು ಬರಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ನಿರ್ಧಿಷ್ಟ ಅಭಿಪ್ರಾಯ ರೂಪಿಸುವಲ್ಲಿ ವಿಫಲವಾಗಿರುವುದನ್ನ ನಾವು ಗಮನಿಸಬಹುದು.

ಒಂದೆಡೆ ಶ್ರೀ ಜಚನಿಯವರು ಸಿದ್ಧಾಂತಶಿಖಾಮಣಿ ಎಂಬುದು ಸಂಸ್ಕೃತ ಗ್ರಂಥವೆಂದು ಇದರಲ್ಲಿ ಬಸವಯುಗದ ರೇವಣಸಿದ್ದರೇ ಬೇರೆ, ಆದಿಜಗದ್ಗುರು ರೇಣುಕಾಚಾರ್ಯರೆ ಬೇರೆ ಎಂಬ ನಂಬಿಕೆ ಇದೆ. ಆದಿರೇಣುಕರು ರಾಮಾಯಣ ಕಾಲದಲ್ಲಿ ಅಗಸ್ತ್ಯಮುನಿಗೆ ವೀರಶೈವ ಷಟ್‌ಸ್ಥಲ ಸಿದ್ಧಾಂತವನ್ನುಮತ್ತು ನೊರೊಂದು ಸ್ಥಲಗಳನ್ನು ಬೋಧಿಸಿದರೆಂದು. ಈ ಬೋಧನೆಗಳನ್ನು ಒಳಗೊಂಡಿರುವ ಗ್ರಂಥ ಎಂದು ಹೇಳಿದ್ದಾರೆ. ಆದರೆ ನಮ್ಮ ಅನೇಕ ವಿದ್ವಾಂಸರಾದ ನಂದಿಮಠ, ಕಲ್ಬುರ್ಗಿಯವರು ಮತು ಡಾ.ಎಂ.ಚಿದಾನಂದಮೂರ್ತಿಯವರ ಅಭಿಪ್ರಾಯದಂತೆ ಪೀಠಾಚಾರ್ಯರಲ್ಲಿ ಪ್ರಥಮ ಗುರುವಾದ ರೇವಣಸಿದ್ದರೇ, ರೇಣುಕಾಚಾರ್ಯ ಎಂದು ರೇಣುಕ, ರೇವಣ ಇಬ್ಬರು ಬೇರೆ ಬೇರೆ ಅಲ್ಲವೆಂದು ಹಲವಾರು ಆಧಾರಗಳೊಂದಿಗೆ ವಿವರಿಸಿದ್ದಾರೆ (ವಾದಿಸಿದ್ದಾರೆ). ಅಷ್ಟೇ ಅಲ್ಲದೆ 'ಸಿದ್ಧಾಂತ ಶಿಖಾಮಣಿ'ಯಲ್ಲೂ ಸಹ ರೇಣುಕರನ್ನು ರೇವಣಸಿದ್ದ, ರೇವಣ್ಣ ಸಿದ್ದೇಶ್ವರ ಎಂದು ಕರೆದಿರುವುದು ಕಂಡಬರುತ್ತದೆ. ರೇವಣ್ಣಸಿದ್ಧ ಎಂಬುದು ಕೈಲಾಸದಲ್ಲಿ ರೇಣುಕ ಗಣೇಶ್ವರನಾಗಿದ್ದವನು, ಭೂಮಿಗೆ ಬಂದು ಕೊಲ್ಲಿಪಾಕಿಯಲ್ಲಿ ಜನಿಸಿದಾಗ ಕಟ್ಟಿದ ಹೆಸರಾಗಿದೆ. ಕವಿಗಳ, ಸಾಹಿತಿಗಳ ದೃಷ್ಟಿಯಲ್ಲಿ ಕೈಲಾಸದರೇಣುಕರೇ ಭೂಲೋಕದಲ್ಲಿ ರೇವಣ ಸಿದ್ಧಾರಾಗಿದ್ದಾರೆ. ರೇವಣಸಿದ್ದರು ಬಸವೇಶ್ವರನ ನಂತರ ಅಥವಾ ಅವರ ಕಾಲಘಟ್ಟದಲ್ಲಿ ಬದುಕಿದ್ದು ಬಸವಣ್ಣನ ನಂತರ ವೀರಶೈವ ಧರ್ಮವು ಅವನತಿ ಸ್ಥಿತಿಯಲ್ಲಿದ್ದಾಗ, ಅದರ ಏಳಿಗೆಗಾಗಿ ಈಧರ್ಮದ ಪುನರುಜ್ಜೀವನಕ್ಕಾಗಿ ಕಾಶಿಯ, ವಿಶ್ವಾರಾಧ್ಯರನ್ನು ತಮ್ಮ ಗುರುಗಳನ್ನಾಗಿ ಮಾಡಿಕೊಂಡರೆಂದು 'ಪಂಚಬ್ರಹ್ಮೋದಯಬಾಷ್ಯ'ದಲ್ಲಿ ತಿಳಿಸಿದೆ. ೧೨ನೇ ಶತಮಾನದಲ್ಲಿ ಬಸವಾದಿ ಶರಣರ ಸಮಕಾಲಿನರಾಗಿದ್ದ ರೇವಣಸಿದ್ದ ಮತ್ತು ಇವರ ಮಗ ರುದ್ರಮುನಿಗಳೇ ಪಂಚಪೀಠಗಳ ನಿರ್ಮಾಣಕ್ಕೆ ಕಾರಣರೆಂದು ಕೆಲವು 'ಮಠಸ್ಥಲ'ಗಳ ಮೂಲಕ ಉಲ್ಲೇಖಿಸಿ ಅನೇಕ ವಿದ್ವಾಂಸರು ಅಭಿಪ್ರಾಯ ಮಂಡಿಸುತ್ತಾರೆ. ಇದಕ್ಕೆ ಪುಷ್ಟಿ ಎಂಬಂತೆ ಬಿ.ಶಿವಮೂರ್ತಿಗಳ ವಾದವೂ ಇದೆ ಆಗಿದೆ.

"ವೀರಶೈವ ಧರ್ಮದ ಮೂಲ ನಿಯಮಗಳನ್ನು ವಿದಿಸುವಲ್ಲಿ ಮೊಟ್ಟಮೊದಲ ಗುರುವಾಗಿದ್ದವನು ಬಸವಣ್ಣನೇ ಎಂಬುದು ನಿರ್ವಿವಾದ ಬಸವಣ್ಣನಿಂದ ನಿರ್ಮಾಣವಾದ ಈ 'ಅನುಭವ ಮಂಟಪ'ದ ಮೂಲ ಪೀಠವೇ 'ಶೂನ್ಯ ಪೀಠ' ಅಥವಾ ಶೂನ್ಯಸಿಂಹಾಸನ. ಈ ಶೂನ್ಯ ಪೀಠವೇ ವೀರಶೈವ ಮಠಗಳಿಗೆಲ್ಲ ಮೂಲ ಪ್ರೇರಣೆ ಎಂದು ಹೇಳುವುದುಂಟು. 'ಶೂನ್ಯ' ಎಂದರೆ ಸೊನ್ನೆ ಎಂದರ್ಥ. ಅಂದರೆ ಶೂನ್ಯ ಎಂದರೆ ಆಕಾರವಿಲ್ಲದ್ದು ನಿರವಯ, ಬಯಲು, ಪೂರ್ಣ ಎಂದರ್ಥದಲ್ಲಿ ನಾವು ಅರ್ಥೈಸಬಹುದು."[೨೭] ಈ ಪದದರ್ಥವನ್ನು ವೀರಶೈವ ಧರ್ಮದ ಸಾಹಿತ್ಯ ರೂಪಕದಲ್ಲಿ ಶೂನ್ಯ ಎಂಬ ಮಾತನ್ನು ಅಷ್ಠಾವರಣಗಳ (ಗುರು–ಲಿಂಗ–ಜಂಗಮ–ಪಾದೋದಕ–ಪ್ರಸಾದ–ವಿಭೂತಿ–ರುದ್ರಾಕ್ಷಿ ಮತ್ತು ಮಂತ್ರ) ಬೆಲೆಯನ್ನರಿತು ಷಟ್‌ಸ್ಥಲ ಮಾರ್ಗವಾಗಿ ಉಪಾಸನೆ ಮಾಡಿದ ಸಾಧಕನಿಗೆ ಸಾಧನೆಯ ಅಂತ್ಯದಲ್ಲಿ ಒದಗುವ 'ಬ್ರಹ್ಮಸಾಕ್ಷಾತ್ಕಾರ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಕನ್ನಡ ನಿಘಂಟುವಿನಲ್ಲಿ 'ಶೂನ್ಯ' ಎಂದರೆ ದಿವ್ಯಾ ಸಾಕ್ಷಾತ್ಕಾರ ಪಡೆಯುವುದು, ಮೋಕ್ಷ, ಆಕಾಶ, ಬಿಂದು, ಅನುಸ್ವರ ಇಲ್ಲದ, ಅರ್ಥಹೀನವಾದ ಎಂಬ ನಾನಾರ್ಥಗಳಿವೆ. ಅಷ್ಟೆ ಅಲ್ಲದೆ ಸೃಷ್ಟಿ ಪೂರ್ವದ ಪರವಸ್ತುವನ್ನು ನಾವು ಶೂನ್ಯವೆಂದೇ ಕರೆಯುವುದು ವಾಡಿಕೆ. ಆ ಶೂನ್ಯವೇ ಬಯಲು, ಶೂನ್ಯ ಪೀಠವು ಶಿವಧರ್ಮ ತತ್ವಗಳನ್ನು ತಿಳಿಸುವ, ಬೋಧಿಸುವುದೇ ಆಗಿದೆ. ಇದು ಕೇವಲ ಭೌತಿಕವಾದ ಪೀಠವಲ್ಲ, ಆಧ್ಯಾತ್ಮ ಚಿಂತನೆಯ ಮಹೋನ್ನತ ಪದವಿಯು ಹೌದು. ಇಂತಹ ಮಹೋನ್ನತ ಪದವಿಯನ್ನು ಏರಿದ ಮೊಟ್ಟ ಮೊದಲ ಶರಣ ವಿದ್ವಾಂಸ, ಐತಿಹಾಸಿಕ ವ್ಯಕ್ತಿಯೇ ಅಲ್ಲಮಪ್ರಭು ೧೨ನೇ ಶತಮಾನದ ಅನುಭವ ಮಂಟಪದಲ್ಲಿ ಅಲ್ಲಮನ ಅಧ್ಯಕ್ಷತೆಯಲ್ಲಿ ಅಸಂಖ್ಯಾತ ಶಿವ ಶರಣರು ಸೇರಿ ಧಾರ್ಮಿಕ ಗೋಷ್ಠಿಗಳನ್ನು ನಡೆಸುತ್ತಿದ್ದಂತೆ. ಈ ಪೀಠವು ಕೇವಲ ಶರಣಶರಣೆಯರ ಧಾರ್ಮಿಕ ಭಾವನೆಗಳನ್ನು ಹಂಚಿಕೊಳ್ಳುವ ಕೇಂದ್ರವಾಗಿರದೆ ಧರ್ಮ, ಜಾತಿ–ಮತ, ಲಿಂಗಬೇದ ಹೋಗಲಾಡಿಸಿ ಅನುಭವದ ಪ್ರೌಢಪಾಂಡಿತ್ಯದಿಂದ ಕೂಡಿದಂತಹ ಸಂಶೋಧನಾ ಕೇಂದ್ರವಾಗಿತ್ತೆಂದು ಆರ್.ಸಿ.ಮಜುಂದಾರ್ ಅಭಿಪ್ರಾಯಪಡುತ್ತಾರೆ.

ಶೂನ್ಯ ಪೀಠದ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದೇ 'ಶೂನ್ಯ ಸಂಪಾದನೆ' ಕೃತಿಯ ಆಧಾರದ ಮೇಲೆ ಶೂನ್ಯ ಸಿಂಹಾಸನದಲ್ಲಿ ನಡೆದಂತಹ ಶರಣರ ಅನುಭವ ಮತ್ತು ಅನುಭಾವದ ಚಿಂತನೆಗಳನ್ನು ಒಳಗೊಂಡಿರುವ ಗ್ರಂಥವೇ ಶೂನ್ಯ ಸಂಪಾದನೆ. ಈ ಗ್ರಂಥದ ಮೂಲ ವ್ಯಕ್ತಿ 'ಅಲ್ಲಮಪ್ರಭು' ಶಿವಶರಣರ ವಚನಗಳ ಆಶಯವನ್ನು ಅಭಿವ್ಯಕ್ತ ಪಡಿಸುವುದರಿಂದ ಈ ಕೃತಿಯನ್ನು

---

೨೭. ಡಾ. ಎಂ ಅಣ್ಣಾಜಪ್ಪ ಶ್ರೀ ಅನಾದಿ ವೀರಶೈವ ಸಂಗ್ರಹ ಮುನ್ನುಡಿ ಪುಟ – ೦೬

"ವೀರಶೈವ ಧರ್ಮದ ಕೈಪಿಡಿ" ಎನ್ನಬಹುದು. ವಚನಗಳನ್ನು ಸಂಭಾಷಣೆಯ ಮೂಲಕ ಹೇಳಾಲಾಗಿರುವುದು ಕಂಡುಬರುತ್ತದೆ. "ಎಂ.ಆರ್.ಶ್ರೀಕಂಠಯ್ಯನವರ ಈ ಕೃತಿಯನ್ನು ಕುರಿತು ಶೂನ್ಯ ಸಂಪಾದನೆಯು ಕೇವಲ ಒಂದು ವಚನದ ಸಂಕಲನೆಯಲ್ಲ, ಶಿವಾನುಭವದ ವಚನಗಳ ಸಂಕಲನ ಎಂದಿರುವ ಮಾತು ಅರ್ಥಪೂರ್ಣವಾಗಿದೆ. ಮುಂದೆ ಬಂದಂಥ ಅನೇಕ ಶೈವ ಕವಿಗಳು, ವೀರಶೈವ ಚರಿತ್ರಕಾರರು ಈ ಗ್ರಂಥದ ಬಗೆಗೆ ತಮ್ಮದೆ ಆದಂತಹ ವಿಭಿನ್ನ ಹೇಳಿಕೆಗಳನ್ನು ಮಂಡಿಸಿದ್ದಾರೆ.

ಈ ಪೀಠದಮೂಲಕ ಬಸವಣ್ಣ ವರ್ಗ-ವರ್ಣ ಬೇದರಹಿತವಾದ ಜಾತಿಸಂಘರ್ಷವಿಲ್ಲದ ಸಮಾಜದ ನಿರ್ಮಾಣಕ್ಕೆ ಇಡೀ ಶೂನ್ಯಪೀಠದ ಶರಣರನ್ನೆಲ್ಲ ಧಾರ್ಮಿಕವಾಗಿ, ಸಾಮಾಜಿಕವಾಗಿ ತರಬೇತಿಗೊಳಿಸಿದನು. ಈ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಕಲ್ಯಾಣದ ಶರಣ, ಶರಣೆಯರು ಮುಂದೆ ವೀರಶೈವ ಮಠಗಳ ಉಗಮಕ್ಕೆ ಅಧಿಕೃತವಾಗಿ ನಾಂದಿಯಾಡಿದರು. ಇದಕ್ಕೆ ಉದಾಹರಣೆಯಾಗಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಅಲ್ಲಿಂದ ಹೊರಟಂತ ಅನೇಕ ಶರಣರು ದಕ್ಷಿಣದ ಕಡೆ ಪ್ರಯಾಣ ಮಾಡಿ ತಮ್ಮ ತಪಸ್ಸುಗಳ ಮೂಲಕ, ಪವಾಡಗಳ ಮೂಲಕ ಆಯಾ ಕ್ಷೇತ್ರಗಳನ್ನು ತಮ್ಮ ತಪೋವನವನ್ನಾಗಿ ಮಾಡಿಕೊಂಡು, ಜಾಗೃತ ಸ್ಥಳವನ್ನಾಗಿ ಪರಿವರ್ತಿಸಿದರು ಇವೇ ಮುಂದೆ ವೀರಶೈವ ಮಠಗಳಾಗಿ ಪರಿವರ್ತನೆಯಾಗಿರುವುದು ಕಂಡುಬರುತ್ತದೆ. ಇಂಥ ಸಂದರ್ಭದಲ್ಲಿ ಕಲ್ಯಾಣದಲ್ಲಿ ಜ್ಞಾನ ದಾಸೋಹ ನೀಡುತ್ತಿದ್ದ ಮಠಗಳ ಸಂಖ್ಯೆ ಎಷ್ಟಿತ್ತು ಎಂಬುದನ್ನು **ಚನ್ನಬಸವಣ್ಣ**ನವರ ಒಂದು ವಚನದ ಮೂಲಕ ತಿಳಿಯಬಹುದು.

**ದಾಸೋಹ ಮಠ**ಗಳು ಎರಡು ಲಕ್ಷದ ಎಂಬತ್ತೈದು ಸಾವಿರದ ಏಳುನೂರ ಎಪ್ಪತ್ತು (೨,೮೫,೭೭೦) **ನಿತ್ಯ ನೇಮಿಗಳ ಮಠ**ಗಳು ಹತ್ತು ಸಾವಿರ(೧೦,೦೦೦) **ವ್ರತಸ್ಥರ ಮಠ**ಗಳು – ಹದಿನೈದು ಸಾವಿರ(೧೫,೦೦೦) **ಅಕ್ಕ ಪ್ರಸಾದಿಗಳ ಮಠ**ಗಳು ಹನ್ನೆರಡು ಸಾವಿರ (೧೨,೦೦೦) **ಶೀಲಸಂಪನ್ನರ ಮಠ**ಗಳು ಒಂದು ಸಾವಿರದ ಅರವತ್ತಾಲ್ಕು ಮಠಗಳು (೧೦೬೪) ಇದ್ದವು ಎಂಬ ಅಂಕಿ ಅಂಶವು ದೊರೆಯುತ್ತದೆ. ಅಂದರೆ ಒಟ್ಟು **ಮೂರು ಲಕ್ಷದ ಇಪ್ಪತ್ತ ಮೂರು ಸಾವಿರದ ಎಂಟನೂರ ಮೂವತ್ತಾಲ್ಕು (೩,೨೩,೮೩೪)** ಮಠಗಳು. ಇಷ್ಟು ಸಂಖ್ಯೆಯ ಮಠಗಳು ಇದ್ದವೇ, ಇದು ಸತ್ಯವೇ ಎಂಬ ವಿಷಯ ಸಂಶಯವಾದರೂ ಆ ಕಾಲಘಟ್ಟದಲ್ಲಿ ನಡೆದ ಶರಣರ ಚಳುವಳಿ ಗಮನಿಸಿದರೆ ಧರ್ಮಪ್ರಚಾರದಲ್ಲಿ ರಾಜಾಶ್ರಯದಲ್ಲೆ ಬೆಳೆದಿದ್ದುದರಿಂದ ಇದ್ದರೂ ಇರಬಹುದೆನ್ನಲ್ಲೂ ಯಾವುದೇ ಅಡ್ಡಿಯಿಲ್ಲ. ದೇಹವನ್ನು ದೇವಾಲಯವೆಂದು, ದೇವಾಲಯ ಸಂಸ್ಕೃತಿಗೆ ವಿರೋಧಿಗಳಾಗಿದ್ದರೂ ತಾವು ವಾಸಿಸುತ್ತಿದ್ದ ಸ್ಥಳಗಳನ್ನು ಸಾಮಾಜಿಕ-ಧಾರ್ಮಿಕ ಕ್ಷೇತ್ರಗಳಾನ್ನಾಗಿ ಮಾಡಿ ಮಠಸಂಸ್ಕೃತಿಗೆ ಮೂಲ ಪ್ರೇರಕರಾಗಿದ್ದರು.

**ವೀರಶೈವ ಮಠಗಳು ಮತ್ತು ಅದರ ವಿಧಗಳು :–**

ಮಠ ಎಂದರೇನು? ಎಂಬುದನ್ನು ನಾವು ಹಿಂದೆ ಅಭ್ಯಾಸಿಸಿದ್ದೇವೆ. ಈ ಮಠಗಳಲ್ಲಿ ಅತ್ಯಂತ ಪುರಾತನ ಮಠಗಳು ಎಂದು ಖ್ಯಾತಿ ಪಡೆದಿರುವ ವೀರಶೈವ ಮಠಗಳ ಇತಿಹಾಸ ವೀರಶೈವ ಧರ್ಮದಷ್ಟೆ ಪ್ರಾಚೀನವಾದ ಇತಿಹಾಸವನ್ನು ಹೊಂದಿದೆ ಎಂದರೆ ತಪ್ಪಗಲಾರದು. ಪ್ರಾರಂಭದಲ್ಲಿ ಶೈವ ಮಠಗಳದ್ದು ಹನ್ನೆರಡನೇ ಶತಮಾನದ ಬಸವಾದಿ ಪ್ರಮಥರ ಚಳುವಳಿಯ ಜೊತೆಯಲ್ಲಿ ವೀರಶೈವ ಧರ್ಮದ ಜೊತೆಗೆ, ವೀರಶೈವ ಮಠಗಳು ಸಹ ಗಣನೀಯ ಪ್ರಮಾಣದಲ್ಲಿ ಉಗಮವಾದವು. ಅದು ಎಷ್ಟರಮಟ್ಟಿಗೆ ಎಂದರೆ ವೀರಶೈವ ಧರ್ಮದವರೇ ಪ್ರಧಾನವಾಗುಳ್ಳ ಪ್ರತಿಯೊಂದು ಗ್ರಾಮಗಳಲ್ಲು ಒಂದೊಂದು ವೀರಶೈವಮಠ ಸ್ಥಾಪನೆ ಕಡ್ಡಾಯವಾಗಿತ್ತು. ಈ ಹಿನ್ನಲೆಯಲ್ಲಿ ಈ ವೀರಶೈವ ಮಠಗಳ ಉಗಮ ವಿಕಾಸದ ಬಗ್ಗೆ ಸ್ವಲ್ಪ ಸಂಶೋಧನ ಮಟ್ಟದಲ್ಲಿ ಅಭ್ಯಸಿಸಲು ಇಚ್ಛಿಸುತ್ತೇನೆ.

ವೀರಶೈವಮಠಗಳ ಉಗಮವನ್ನು ಕುರಿತು ಸಂಶೋಧಿಸುವಾಗ ಇವುಗಳ ಮೂಲ ಶೈವ ಪರಂಪರೆಗೆ ಸೇರಿದ ಶೈವ ಮಠಗಳಿಂದ ಆರಂಭವಾಗಿದ್ದು, ಶೈವ ದೇವಾಲಯಗಳಲ್ಲಿರುವ ಕಡೆ ಮಠಪತಿಗಳಿದ್ದು, ಇವರನ್ನು ಸ್ಥಾನಪತಿ ಎಂದು ಕರೆಯುತ್ತಿದ್ದರು. ಇವರು ಬ್ರಹ್ಮಾಚಾರಿಗಳಾಗಿದ್ದು ಪಂಡಿತರು, ವಿದ್ವಾಂಸರು, ಜೋತಿಷ್ಯರು ಮತ್ತು ನ್ಯಾಯಾವಾದಿಗಳಾಗಿದ್ದರೂ, ಅಲ್ಲದೆ ವಿದ್ಯಾಭ್ಯಾಸ ಕಾರ್ಯವನ್ನು ಮಾಡುವುದರ ಜೊತೆಗೆ ಧರ್ಮದ ತಿಳುವಳಿಕೆಯನ್ನು ನೀಡುತ್ತಿದ್ದರು. ಕ್ರಮೇಣ ದೇವಾಲಯಮಠಗಳು, ಶೈವಮಠಗಳಾಗಿ ಪರಿವರ್ತನೆಗೊಂಡವು.ಕಾಲಘಟ್ಟದಲ್ಲಿ ಚತುರಾಚಾರ್ಯರು, ಪಂಚಾಚಾರ್ಯರು ಮತ್ತು ಬಸವಾದಿ ಪ್ರಮುಖರು ನಂತರದ ಸಿದ್ದಲಿಂಗಯತಿಗಳು ಮಠಪ್ರಚಾರ, ಧರ್ಮಪ್ರಚಾರ ಮಾಡುವುದರ ಜೊತೆಗೆ ಅಲ್ಲಲ್ಲಿ ಮಠಗಳ ಸ್ಥಾಪನೆಗೆ ಕಾರಣೀಭೂತರಾದರು. ಈ ಎಲ್ಲಾ ಮೇಲಿನ ಅಂಶಗನ್ನು ಗಮನಿಸಿದಾಗ ವೀರಶೈವ ಮಠಗಳ ಉಗಮವನ್ನು ಕುರಿತು ಪ್ರಮುಖವಾಗಿ ಈ ಕೆಳಕಂಡ ಅಭಿಪ್ರಾಯಗಳು ವ್ಯಕ್ತವಾಗಿವೆ. ಮೊದಲನೆಯದು ಶೈವಮಠಗಳು ವೀರಶೈವಮಠಗಳಾದದು. ಎರಡನೆಯದು ಸಾಂಪ್ರದಾಯಕ ನಂಬಿಕೆಗಳಿಂದ ವೀರಶೈವಧರ್ಮ ಬಹಳ ಪುರಾತನವಾದುದು ಎನ್ನಲಾಗಿದೆ. ಇದಕ್ಕೆ ಪೂರಕವಾಗಿ ಪಂಚಾಚಾರ್ಯರು ಸ್ಥಾಪಿಸಿದ ಮಠಗಳೇ ಪಂಚಪೀಠಗಳಾದವು. ಆದರೆ ಪಂಚಾಚಾರ್ಯರಿಗಿಂತ ಮೊದಲು ಚತುರಾಚಾರ್ಯರು ಇದ್ದು ನಾಲ್ಕು ಯುಗಗಳಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ಅವತರಿಸಿ ವೀರಶೈವ ಧರ್ಮವನ್ನು ಉದ್ದರಿಸಿದರು ಎನ್ನಲಾಗಿದೆ. ಈ ಚತುರಾಚಾರ್ಯರು ಮತ್ತು ಪಂಚಾಚಾರ್ಯರು ಒಂದೇ ಎಂಬುದು ನಂತರದ ಅಧ್ಯಯನದಿಂದ ತಿಳಿದುಬರುತ್ತದೆ. "ಕಲಿಯುಗದ ಆರಂಭದಲ್ಲಿ ಅವತರಿಸಿದ್ದ

ರೇವಣಸಿದ್ದ, ಮರುಳಸಿದ್ದ, ಪಂಡಿತಾರಾಧ್ಯ, ಏಕೋರಾಮ ಮತ್ತು ವಿಶ್ವಾರಾಧ್ಯರು ಅನುಕ್ರಮವಾಗಿ ಬಾಳೆಹೊನ್ನುರು (ಬಾಳೆಹಳ್ಳಿ) ಉಜ್ಜಯನಿ, ಶ್ರೀಶೈಲ, ಕೇದಾರ ಮತ್ತು ಕಾಶಿ ಕ್ಷೇತ್ರಗಳಲ್ಲಿ ಪವಿತ್ರ ಪೀಠಗಳನ್ನು ಸ್ಥಾಪಿಸಿದರೆಂದು ಹೇಳಾಲಾಗುತ್ತಿದೆ. ಈ ಪಂಚಪೀಠಗಳು ಇಂದಿಗೂ ಉಳಿದು ಬಂದಿರುವುದು ಕಂಡು ಬರುತ್ತದೆ. ಇವರೇ ವೀರಶೈವ ಧರ್ಮದ ಮೂಲಸ್ಥಾಪಕರು ಎಂದು ನಂಬಲಾಗುತ್ತಿದೆ. ಈಗಲೂ ವೀರಶೈವಧರ್ಮ ಪ್ರಚಾರವನ್ನು ನಡೆಸುತ್ತಾ ಬರುತ್ತಿವೆಯಾದರೂ, ಈ ಹೇಳಿಕೆಗೆ ಐತಿಹಾಸಿಕ ಆಧಾರಗಳ ಕೊರತೆಯಂತು ಕಂಡು ಬರುತ್ತದೆ. "ಐದು ಜನ ಆಚಾರ್ಯರು ವೀರಶೈವರ ಪ್ರಥಮ ಭೋಧಕರು. ಅರ್ಥಾತ್ ಅವರೇ ವೀರಶೈವ ಮತಸ್ಥಾಪಕರು. ಇದು ಸಾಂಪ್ರಾದಾಯಕ ನಂಬಿಕೆ ಅಷ್ಟೇ, ಈ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಮಾಣಿಕ ಐತಿಹಾಸಿಕ ಸಂಗತಿಗಳು ನಮಗೆ ಲಭ್ಯವಿಲ್ಲ."[೨೮]

ಮುಖ್ಯವಾಗಿ ವೀರಶೈವ ಮಠಗಳ ಅಧಿಕೃತ ಉಗಮಕ್ಕೆ ನಾಂದಿಯಾಗಿದ್ದು ೧೨ನೇ ಶತಮಾನ. ಈಕಾಲಘಟ್ಟದಲ್ಲಿ ಬಸವಣ್ಣ, ಅಲ್ಲಮ ಮುಂತಾದ ಶಿವಶರಣರು ಸ್ಥಾಪಿಸಿದ ಅನೇಕ ವೀರಶೈವಮಠಗಳು ಇಂದಿಗೂ ಜೀವಂತವಾಗಿವೆ. ಇತಿಹಾಸತಜ್ಞರ ಪ್ರಕಾರ ಕ್ರಿ.ಶ ೧೧೫೬ರಲ್ಲಿ ಬಸವೇಶ್ವರರಿಂದ ಶೂನ್ಯಸಿಂಹಾಸನಪೀಠ ಸ್ಥಾಪಿತವಾಯಿತು. ಇದಕ್ಕೆ ಮೊದಲು ಗುರುವಾಗಿ ಅಥವಾ ಶೂನ್ಯಪೀಠದ ಅಧಿಪತಿಯಾಗಿ ಅಲ್ಲಮಪ್ರಭುವನ್ನು ಒಪ್ಪಿಕೊಂಡಿದ್ದು ನಮಗೆ ಇತಿಹಾಸದಿಂದ ತಿಳಿದುಬರುತ್ತದೆ. ಇದರ ಆಧಾರದ ಮೇಲೆ ಅಲ್ಲಮಪ್ರಭು ಶೂನ್ಯಪೀಠದ ಮೊದಲ ಅಧ್ಯಕ್ಷರಾದ ಜಂಗಮ. ವಿರಕ್ತ ವೀರಶೈವ ಪರಂಪರೆಗೆ ಮೊದಲಿಗನಾಗಿ ಕಂಡುಬಂದನೆಂಬುದು ತಿಳಿದುಬರುತ್ತದೆ.
ಬಸವಣ್ಣ 'ಅನುಭವ ಮಂಟಪ' (ಶೂನ್ಯಪೀಠ)ವನ್ನು ಸ್ಥಾಪಿಸಿದ್ದರ ಉದ್ದೇಶ ಧರ್ಮದ ತತ್ವಗಳನ್ನು ಚರ್ಚಿಸಲು. ಆದರೆ ಈ ಶೂನ್ಯಪೀಠದ ಮೂಲಕ ನಿರಂಜನ ನಿರಾಬಾರಿ ಜಂಗಮ ಸಂಪ್ರದಾಯವು ಪ್ರಾರಂಭವಾಯಿತು. ಇಂದಿನ ಸಾವಿರಾರು ವಿರಕ್ತ ಮಠಗಳಿಗೆ ಈ ಅನುಭವ ಮಂಟಪ (ಶೂನ್ಯಪೀಠ)ವೇ ಮೂಲ ಪೀಠವಾಗಿದೆ. ಪ.ಗು.ಹಳಕಟ್ಟಿಯವರು ಸಂಪಾದಿಸಿದ "ನಿರಂಜನವಂಶರತ್ನಾಕರ"ದಲ್ಲಿ ಶೂನ್ಯಸಿಂಹಾಸನದ ಪೀಠಾಧಿಕಾರವನ್ನು ಶಿವಾನುಭವ "ಚರಂತಿಗೆಪಟ್ಟ"ವೆಂದು ಕರೆಯಲಾಗಿದೆ. ಇದಕ್ಕೆ ಆಧಾರವಾಗಿ ಹನ್ನೆರಡನೇ ಶತಮಾನದ ವಚನ ಸಾಹಿತ್ಯ, ಶೂನ್ಯ ಸಂಪಾದನೆಗಳು ಮತ್ತು ಹಲವಾರು ವೀರಶೈವ ಪುರಾಣಗ್ರಂಥಗಳು ಈಪೀಠದ ಐತಿಹಾಸಿಕತೆಯನ್ನು ಸಾರುತ್ತವೆ. ಈ ರೀತಿಯಾಗಿ ಕಲ್ಯಾಣದಲ್ಲಿ ಚಾಲುಕ್ಯ ಕಲಚೂರಿಗಳು ಕಾಲದಲ್ಲಿ ಪ್ರಾರಂಭವಾದ ವಿರಕ್ತ ಪರಂಪರೆಯು, ವಿಜಯನಗರದ

---

೨೮. ಡಾ. ಎನ್. ಸಿ. ನಂದಿಮಠ ವೀರಶೈವ ಧರ್ಮ ಕೈಪಿಡಿ ಅನುಪ್ರೇಮಾದೇವಿ ಮಳಿಮಠ ಪುಟ – ೧೪

ಅರಸರಾದ ಪ್ರೌಢದೇವರಾಯನ ಕಾಲಕ್ಕೆ ನೂರೊಂದು ವಿರಕ್ತರಿಂದ ಮುಂದುವರೆಯಿತು ಎನ್ನಲಾಗಿದೆ. ನಂತರದ ದಿನಗಳಲ್ಲಿ 'ವಾಣಿಜ್ಯಪುರ'ವೆಂದು ಹೆಸರಾಗಿದ್ದ ಹರದನಹಳ್ಳಿಯಲ್ಲಿಯು **ಗೋಸಲ ಸಿದ್ದೇಶ್ವರರು** ಪ್ರಭುಸ್ವಾಮ್ಯನ್ವಯವನ್ನು ಉಜ್ವಲಗೊಳಿಸಿದಂತ ಪೂಜ್ಯಮಹಂತರು ಮತ್ತು ಅವರ ಅನೇಕ ಶಿಷ್ಯ ಪರಂಪರೆಯಲ್ಲಿ ಮಿನುಗುತಾರೆಯಾಗಿ ಪ್ರಜ್ವಲಿಸಿದಂತ **ತೋಂಟದ (ಎಡೆಯೂರು) ಸಿದ್ದೇಲಿಂಗೇಶ್ವರರು.** ಈ ಪೂಜ್ಯದ್ವಯರಿಂದಲೆ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳು ಪುನರುಜ್ಜೀವನಗೊಂಡು ಕರ್ನಾಟಕದಲ್ಲಿ ಮಾತ್ರವಲ್ಲದೆ, ನೆರೆಯ ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲೂ ವ್ಯಾಪಕವಾಗಿ ಪ್ರಚಾರಗೊಂಡಿತೆಂಬುದನ್ನು ನಾವು ಅಧ್ಯಯನ ಮೂಲಕ ಗಮನಿಸಬಹುದು. ಈ ರೀತಿಯಾಗಿ ಪಂಚಪೀಠಗಳೇ ವೀರಶೈವ ಮಠಗಳಿಗೆ ಪುರಾತನವಾದವೆಂದು ಸಾರುವ ಗುರುವರ್ಗದ ಅಥವಾ ಪಟ್ಟದಮಠಗಳು ಮತ್ತು ಹನ್ನೆರಡನೇ ಶತಮಾನದ ಬಸವಾದಿ ಪ್ರಮಥರಿಂದ ರೂಪುಗೊಂಡ 'ಅನುಭವ ಮಂಟಪ' (ಶೂನ್ಯಪೀಠ)ವೇ ಪ್ರಥಮ ವಿರಕ್ತ ಮಠವೆಂದು ಹೇಳುವ ಗುರುವರ್ಗದ ಮತ್ತು ವಿರಕ್ತ ವರ್ಗದ ಮಠಗಳ ಪರವಾದ ವಿವರಗಳನ್ನು ಕುರಿತು ಹಲವಾರು ಐತಿಹಾಸಿಕ ಆಧಾರದ ಮೇಲೆ ನಾವು ಸೂಕ್ಷ್ಮವಾಗಿ ಅಧ್ಯಯನ ಮಾಡಬಹುದು.

**ಗುರುವರ್ಗದ ಮಠಗಳು :-**

**ಪಂಚಪೀಠಗಳು:**

ಈ ಮೊದಲೆ ಪ್ರಸ್ತಾಪವಾಗಿರುವಂತೆ ವೀರಶೈವ ಧರ್ಮವು ಬಹಳ ಪ್ರಾಚೀನವಾದ ಧರ್ಮ. ಈ ಧರ್ಮದ ಸಾಂಪ್ರಾದಾಯಕ ನಂಬಿಕೆಗಳಿಗೆ ಬೆಂಬಲವಾದ ಪಾಶುಪತ, ಸುಪ್ರಭೇದ, ಸ್ವಯಂಭುವಾಗಮಗಳು ವೀರಶೈವ ಸದಾಚಾರ ಸಂಗ್ರಹ, ವೀರಶೈವ ಧರ್ಮಸಿಂಧೂ, ಲಿಂಗಾಯಿತ ಮತೋತ್ಪತ್ತಿ ನಿರ್ಣಯ ಇವೇ ಮೊದಲಾದ ಗ್ರಂಥಾಧಾರಿತ ವಿವರಗಳ ಪ್ರಕಾರ ನಾಲ್ಕು ಯುಗಗಳಲ್ಲೂ ಬೇರೆಬೇರೆ ಹೆಸರಿನ ಪಂಚಾಚಾರ್ಯರು ಪರಮೇಶ್ವರನ ಬೇರೆ ಬೇರೆ ಮುಖಗಳಿಂದ ಉದ್ಬವಿಸಿ. ಈ ವೀರಶೈವ ಧರ್ಮವನ್ನು ಉದ್ದರಿಸಿದರೆಂದು ತಿಳಿದು ಬರುತ್ತದೆ.

ಹೀಗೆ ಕಲಿಯುಗದಲ್ಲಿ ಉದಯಿಸಿದ ಪಂಚಾಚಾರ್ಯರುಗಳು ತಮ್ಮ ತಮ್ಮ ಮಠ ಅಥವಾ ಪೀಠಗಳನ್ನು ಸ್ಥಾಪಿಸಿ ಆ ಮೂಲಕ ವೀರಶೈವ ಧರ್ಮವನ್ನು ಬೋಧಿಸಿದರು. ಈ ಮೂಲ ಮಠಗಳೇ ಇಂದಿನ ವೀರಶೈವ ಗುರುಸ್ಥಲದ ಅಥವಾ ಗುರುವರ್ಗದ ಪ್ರಸಿದ್ದ ಪೀಠಗಳಾಗಿವೆ. ಇವೇ ಪಂಚಪೀಠಗಳನ್ನು ವೀರಶೈವರ ಸಿಂಹಾಸನದಮಠಗಳೆಂದು ಕರೆಯುವುದು ರೂಢಿಯಲ್ಲಿದೆ. ಇವುಗಳಲ್ಲಿ ಬಾಳೆಹಳ್ಳಿ ಮತ್ತು ಉಜ್ಜಯನಿ ಪೀಠಗಳು ಮಾತ್ರ ರಾಜ್ಯದ ಒಳಗಿವೆ ಉಳಿದ ಮೂರು

ಪೀಠಗಳಲ್ಲಿ ಶ್ರೀಶೈಲಪೀಠವು ನೆರೆಯ ಆಂಧ್ರಪ್ರದೇಶದೊಳಗೂ , ಕಾಶಿಪೀಠವು ಉತ್ತರಪ್ರದೇಶದಲ್ಲೂ, ಕೇದಾರಪೀಠವು ಹಿಮಾಲಯ ಪ್ರಾಂತ್ಯದಲ್ಲೂ ಇದೆ.

ಈ ಪಂಚಪೀಠಗಳ ಪೀಠಾಚಾರ್ಯರುಗಳು ವೀರಶೈವ ಧಾರ್ಮಿಕ ಸಾಮ್ರಾಜ್ಯದ ಅಧಿಪತಿಗಳಿದ್ದಂತೆ ಸಮಸ್ತ ವೀರಶೈವ ಸಮಾಜದ ಎಲ್ಲಾ ಧಾರ್ಮಿಕ ರೀತಿ–ನೀತಿಗಳ ಅಂತಿಮ ನಿರ್ಣಯವು ಇವರದೇ ಆಗಿರುತ್ತಿತ್ತು. ವೀರಶೈವ ಸಮಾಜದ ಮೇಲೆ ಇವರಿಗೆ ಸಂಪೂರ್ಣವಾದ ಹತೋಟಿ ಇರುತ್ತಿತ್ತು. ವೀರಶೈವರ ಗೋತ್ರ–ಸೂತ್ರಗಳು ಪ್ರಾರಂಭವಾಗಿದ್ದೆ ಇವರಿಂದ ಎಂದು ಹೇಳಲಾಗಿರುತ್ತದೆ. ಪಂಚಪೀಠಗಳಲ್ಲಿ ಯಾವುದಾದರೂ ಒಂದು ಪೀಠಕ್ಕೆ ಸಂಬಂಧಿಸಿದಂತೆ ಒಂದು ಮಠ ಪ್ರತಿಯೊಂದು ಗ್ರಾಮ ಇಲ್ಲವೆ ಪಟ್ಟಣಗಳಲ್ಲೀ ಇದ್ದೇ ಇರುತ್ತಿತ್ತು. ಪೀಠಾಧಿಪತಿಗಳು ತಮ್ಮ ಸೂತ್ರದ ಶಿಷ್ಯರಾದ 'ಪಟ್ಟ', 'ಚರಂತಿ' 'ದೇಶಿಕ' ಮತ್ತು ಅತೀತ' ಎಂಬ ನಾಲ್ಕು ಬಗೆಯ ಮಹಂತಿನವರಿಂದ ಲಿಂಗವಂತ ಧರ್ಮೀಯರಿಗೆ ಅಗತ್ಯವಾದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುತ್ತಿದ್ದರು. ಇವರು ವೀರಶೈವ ಧರ್ಮ ರಕ್ಷಣೆಯ ಜೊತೆಗೆ ಅಧರ್ಮ ಅನೀತಿಗಳಿಂದ ನಡೆಯುವವರನ್ನು ಶಿಕ್ಷಿಸುವ ಅಧಿಕಾರವನ್ನು ಹೊಂದಿದ್ದರು.

ಸಾಮಾನ್ಯವಾಗಿ ವಿರಕ್ತ ಮಠಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವೀರಶೈವ ಮಠಗಳೂ ಈ ಮೇಲ್ಕಂಡ ಒಂದಿಲ್ಲೊಂದು ಗುರುಪೀಠಗಳಿಗೆ ಸಂಬಂಧಿಸಿದ ಶಾಖಾಮಠಗಳೇ ಆಗಿರುತ್ತವೆ. ಪೀಠಾಧೀಶರುಗಳು ಪರಸ್ಪರ ಸಮಾನ ಗೌರವ ಆದರ ಉಳ್ಳವರಾಗಿರುತ್ತಾರೆ. ಇವರುಗಳು ತಮ್ಮದೇ ಆದ ಮಠ, ಸಿಂಹಾಸನ, ಕಿರೀಟ ಮುಂತಾದ ವೈಭವಗಳನ್ನು ಹೊಂದಿ ಸಂಪೂರ್ಣ ಸ್ವತಂತ್ರರಾಗಿರುತ್ತಾರೆ. ಪ್ರತಿಯೊಂದು ಪೀಠಕ್ಕೂ ತನ್ನದೇ ಆದ ಪ್ರತ್ಯೇಕ ಗೋತ್ರ ಸೂತ್ರಗಳಿರುತ್ತವೆ. ಜೊತೆಗೆ ಹನ್ನೆರಡು ಉಪಸೂತ್ರಗಳು ಇರುತ್ತವೆ. ಈ ಪಟ್ಟಿಯನ್ನು ಈ ಕೆಳಗಿನಂತೆ ಕೊಡಲಾಗಿದೆ.

| ಸುಪ್ರಭೇದಾಗಮದಲ್ಲಿ ಹೇಳಿರುವಂತೆ ಪಂಚಾಚಾರ್ಯರ ಉತ್ಪತ್ತಿ ಹಾಗೂ ಗೋತ್ರ ಸೂತ್ರಗಳ ಪಟ್ಟಿ | | | | | | |
|---|---|---|---|---|---|---|
| ೧ | ಶಿವನ ಪಂಚ ಮುಖಗಳು | ಸದ್ಯೋಜಾತ | ವಾಮದೇವ | ಅಘೋರ | ತತ್ಪುರುಷ | ಈಶಾನ |
| ೨ | ಪಂಚಾಚಾರ್ಯರು | ರೇವಾಣಾರಾಧ್ಯ | ಮರುಳಾರಾಧ್ಯ | ಏಕೋರಾಮೋರಾಧ್ಯ | ಪಂಡಿತಾರಾಧ್ಯ | ವಿಶ್ವಾರಾಧ್ಯ |
| ೩ | ಜನ್ಮಭೂಮಿ | ಸೋಮನಾಥ ಲಿಂಗ | ಸಿದ್ದಲಿಂಗ | ರಾಮಾನಾಥ ಲಿಂಗ | ಮಲ್ಲಿಕಾರ್ಜುನಲಿಂಗ | ವಿಶ್ವನಾಥ ಲಿಂಗ |
| ೪ | ಸಿಂಹಾಸನಗಳು | ರಂಭಾಪುರೀ | ಉಜ್ಜಯನೀ | ಹಿಮವತ್ಕೇದಾರ | ಶ್ರೀಶೈಲ | ಕಾಶಿ |
| ೫ | ಗೋತ್ರಗಳು | ವೀರ | ನಂದಿ | ಭೃಂಗಿ | ವೃಷಭ | ಸ್ಕಂದ |
| ೬ | ಸೂತ್ರಗಳು | ಪಡ್ವಿಡಿ | ವೃಷ್ಟಿ | ಲಂಬನ | ಮುಕ್ತಗುಚ್ಛ | ಪಂಚವರ್ಣ |

| | | | | | | |
|---|---|---|---|---|---|---|
| ೭ | ಶಾಖಾಗಳು | ಋಕ್ | ಯಜುಃ | ಸಾಮ | ಅಥರ್ವಣ | ಅಜಪವೇದ |
| ೮ | ಧಾತುಗಳು | ಸ್ವರ್ಣ | ರಜತ | ತಾಮ್ರ | ಲೋಹ | ಸೀಸ |
| ೯ | ತತ್ವಗಳು | ಪೃಥ್ವೀ | ಆಪ್ | ತೇಜಃ | ವಾಯು | ಆಕಾಶ |
| ೧೦ | ಬೀಜಾಕ್ಷರಗಳು | ನಕಾರ | ಮಕಾರ | ಶಿಕಾರ | ವಕಾರ | ಯಕಾರ |
| **ಮಹಾಸೂತ್ರಗಳಿಗೆ ಸೇರಿದ ಉಪಸೂತ್ರಗಳು** | | | | | | |
| | ೧ | ಶತಾಂಗ | ಲೋಹಕಂಥಾ | ಗೋಣಿಕಂಥ | ತ್ರಿಪುಟೀ | ಪಂಚವರ್ಣ |
| | ೨ | ಪ್ರಮುಖ | ಸ್ವರ್ಣಕಂಥಾ | ದಂತಿ | ರಜ್ಜು | ಕಂಬಾಲ |
| | ೩ | ಶರ್ಕರ | ಶೃಂಗಿ | ಜಠರ | ಕಂಥಾ | ವೃಷಭ |
| | ೪ | ವೃಷಭ | ಮಸಣೀ | ತ್ರಿಗುಣ | ಭಸ್ಮೀ | ದಶವಕ್ತ್ರ |
| | ೫ | ಸಹಸ್ರಾಕ್ಷ | ಕುಠಾರ | ಕೇಶಕಂಥಾ | ಶಿಖರೀ | ಜರತ್ಕಂಥಾ |
| | ೬ | ಧರ್ಮ | ಭರಶ್ರೀ | ಲಲಾಟ | ರೌಪ್ಯಕ | ಪಂಚಮುಖ |
| | ೭ | ವಿಷಮ | ಕಠಾರ | ವ್ಯಾಘ್ರುಕಂಥಾ | ಚಂದ್ರಗುಂಡ | ಗುಹಾಗ್ರ |
| | ೮ | ಮೋಚಕ | ಚಾಮರೀ | ಲೋಚನ | ವೈತ್ಕಂಥಾ | ಗೋಚರ |
| | ೯ | ವೃಕಭೇದೀ | ಕವಾಟ | ಭಗಿನೀ | ಕಾಷ್ಟಕ | ಗಗನ |
| | ೧೦ | ಕುಂಜರಾರಿ | ಕುಕ್ಷಕಂಥಾ | ಜಾಲಕಂಥಾ | ಪವನ | ಮುಸಲೀ |
| | ೧೧ | ಶೇಷ | ಜ್ವಲಕಂಥಾ | ನಟನ | ರಾಮಗಿರಿ | ಲಗುಡ |
| | ೧೨ | ಶಖಹರಿತ್ | ಸಿಂಹೀ | ಬದಡೀ | ಖಡ್ಗೀ | ಶಿಥಿಲೀ |

ಪ್ರತಿಯೊಂದು ಪಂಚಪೀಠಾಧೀಶರಿಗೂ ನೆರವಾಗಿ ಐದೈದು ಉಪಾಚಾರ್ಯರುಗಳ ವರ್ಗಗಳಿವೆ. ವೀರಶೈವ ಸದಾಚಾರ ಸಂಗ್ರಹದಲ್ಲಿ ಹೇಳಿರುವಂತೆ ಪಂಚಾಚಾರ್ಯರು ಐವರು ಹಾಗೆಯೇ ಪಂಚವೃತ್ಯಾಚಾರ್ಯರು ಐವರು. ಇವರಲ್ಲಿ 'ಮಠದಯ್ಯ'ನದು ಮೊದಲಸ್ಥಾನ ಈತನನ್ನು 'ಹಿರೇಮಠದಯ್ಯ' ಎಂದು ಕರೆಯುವುದುಂಟು. ಎರಡನೆಯಸ್ಥಾನ 'ಮಠಪತ್ತಿ'ಯದು. ಮೂರನೇ ಸ್ಥಾನ 'ಗಣಾಚಾರ್ಯ'ನದು 'ಗಣಕುಮಾರ'ನದು ನಾಲ್ಕನೆಸ್ಥಾನವಾದರೆ, ಕೊನೆಯ ಐದನೇ ಸ್ಥಾನವು 'ಸ್ಥಾವರಿಕ'ನದು. ಉಪಚಾರ್ಯರೆಂದೇ ಹೆಸರಾಗಿರುವ ಈ ಪಂಚಾವೃತ್ಯಾಚಾರ್ಯರು ಸಮಾನಶೀಲರೂ ಸಮಾನ ಸಂಸ್ಕಾರ ಉಳ್ಳವರು ಆಗಿರುತ್ತಿದ್ದರು.

"ಪಂಚಾಚಾರ್ಯರು ಹೇಗೆ ಪರಮೇಶ್ವರನ ಪಂಚಮುಖಗಳಿಂದ ಉದ್ಭವಿಸಿದವರು ಎಂಬ ನಂಬಿಕೆ ಇದಯೋ, ಅದೇ ರೀತಿ ಪಂಚಾಚಾರ್ಯರ ನೆರವಿಗಾಗಿ ಇದ್ದ ಈ ಪಂಚವೃತ್ಯಾಚಾರ್ಯರೂ ಕೂಡ ಪರಮೇಶ್ವರನ ಬೇರೆ ಬೇರೆ ಅಂಗಗಳಿಂದ ಜನಿಸಿದವರೆಂಬ ಕಲ್ಪನೆ ಇದೆ. ಪರಮೇಶ್ವರನ ಹೃದಯಧಿಂದ ಮಠದಯ್ಯನೂ, ಅವನ ಬಲಹೆಗಲಿನಿಂದ ಗಣಚಾರಿಯೂ, ಎಡಹಗಲಿನಿಂದ ಮಠಪತ್ತಿಯೂ, ಬಲಪಾದದಿಂದ ಗಣಕುಮಾರನೂ ಮತ್ತು ಶಿವನ ಎಡಪಾದದಿಂದ ಸ್ಥಾವರಿಕನೂ

ಜನಿಸಿದರೆಂದು ಡಾ.ಎಂ.ಚಿದಾನಂದಮೂರ್ತಿಯವರು ತಮ್ಮ ಕೃತಿಯಲ್ಲೂ ಉಲ್ಲೇಖಿಸಿದ್ದಾರೆ."[೨೯] ಇವರ ಧಾರ್ಮಿಕ ಕಾರ್ಯಚಟುವಟಿಕೆಗಳನ್ನು ಕುರಿತು ಮುಂದೆ ವಿವರಿಸಲಾಗಿದೆ.

**ಪಟ್ಟದೇವರ ಮಠಗಳು :**

ಈಗಾಗಲೆ ಪ್ರಸ್ತಾಪವಾಗಿರುವ ಪಂಚಾಚಾರ್ಯರು (ಪೀಠಾಧೀಶರು) ಹಾಗೂ ಪಂಚಾವತ್ಯಾಚಾರ್ಯರು (ಉಪಾಚಾರ್ಯರು) ಇವರಿಬ್ಬರಿಗೂ ನಡುವಿನಸ್ಥಾನವೇ ಈಪಟ್ಟಾಧ್ಯಕ್ಷರದು. ಇವರೇ ಪಟ್ಟದೇವರು. ಪಂಚಾಚಾರ್ಯರ ನಂತರದ ಸ್ಥಾನ ಇವರದು. ಇವರು ಪ್ರಾದೇಶಿಕವಾಗಿ ನಾಡಿನ ಆಯ್ದ ಭಾಗಗಳಲ್ಲಿ ನೆಲೆಗೊಂಡಿರುತ್ತಾರೆ. ಇವರ ಮಠಗಳೇ ಪಟ್ಟದೇವರಮಠಗಳು. ಈ ಮಠಗಳನ್ನು ಹಿರಿಯ ಮಠ, ಹಿರೇಮಠಗಳೆಂದೂ ಕರೆಯುತ್ತಾರೆ. ಪಟ್ಟದೇವರ ಮಠಗಳ ಪ್ರಾದೇಶಿಕ ವ್ಯಾಪ್ತಿಯೂ ಕೂಡ ಸಾಕಷ್ಟು ದೊಡ್ಡದಾಗಿರುತ್ತದೆ. ಸಾಮಾನ್ಯವಾಗಿ ಮೂವತ್ತು ನಲವತ್ತು ಊರುಗಳಿಗೆ ಒಂದರಂತೆ ಅಥವಾ ದೊಡ್ಡ ದೊಡ್ಡ ಪಟ್ಟಣಗಳಿಗೆ ಒಂದರಂತೆ ಈ ಪಟ್ಟದೇವರ ಮಠಗಳು ಇರುತ್ತಿದ್ದವು. ಪಟ್ಟದೇವರುಗಳು ತಮಗೆ ನಿಗದಿಯಾದ ಪ್ರಾದೇಶಿಕ ಭಕ್ತರ ಧಾರ್ಮಿಕ ಕಾರ್ಯಗಳ ನ್ಯಾಯ ನಿರ್ಣಯಗಳಿಗೆ ನೇರ ಅಧಿಕಾರ ಉಳ್ಳವರಾಗಿ ಇರುತ್ತಿದ್ದರು.

ಈ ಪಟ್ಟದೇವರ ಮಠದ ಪಟ್ಟಾಧ್ಯಕ್ಷರಲ್ಲಿ ಎರಡು ಬಗೆ ಇದೆ. ೧.ಸ್ಥಿರಪಟ್ಟಾಧ್ಯಾಕ್ಷ, ೨.ಚರಪಟ್ಟಾಧ್ಯಾಕ್ಷ. ಇವರಲ್ಲಿ ಒಬ್ಬರು ವೀರಶೈವ ಧರ್ಮಾಧಿಕಾರ ನಡೆಸವುದಕ್ಕಾಗಿ ಸ್ವಸ್ಥಾನ (ತಮ್ಮ ಮಠ)ದಲ್ಲಿಯೇ ಇದ್ದುಕೊಂಡು ಅಧಿಕಾರ ನಡೆಸುತ್ತಿದ್ದರು.ಅವರನ್ನು ಸ್ಥಿರಪಟ್ಟಾಧ್ಯಕ್ಷರು ಎಂದು ಗುರುತಿಸಲಾಗುತ್ತಿತ್ತು. ಮತ್ತೊಬ್ಬರು ದೇಶದ ನಾನಾ ಭಾಗಗಳಲ್ಲಿ ಸಂಚರಿಸುತ್ತಾ ಹೋದೆಡೆಯಲೆಲ್ಲಾ ಧರ್ಮಾಧಿಕಾರ ನಡೆಸುತ್ತಿದ್ದರು. ಅವರನ್ನು ಚರಪಟ್ಟಾಧ್ಯಕ್ಷರು ಎಂದು ಗುರುತಿಸಲಾಗುತ್ತಿತ್ತು. ಇವರಿಬ್ಬರೂ ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡ ಉಪಾಚಾರ್ಯರನ್ನು 'ದೇಶಿಕ' ಅಥವಾ 'ಚರಪತಿ'ಗಳೆಂದು ಕರೆಯುತ್ತಿದ್ದರು.

ಲಿಂಗಾಯಿತ ಧರ್ಮೀಯರಿಗೆ ಲಿಂಗಧಾರಣೆ, ದೀಕ್ಷೆ, ವಿವಾಹ ಇದೇ ಮೊದಲಾದ ವಿಧಿಗಳನ್ನು ನಡೆಸುವ ಸಂದರ್ಭದಲ್ಲಿ ವೀರಶೈವ ಗುರುವರ್ಗದ ಸಂಪ್ರದಾಯದಂತೆ ಕಾರ್ಯಗಳನ್ನು

---

೨೯. ಡಾ.ಎಂ. ಚಿದಾನಂದ ಮೂರ್ತಿ ಲಿಂಗಾಯಿತ ಅಧ್ಯಯನ ಪುಟ – ೪೭೪

ಮುನ್ನಡೆಸುವ ಹಾಗೂ ಮಾರ್ಗದರ್ಶನ ನೀಡುವ ಅಧಿಕಾರ ಈ ಸ್ಥಿರ ಮತ್ತು ಚರಪಟ್ಟಾಧ್ಯಕ್ಷರಿಬ್ಬರಿಗೂ ಸಮಾನವಾಗಿಯೇ ಇರುತ್ತಿತ್ತು. ಪಂಡಿತ್‌ಕಾಶಿನಾಥಶಾಸ್ತ್ರಿಗಳು ಹೇಳಿರುವಂತೆ "ವೀರಶೈವ ಧಾರ್ಮಿಕ ಸಂಸ್ಕಾರಗಳನ್ನು ನಡೆಸುವಲ್ಲಿ ಉಭಯತರೂ ಸಮಾನ ಗುರುತ್ವ ಉಳ್ಳವರೇ ಆಗಿದ್ದು, ಅಷ್ಟಾವರಣಾಂತರ್ಗತವಾಗಿ ಗುರುಪದವಾಚ್ಯರೂ, ಜಂಗಮಪದವಾಚ್ಯರೂ ಆಗಿರುತ್ತಾರೆ. ಸಾಮಾನ್ಯವಾಗಿ ಸ್ಥಿರಪಟ್ಟಾಧ್ಯಕ್ಷರು ಬ್ರಹ್ಮಚಾರಿಗಳಾಗಿರುತ್ತಿದ್ದರು. ಇವರ ಕೈ ಕೆಳಗೆ 'ಹಿರೇಮಠದಯ್ಯ' ನೆಂಬ ಮಠಸ್ಥರಿದ್ದು ಪಟ್ಟಾಧ್ಯಕ್ಷರ ಪರವಾಗಿ ಇವರು ಪೌರೋಹಿತ್ಯ ನಡೆಸುತ್ತಿದ್ದರು ಪಂಚವೃತ್ಯಾಚಾರ್ಯರಲ್ಲಿ ಮೊದಲನೆಯವರಾದ ಈಹಿರೇಮಠದಯ್ಯ(ಮಠದಯ್ಯ) ಗೃಹಸ್ಥರೇ ಆಗಿದ್ದು ಸಾಮಾನ್ಯರ ಹಾಗೆಯೇ ವೇಷ ಭೂಷಣ ಉಳ್ಳವರಾಗಿ ಇರುತ್ತಿದ್ದರು. ಗ್ರಾಮೀಣ ಭಾಗದಲ್ಲಿ ಇವರನ್ನು ಅಯ್ಯನವರೆಂದೇ ಕರೆಯಲಾಗುತ್ತಿತ್ತು. ಪಟ್ಟದೇವರ ಮಠದ ಪಟ್ಟಾಧ್ಯಕ್ಷರಿಗೆ ಹಲವಾರು ಗ್ರಾಮಗಳ ಧಾರ್ಮಿಕ ಅಧಿಕಾರವಿದ್ದರೆ, ಈ ಹಿರೇಮಠದಯ್ಯನವರಿಗೆ ಅವರಿದ್ದ ಆಯಾ ಗ್ರಾಮಗಳ ಮೇಲಿನ ಧಾರ್ಮಿಕ ಅಧಿಕಾರವಿರುತ್ತಿತ್ತು. ಪ್ರತಿ ಗ್ರಾಮಗಳಲ್ಲೂ ಈಹಿರೇಮಠದಯ್ಯನವರ ಕೈಕೆಳಗೆ ಮಠಪತ್ತಿ, ಗಣಾಚಾರಿ, ಗಣಕುಮಾರ ಮತ್ತು ಸ್ಥಾವರಿಕರು ಇರುತ್ತಿದ್ದು. ಇವರುಗಳು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಅವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಪಟ್ಟದೇವರ ಮಠಗಳಲ್ಲಿ ಎರಡು ಬಗೆ ೧. ಪುತ್ರವರ್ಗದ ಮಠಗಳು. ೨.ಶಿಷ್ಯವರ್ಗದ ಮಠಗಳು. ಪುತ್ರವರ್ಗದ ಮಠಗಳಲ್ಲಿ ಬ್ರಹ್ಮಚಾರಿಗಳಾಗಿ ಇರುತ್ತಿದ್ದ ಪಟ್ಟದೇವರು ತಮ್ಮ ಅಣ್ಣ ತಮ್ಮಂದಿರ ಮಕ್ಕಳಲ್ಲಿ ಒಬ್ಬರನ್ನು ತಮ್ಮ ಉತ್ತಾರಾಧಿಕಾರಿಯನ್ನಾಗಿ ನೇಮಿಸಿಕೊಳ್ಳುತ್ತಿದ್ದರು."[೩೦] ಶಿಷ್ಯ ವರ್ಗದ ಮಠಗಳಲ್ಲಿ ಪಟ್ಟದೇವರು ತಮ್ಮ ಶಿಷ್ಯ ವರ್ಗದಲ್ಲಿ ಒಬ್ಬರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಆರಿಸಿಕೊಳ್ಳುತ್ತಿದ್ದರು.

**ಹಿರೇಮಠ ಅಥವಾ ಪಟ್ಟದ ಮಠಗಳು :**

ಹಿಂದೆ ವೀರಶೈವರೇ ಪ್ರಧಾನವಾಗಿ ಇರುತ್ತಿದ್ದ ಪ್ರತಿಯೊಂದು ಗ್ರಾಮದಲ್ಲೂ ಪಟ್ಟದೇವರಮಠದ ಶಾಖಾಮಠವಿರುತ್ತಿತ್ತು. ಗ್ರಾಮಮಟ್ಟದ ಈ ಪಟ್ಟದಮಠವನ್ನು ಹಿರೇಮಠವೆಂದೂ ಕರೆಯುತ್ತಿದ್ದರು. ಇಂತಹ ಮಠಗಳ ಅಧಿಪತಿಯೇ ಪಂಚವೃತ್ಯಾಚಾರ್ಯರಲ್ಲಿ ಮೊದಲಿಗರಾದ 'ಮಠದಯ್ಯ ಅಥವಾ ಹಿರೇಮಠದಯ್ಯಗಳು' ಇವರ ಕೈಕೆಳಗೆ ಇನ್ನುಳಿದವರು ಸಹಾಯಕರಾಗಿ ಇರುತ್ತಿದ್ದರು. ಈ ಮೊದಲೆ ತಿಳಿಸಿರುವಂತೆ ಪರಶಿವನ ಪಂಚ ಅಂಗಗಳಿಂದ ಉದ್ಭವಿಸಿದ ಈ

---

೩೦. ಪಂಡಿತ ಕಾಶಿನಾಥ ಶಾಸ್ತ್ರಿಗಳು : ಸನ್ಯಾಸಾಶ್ರಮ ತಪಸ್ವಿರೀಕರಣ ಪುಟ –೪೩

ವೃತ್ಯಾಚಾರ್ಯರು. ಇವರಲ್ಲಿ ಹಿರೇಮಠದ ಅಧಿಪತಿಯಾದ ಮಠದಯ್ಯ ಅಥವಾ ಹಿರೇಮಠಸ್ಥನು ಉಳಿದವರಿಗೆಲ್ಲಾ ಮುಖ್ಯಸ್ಥನಾಗಿರುತ್ತಾನೆ. ಗ್ರಾಮಮಟ್ಟದ ವೀರಶೈವ ವಿಧಿವಿಧಾನಗಳೂ ಎಲ್ಲಾಧಾರ್ಮಿಕ ಆಚರಣೆಗಳೂ ಇವರ ಮಾರ್ಗದರ್ಶನದಲ್ಲೆ ನಡೆಯುತ್ತವೆ.

'ಮಠಪತ್ತಿ'ಯು ಮಠದಯ್ಯನಿಗೆ ಧಾರ್ಮಿಕ ಸೇವಕನಿದ್ದಂತೆ. ಈತ ಗುರುಸ್ಥಲದವರು ಮಾಡುವ ಸಕಲ ಆಚರಣೆಗಳಿಗೂ ಬೇಕಾದ ಸಾಧನ ಸಲಕರಣೆಗಳನ್ನು ಅವರ ಅನುಮತಿಯ ಪ್ರಕಾರ ಪೂರೈಸುವ ಕಾಲಾಳಿದ್ದಂತೆ. ಪೂಜಾ ಕೆಲಸಗಳನ್ನು ನಿರ್ವಹಿಸುವುದು ಇವರ ಜವಾಬ್ದಾರಿ. 'ಗಣಾಚಾರಿ'ಯು ಮಂತ್ರಗಳನ್ನು ಪಠಿಸುವ ವೈದಿಕನಾಗಿ ಇರುತ್ತಿದ್ದ. ಇವನು ಮಠದಯ್ಯನಿಗೂ ಊರಿನ ಭಕ್ತರಿಗೂ ನಡುವೆ ವಾರ್ತಾವಾಹಕನಾಗಿಯೂ ಕೆಲಸ ನಿರ್ವಹಿಸುತ್ತಿದ್ದ. ಜೊತೆಗೆ ಪೂಜಾ ಸಂದರ್ಭಗಳಲ್ಲಿ ಮನೆಯ ಯಜಮಾನ ಹಾಗೂ ಉಳಿದವರನ್ನು ಅವರವರ ಅಂತಸ್ತುಗಳಿಗೆ ತಕ್ಕಂತೆ ಯಾರು ಹೇಗೆ ಪಾಲ್ಗೊಳ್ಳಬೇಕು ಎಂಬುದನ್ನು ನೋಡಿಕೊಳ್ಳುವುದು ಈ ಗಣಾಚಾರ್ಯನ ಕೆಲಸವಾಗಿರುತ್ತಿತ್ತು. 'ಗಣಕುಮಾರನು' ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸುವ ಸಂದರ್ಭದಲ್ಲಿ ಅಗತ್ಯವಾದ ಪರಿಕರಗಳನ್ನು ಒದಗಿಸುವ ವಕ್ತಾರನಾಗಿರುತ್ತಾನೆ. ಪೂಜೆಗೆ ಬಂದಂಥ ಜನಗಳಿಗೆ ಪಾದೋದಕ ಪ್ರಸಾದಗಳು ಸರಿಯಾಗಿ ವಿನಿಯೋಗವಾದುವೆ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದು ಗಣಕುಮಾರನ ಕೆಲಸವಾಗಿತ್ತು. ಕೆಲವಡೆ ಜನರ ಕೆಲಸ ಕಾರ್ಯಗಳನ್ನು 'ಕೌಮಾರ್ಯ'ನ ಕಾರ್ಯಗಳೆಂದೂ ಕರೆದಿರುವುದುಂಟು. 'ಸ್ಥಾವರಿಕ'ನು ಆಯಾ ಸಂಸ್ಕಾರಗಳಿಗೆ ಅಗತ್ಯವಾದ ಪೂಜ್ಯ ಪರಿಕರಗಳನ್ನು ಸಜ್ಜುಗೊಳಿಸುತ್ತಾನೆ. ಪೂಜಾಗೃಹದ ಆಸನಗಳ ಸಿದ್ದತೆ ಅವುಗಳ ಅಚ್ಚುಕಟ್ಟು ನಿರ್ವಹಣೆ ಈ ಸ್ಥಾವರಿಕಾರ್ಯನದು.

ಈ ಮೇಲಿನ ಕಾರ್ಯಗಳ ಜೊತೆಗೆ ಮಠದಯ್ಯಗಳಿಗೆ ಅನುಗುಣವಾಗಿ ಗಣಾಚಾರಿಯು ಹಿರೇಮಠದಲ್ಲಿ ಗ್ರಾಮದ ವೀರಶೈವ ಧರ್ಮದ ಕುಲಬಾಂಧವರ ಧಾರ್ಮಿಕ ಆಚರಣೆಗಳ ವಿವರವಾದ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಾನೆ. ಗುಣಕುಮಾರನು ಗ್ರಾಮಸ್ಥರ ಮನೆಗಳಲ್ಲಿ ನಿತ್ಯ ನೆಡೆಯುವ ಆಚಾರ-ವಿಚಾರಗಳನ್ನು ನಿರೀಕ್ಷಿಸಿ ಅವುಗಳನ್ನು ಮಠದಯ್ಯನಿಗೆ ವರದಿ ಮಾಡುತ್ತಾನೆ. ಸ್ಥಾವರಿಕನು ವೀರಶೈವಗೋತ್ರ, ಶಿವಪಾರ್ವತಿಯರ ಹಾಗೂ ಅವರ ಪರಿವಾರದವರ ಮೂರ್ತಿ ಪೂಜಕನಾಗಿ ಕಾರ್ಯನಿರ್ವಹಿಸುತ್ತಾನೆ. ಎಂಬುದಾಗಿ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ತಮ್ಮ 'ಹೋಲಿ ಸಂಸ್ಥಾನ' ಪುಸ್ತಕದ ೩೦ನೇ ಪುಟದಲ್ಲಿ ವಿವರಿಸಿದ್ದಾರೆ.

ಬುದ್ದಯ್ಯಸ್ವಾಮಿ ಪುರಾಣಿಕರು ತಮ್ಮ 'ವೀರಶೈವರ ಕಾಯಕಗಳು' ಎಂಬ ಲೇಖನದಲ್ಲಿ ಪಂಚ ವೃತ್ಯಾಚಾರ್ಯರಲ್ಲಿ ಮಠದಯ್ಯನು ಮಠಪತ್ತಿಯ ಸಹಾಯದಿಂದ ವೀರಶೈವರ ಲಿಂಗಾಧಾರಣೆಯ

ಆದಿಯಾಗಿ ಅಂತ್ಯಸಂಸ್ಕಾರದವರೆಗೆ ‘ದಶಕರ್ಮಗಳನ್ನೂ [ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ದೀಕ್ಷಾ, ವಿವಾಹ, ಅಂತ್ಯೇಷ್ಟಿಗಳನ್ನು] ವಿಧಿಯುಕ್ತವಾಗಿಯೂ ಕ್ರಮಬದ್ಧವಾಗಿಯೂ ಮಾಡತಕ್ಕವನು. ಗಣಾಚಾರಿಯು ಗಣಕುಮಾರನ ಸಹಾಯದಿಂದ ತನ್ನ ವೀರವೃತ್ತಿಯೊಂದಿಗೆ ಎಲ್ಲರನ್ನು ಕಾಪಾಡುವವನು. ಆದ್ದರಿಂದಲೇ **‘ಗಂಡ ಬಿಟ್ಟರೂ ಗಣಾಚಾರ್ಯ ಬಿಡ’** ಎಂಬ ಗಾದೆ ಮಾತಿರುವುದು. ಇನ್ನು ಸ್ಥಾವರಿಕನು ಎಲ್ಲಾ ಶಿವಾಲಯಗಳ ಮೇಲ್ವಿಚಾರಕನಾಗಿ ಸ್ಥಾವರಲಿಂಗಗಳ ಪೂಜಾದಿ ಕಾರ್ಯಗಳು ಯೋಗ್ಯವಾಗಿ ಸಾಗಿವೆಯೋ ಎಂಬುದನ್ನು ನೋಡತಕ್ಕವನು, ಎಂಬುದಾಗಿ ಅವರ ಕಾರ್ಯವೈಖರಿಗಳನ್ನು ಕುರಿತು ವ್ಯಾಖ್ಯಾನಿಸಿದರೆ ಹೀಗೆ ಆಯಾ ಗ್ರಾಮದ ಮಠದಯ್ಯಗಳಿಗೆ ನೆರವಾಗುವಂತೆ ಹಾಗೂ ಧಾರ್ಮಿಕವಾದ ಸಮಾಜ ಸೇವೆಗಾಗಿ ಈ ವೃತ್ತಾಚಾರ್ಯರು ನಿಯೋಜಿತರಾಗಿದ್ದುದು ಗಮನಾರ್ಹ.

ಸಾಮಾನ್ಯವಾಗಿ ಗ್ರಾಮಮಟ್ಟದ ಈಮಠದಯ್ಯಗಳೂ ಸೇರಿದಂತೆ ಪಂಚವೃತ್ಯಾಚಾರ್ಯರೆಲ್ಲರೂ ಗೃಹಸ್ಥರಾಗಿಯೇ ಇದ್ದು ಮಠಾಧಿಪತ್ಯವನ್ನು ನಡೆಯಿಸುತ್ತಿದ್ದರು. ಮಠದಯ್ಯಗಳು ಈ ಹಿರೇಮಠಗಳು ಗುರುವರ್ಗದ ಅಥವಾ ಪಟ್ಟದ ಮಠಗಳ ಶ್ರೇಣಿಯಲ್ಲಿ ಮೂರನೆಯ ಹಾಗೂ ಕೆಳಸ್ತರದ ಮಠಗಳಾಗಿದ್ದವು.

**ಕಾಯಕದಯ್ಯಗಳು :**

ಗುರುವರ್ಗದ ಪರಂಪರೆಯಲ್ಲಿ ಮೇಲಿನ ಪೀಠಗಳವರಿಗೆ ಅಥವಾ ಪಟ್ಟದೇವರ ಮಠಗಳವರಿಗೆ ಗ್ರಾಮಮಟ್ಟದ ಧಾರ್ಮಿಕ ವೃತ್ತಾಂತಗಳನ್ನು ವರದಿ ಮಾಡುವ ಅಯ್ಯಗಳು ಇರುತ್ತಿದ್ದರು. ಇವರೇ ಕಾಯಕದಯ್ಯಗಳು ಇವರುಗಳು ಆಯಾಭಾಗದ ಪೀಠಾಧೀಶರ ಅಧೀನಕ್ಕೆ ಒಳಪಟ್ಟಿದ್ದರು. ಸಾಮಾನ್ಯವಾಗಿ ಇವರು ವಾರಕ್ಕೊಮ್ಮೆ ನಿಗದಿತ ಪ್ರಾಂತ್ಯಗಳಿಗೆ ಭೇಟಿ ನೀಡಿ ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಅಲ್ಲಿ ನಡೆಯುತ್ತಿದ್ದ ವಿದ್ಯಾಮಾನಗಳನ್ನು ಮೇಲ್ಕಂಡವರಿಗೆ ವರದಿ ನೀಡಬೇಕಾಗಿತ್ತು.

“ಈ ಕಾಯದಯ್ಯಗಳಬಗ್ಗೆ ನಾನಾ ರೀತಿಯ ವಿಭಿನ್ನ ಪರಿಕಲ್ಪನೆಗಳಿವೆ. ಡಾ.ಎಚ್.ಆರ್.ಗುಂಜಾಳರು ತಮ್ಮ ‘ಲಿಂಗಾಯತರಲ್ಲಿ ಕಾಯಕದ ಕಲ್ಪನೆ’ ಎಂಬ ಲೇಖನದಲ್ಲಿ ಆರು ಬಗೆಯ ಕಾಯಕದಯ್ಯಗಳನ್ನೂ ಗುರುತಿಸಿದ್ದಾರೆ.”[೩೧] ಅವುಗಳೆಂದರೆ

---------------

೩೧. ಡಾ. ಎಸ್.ಆರ್ ಗುಂಜಾಳ ‘ಲಿಂಗಾಯಿತರಲ್ಲಿ ಕಾಯಕದ ಕಲ್ಪನೆ’ **ಕಾಯಕ ಪರಿಣಾಮಿ** ಸಂ ಶಾಂತರಸ ಚನ್ನಬಸಪ್ಪ ಪುಟ –೬೫೫–೬೫೬

೧. ತೆಕ್ಕೆಯ ಕಾಯಕ, ೨.ಮುಳ್ಳಾವಿಗೆ ಕಾಯಕ, ೩. ಶಸ್ತ್ರದ ಕಾಯಕ. ೪.ಜಂಗಿನ ಕಾಯಕ, ೫. ಘಂಟೆಯ ಕಾಯಕ ಮತ್ತು ೬. ಹಿಟ್ಟಿನ ಕಾಯಕ. ಮತ್ತೊಂದೆಡೆ ಡಾ. ಎಚ್. ಎಂ. ಸದಾಶಿವಯ್ಯನವರು 'ಶ್ರೀ ಪಟ್ಟಾಧಿಕಾರಿಗಳು ಹುತ್ತಿಗಿಮಠ' ಎಂಬ ಕೃತಿಯನ್ನಾಧಾರಿಸಿ ಘಂಟೆ ಕಾಯಕ, ಮುಳ್ಳಾವಿಗೆ ಕಾಯಕ, ಕಣಿ ಕಾಯಕ, ಗದ್ದುಗೆ ಕಾಯಕ, ಮಂಗಳ ಕಾಯಕ ಮತ್ತು ತೆಕ್ಕೆಯ ಕಾಯಕ ಎಂದು ಆರು ಬಗೆಯ ಕಾಯಕಗಳನ್ನೂ ಗುರುತಿಸಿದ್ದಾರೆ 'ವೀರಶೈವ ಕರದರ್ಪಣ'ದ ಪ್ರಕಾರ ಕಾಯಕದಯ್ಯಗಳಲ್ಲಿ ನಾಲ್ಕು ಬಗೆ. ೧. ಘಂಟೆ ಕಾಯಕ ೨. ಗದ್ದುಗೆ ಕಾಯಕ ೩. ಕಂಬದ ಕಾಯಕ ಮತ್ತು ೪. ಮುಳ್ಳಾವಿಗೆ ಕಾಯಕ.

**೧. ಘಂಟೆ ಕಾಯಕ :**

ಘಂಟೆಕಾಯಕದ ಅಯ್ಯಗಳು (ಜಂಗಮರು) ಸಾಮಾನ್ಯವಾಗಿ ಎಲ್ಲರೂ ಗ್ರಾಮದಲ್ಲಿ ತಂಗಿರುವಾಗ ತಮಗೆ ಗೊತ್ತಾದ ಮನೆಯ ಮುಂದೆ ಹೋಗಿ ಅಲ್ಲಿ ತಮ್ಮ ಧರ್ಮದ ಮಂಗಳ ವಿಜಯಧ್ವನಿ ಘಂಟಾನಾದವನ್ನು ಮಾಡುತ್ತಿದ್ದರು. ಈ ಘಂಟಾನಾದವನ್ನು ಕೇಳಿದ ಕೂಡಲೆ ಹೊರಗೆ ಬಂದ ಭಕ್ತ ಸಮೂಹ ಆ ಜಂಗಮರ ಪಾದಕ್ಕೆರಗಿ ತಮ್ಮ ಧಾರ್ಮಿಕ ಆಚಾರ-ವಿಚಾರಗಳ ಕುಶಲ ಪ್ರಶ್ನೆಗಳನ್ನು ಕೇಳುತ್ತಿದ್ದರು. ಜಂಗಮರು ಅವರ ತಪ್ಪುಗಳನ್ನು ತಿದ್ದಿ ಸೂಕ್ತ ಸಲಹೆಗಳನ್ನು ನೀಡಿ "ಜ್ಞಾನ ಬೋಧಕನು, ಧರ್ಮಶಾಸಕನೂ ಆದಂತಹ ಗುರುಸ್ಮರಣೆಯನ್ನು ಮರೆಯಬೇಡಿ" ಎಂದು ಅಭಯವಿತ್ತು ಹೊರಡುತ್ತಿದ್ದರು. ಭಕ್ತರ ಧಾರ್ಮಿಕ ಆಚರಣೆಗಳ ಪರಿಶೀಲನೆ ಹಾಗೂ ಅದಕ್ಕೆ ಅನುಗುಣವಾದ ಸೂಕ್ತ ತಿಳುವಳಿಕೆಗಳನ್ನು ನೀಡುವುದು ಈ ಘಂಟೆಕಾಯಕದಯ್ಯಗಳ ನೇಮವಾಗಿತ್ತು.

**೨. ಗದ್ದುಗೆಕಾಯಕ :**

ಗದ್ದುಗೆ ಕಾಯಕ ಅಥವಾ ಕಟ್ಟಿಕಾಯದ ಅಯ್ಯಗಳು ಘಂಟೆಕಾಯಕದ ಅಯ್ಯಗಳಿಗಿಂತ ಸ್ವಲ್ಪ ಹೆಚ್ಚಿನ ಜವಾಬ್ದಾರಿಯುಳ್ಳರಾಗಿರುತ್ತಾರೆ. ಮೊದಲು ತಮಗೆ ಬೇಕಾದ ಗ್ರಾಮದ ಪೂರ್ಣ ಮಾಹಿತಿಯನ್ನು ಸಂಗ್ರಹಿಸಿ, ಆ ಊರಿನ ಮಧ್ಯೆ ಇರುವ ವಿಶಾಲ ಕಟ್ಟೆಯೊಂದರ ಮೇಲೆ ಆಸನ ರೂಢರಾಗಿ ಕುಳಿತು ಘಂಟಾನಾದ ಮೊಳಗಿಸುತ್ತಿದ್ದರು. ಆಗ ಓಣಿಯ ಭಕ್ತರೆಲ್ಲರು ಬಂದು ಆ ಜಂಗಮರಿಗೆ ನಮಸ್ಕರಿಸಿ, ಅವರು ಹೇಳುವ ಉಪದೇಶಗಳನ್ನು ಕೇಳುತ್ತಿದ್ದರು. ಯಾರು ಧರ್ಮ ಬಾಹಿರನಾಗಿರುತ್ತಾನೋ ಅವನನ್ನು ತಮ್ಮ ಭಕ್ತಿಯಿಂದ ತಿದ್ದಿ ಅವನ ಅಂತರಂಗದಲ್ಲಿನ ಪಾಪ-ಪುಣ್ಯಗಳ ಕರ್ಮ ವಿಶೇಷಗಳನ್ನು ತಿಳಿಸಿ ಜಾಗೃತನನ್ನಾಗಿ ಮಾಡಿ ಗುರುಪೀಠಕ್ಕೆ ತೆರೆಳಿ ವರದಿ ಮಾಡುವುದು ಗದ್ದುಗೆ ಕಾಯಕದ ಅಯ್ಯಗಳ ವೃತ್ತಿಯಾಗಿತ್ತು.

**೩. ಕಂಬದ ಕಾಯಕ :**

ಇವರು ಸಂಬಂಧಪಟ್ಟ ಊರುಗಳಲ್ಲಿ ದುರ್ಮಾರ್ಗಿಗಳಾದವರ ಪರಿಸ್ಥಿತಿ ಸುಧಾರಿಸದಿದ್ದಾಗ ಅಂಥವರ ಬಗೆಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಿ ಗುರುಪೀಠದ ಆದೇಶಾನುಸಾರವಾಗಿ ಈ ಕಂಬದ ಅಥವಾ ತೆಕ್ಕೆ ಕಾಯಕದಯ್ಯಗಳು ಗ್ರಾಮ ಪ್ರವೇಶ ಮಾಡುತ್ತಿದ್ದರು. ಈ ಜಂಗಮರು ನೇರವಾಗಿ ಆ ದುರ್ಮಾರ್ಗದವರ ಮನೆಗೆ ಹೋಗಿ ಮನೆಯೊಳಗಿನ ಕಂಬವೊಂದಕ್ಕೆ ತೆಕ್ಕೆ ಹಾಕಿಕೊಂಡು ಸತ್ಯಾಗ್ರಹ ಹೂಡುತ್ತಿದ್ದರು. ಈ ಸತ್ಯಾಗ್ರಹಗಳು ಮೌನವ್ರತ ಹಾಗೂ ಉಪವಾಸದಿಗಳಿಂದ ಒಂದೆರಡು ದಿನ ಹಾಗೆ ಕಾಲ ಕಳೆಯುವುದರೊಳಗಾಗಿ ಆ ಅವಿವೇಕಿ ದುರ್ಮಾರ್ಗಿ ಮತ್ತವನ ಕುಟುಂಬ ಆತ್ಮಗತವಾಗಿ ದಂಡಿಸಲ್ಪಡುತ್ತಿದ್ದರು. ಹೀಗೆ ಆತ್ಮಶೋಧಕ್ಕೆ ಒಳಗಾದ ವ್ಯಸನಿಗೆ ತನ್ನ ತಪ್ಪಿನ ಅರಿವಾಗಿ ಬಂದು ಆ ಕಂಬದಯ್ಯಗಳ ಪಾದಕ್ಕೆರಗಿ ತಮ್ಮ ಆಜ್ಞಾನುಸಾರವಾಗಿ ನಡೆಯುವುದಾಗಿ ವಚನಕೊಟ್ಟು ಅವರು ಈ ಸತ್ಯಾಗ್ರಹದಿಂದ ವಿಮುಖರಾಗುವಂತೆ ಪ್ರಾರ್ಥಿಸಿಕೊಳ್ಳುತ್ತಿದ್ದನು. ಆಗ ಆ ಜಂಗಮರು ತಮ್ಮ ಕಂಬದ ತೆಕ್ಕೆ ಕಾಯಕವನ್ನು ನಿಲ್ಲಿಸಿ ಆ ಭಕ್ತನಿಂದಲೇ ಆದರಾತಿಥ್ಯವನ್ನು ಸ್ವೀಕರಿಸಿ ಅವನಿಗೆ ಸದ್ಬೋಧನೆಯನ್ನು ಮಾಡಿ ಗುರುಪೀಠಕ್ಕೆ ಹಿಂತಿರುಗುತ್ತಿದ್ದರು.

**೪. ಮುಳ್ಳಾವಿಗೆ ಕಾಯಕ :**

ಮೇಲ್ಕಂಡ ಕಾಯಕದಯ್ಯಗಳಿಂದ ಗ್ರಾಮವಾರ್ತೆಗಳನ್ನು ಸಂಗ್ರಹಿಸಿದ ಗುರುಪೀಠದವರು ಮತ್ತು ಅವಿವೇಕಿಗಳಾಗೆ ಉಳಿದಿದ್ದ ದುರ್ಮಾಗಿಗಳನ್ನು ಗುರುತಿಸಿ ಅವರ ಬಳಿಗೆ ಈ ಮುಳ್ಳಾವಿ ಕಾಯಕದ ಪ್ರಧಾನ ಸತ್ಯಾಗ್ರಹಿ ಜಂಗಮರನ್ನು ಕಳುಹಿಸುತ್ತಿದ್ದರು. ಇವರ ಸಹ ಸಂಬಂಧಪಟ್ಟ ಗ್ರಾಮದ ಮಠಸ್ಥರಿಂದ ಎಲ್ಲ ಮಾಹಿತಿ ಸಂಗ್ರಹಿಸಿ ಆತನ ಅವಿವೇಕಕ್ಕೆ ಉಗ್ರಪ್ರತಿಕ್ರಿಯೆ ತೋರಿ. ಆತನ ಮನೆಯ ಮುಂದೆ ನಿಂತು ಕಠಿಣ ಸತ್ಯಾಗ್ರಹ ಆರಂಭಿಸುತ್ತಿದ್ದರು. ಕಬ್ಬಿಣದ ಮೊಳೆಗಳುಳ್ಳ ಮುಳ್ಳಾವಿಗೆಯ ಮೇಲೆ ನಿಂತು ಕಠಿಣ ಸತ್ಯಾಗ್ರಹ ಮಾಡುತ್ತಿದ್ದರು. ಅಲ್ಲದೆ ಆತನನ್ನು ಗಂಭೀರವಾದ ಉಕ್ತಿಗಳಿಂದ ಎಚ್ಚರಿಸುತ್ತಿದ್ದರು. ಆಗ ಆ ದುರ್ಮಾರ್ಗಿ ಗ್ರಾಮದ ಎಲ್ಲ ಗ್ರಾಮಸ್ಥರ ಸಾಕ್ಷಿಯಾಗಿ ಈ ಅಯ್ಯಗಳಿಗೆ ತಾನು ಇನ್ನೂ ಲಿಂಗಾಂಗಿಯಾಗಿ ಧರ್ಮಕ್ಕೆ ಚ್ಯುತಿ ಬಾರದಂತೆ ಧರ್ಮನಿಷ್ಟನಾಗಿ ಬಾಳುವುದಾಗಿ ಭಾಷೆಕೊಟ್ಟು, ತಪ್ಪು ಕಾಣಿಕೆ ಅರ್ಪಿಸುತ್ತಿದ್ದನು. ಆಗ ಈಮುಳ್ಳಾವಿಗೆ ಕಾಯಕದಯ್ಯಗಳು ತಮ್ಮ ಉಗ್ರ ಸತ್ಯಾಗ್ರಹವನ್ನು ನಿಲ್ಲಿಸಿ ಆತನ ಉಪಚಾರಗಳನ್ನು ಸ್ವೀಕರಿಸಿ ಇನ್ನೂ ಮುಂದೆ ಸದ್ಧರ್ಮ ನಿರತವಾಗಿ ಬಾಳುವಂತೆ ಹರಿಸಿ ಮುನ್ನಡೆಯುತ್ತಿದ್ದರು.

ಹೀಗೆ ವಿಶಿಷ್ಟ ರೀತಿಯ ಕಾಯಕಗಳ ಮೂಲಕ ವೀರಶೈವ ಧರ್ಮದ ರಕ್ಷಣೆಯ ಜೊತೆಗೆ, ಭಕ್ತರಿಗೂ ಗುರುಗಳಿಗೂ ಸೇತುವೆಯಂತಿದ್ದ ಕಾಯಕದ ಅಯ್ಯಗಳು ಪ್ರಾಮಾಣಿಕವಾದ ಸಮಾಜೋದಾರ್ಮಿಕ ಸೇವಕರಾಗಿ ದುಡಿಯುತ್ತಿದ್ದರು. “ಯಾವುದೇ ಮಠ–ಮಾನ್ಯಗಳ ಅಧಿಕಾರವಿಲ್ಲದೆ ಗೃಹಸ್ಥರೇ ಆಗಿದ್ದ ಇವರಿಗೆ ಭಕ್ತರು ಕೊಡುತ್ತಿದ್ದ ಕಾಣಿಕೆಯೇ ಜೀವನಾಧಾರವಾಗಿತ್ತು. ಸಾಮಾನ್ಯವಾಗಿ ಸದಾ ಚರಜಂಗಮರೆ ಆಗಿದ್ದ ಇವರು ಸೇವಾನಿರತರಾಗಿ ಗ್ರಾಮಗಳಿಗೆ ಬಂದಾಗ ಮಠದಯ್ಯನವರು ಉಚಿತ ಏರ್ಪಾಟುಗಳನ್ನು ಮಾಡಿಕೊಡುತ್ತಿದ್ದರು. ಕಾಯಕದಯ್ಯಗಳು ತಮ್ಮ ಶರೀರವನ್ನು ದಂಡಿಸಿ (ಶರೀರಿಕ ತಪಶ್ಚರ್ಯದಿಂದ) ಧರ್ಮೋನ್ನತಿ ಮಾಡುವವರಗಿದ್ದುದರಿಂದ “ಕಾಯೋನ ಧರ್ಮೋನ್ನತಿರ್ವಿಧಿ: ಕ್ರಿಯತೆ ಇತೀ ಕಾಯಕಃ” ಎಂಬ ವ್ಯಾಖ್ಯಾನಕ್ಕೆ ಅರ್ಹರಾಗಿದ್ದರು.”[೩೨] ಹಿರೇಮಲ್ಲೂರು ಈಶ್ವರನ್‌ರವರು ಹೇಳಿರುವಂತೆ “ಗ್ರಾಮೀಣ ವೀರಶೈವ ಧಾರ್ಮಿಕಸ್ಥಿತಿಗಳನ್ನು ಮೇಲಿಂದ ಮೇಲೆ ಪೀಠಾಚಾರ್ಯರಿಗೆ ತಿಳಿಸುವುದು. ಈಕಾಯಕದಯ್ಯಗಳ ಕೆಲಸವಾಗಿತ್ತು. ಇವರು ‘ಚರಜಂಗಮ’ರಾಗಿದ್ದೂ, ಗೃಹಸ್ಥರಾಗಿದ್ದು ತಮ್ಮತಮ್ಮ ಧಾರ್ಮಿಕ ವೃತ್ತಿಕಾಯಕಗಳ ಮೂಲಕ ಹಳ್ಳಿ ಹಳ್ಳಿಗಳಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡುತ್ತಿದ್ದರು.”[೩೩]

ಗುರುವರ್ಗದ ಶ್ರೇಣಿಯಲ್ಲಿ ಪಂಚಪೀಠಾಧಿಪತಿಗಳ ಆದಿಯಾಗಿ ಪಂಚವೃತ್ಯಾಚಾರ್ಯರವರೆಗೆ ಎಲ್ಲರೂ ಜಂಗಮರೇ. ಸಿಂಹಾಸನಾದಿಪತಿಗಳಾದ ಪಂಚಾವೃತ್ಯಾಚಾರ್ಯರು ದೇಶದಲ್ಲಿ ವೀರಶೈವ ಧಾರ್ಮಿಕ ಜಗತ್ತಿನ ಉನ್ನತ ಅಧಿಪತಿಗಳಾಗಿದ್ದ ಪ್ರಥಮ ಶ್ರೇಣಿಯ ಗುರುಗಳಾಗಿರುತ್ತಾರೆ. ಇವರ ನಂತರದ ಸ್ಥಾನ ಪ್ರಾದೇಶಿಕ ಧರ್ಮಾಧಿಪತಿಗಳಾದ ಪಟ್ಟಾಧ್ಯಕ್ಷರು (ಪಟ್ಟಾಧಿಕಾರಿ–ಚರಾಧಿಕಾರಿ)ಗಳದು. ಇವರು ಪಂಚಪೀಠದ ಪ್ರತಿನಿಧಿಗಳೇ ಆಗಿದ್ದು, ಗುರುವರ್ಗದ ಶ್ರೇಣಿಯಲ್ಲಿ ದ್ವಿತೀಯಸ್ಥಾನ ಪಡೆದಿರುತ್ತಾರೆ. ಪಂಚವೃತ್ಯಾಚಾರ್ಯರಲ್ಲಿ ಮೊದಲಿಗರಾದ ಮಠದಯ್ಯ ಅಥವಾ ಹಿರೇಮಠಸ್ಥರದು ಮೂರನೇ ಸ್ಥಾನ. ಹೀಗೆ ಗ್ರಾಮ ಮಟ್ಟದ ಹಿರೇಮಠಗಳ (ಗೃಹಸ್ಥ ಗುರು) ಮೇಲೆ, ಪ್ರಾದೇಶಿಕ ಮಟ್ಟದ ಪಟ್ಟದೇವರ ಮಠಗಳು (ಬ್ರಹ್ಮಚಾರಿ ಗುರು) ಇವುಗಳಿಗೂ ಮೇಲ್ಪಟ್ಟು ದೇಶವ್ಯಾಪಿ ಮಟ್ಟದಲ್ಲಿ ಸಿಂಹಾಸನ (ಬ್ರಹ್ಮಚಾರಿಗುರು) ಮಠಗಳಾದ ಪಂಚಪೀಠಗಳಿರುತ್ತವೆ. ಇನ್ನು ವೃತ್ಯಾಚಾರ್ಯರಾದ ಮಠಪತ್ತಿ, ಗಣಾಚಾರಿ, ಗಣಕುಮಾರ, ಸ್ಥಾವರಿಕ ಇವರದು ಗ್ರಾಮದ ಭಕ್ತರಿಗೂ ಹಿರೇಮಠಸ್ಥರಿಗೂ ನಡುವಿನ ವ್ಯವಹಾರವಾದರೆ, ಕಾಯಕದಯ್ಯಗಳಾದ ಘಂಟೆಕಾಯಕ, ಗದ್ದುಗೆಕಾಯಕ, ಕಂಬದಕಾಯಕ,

---

೩೨. ವೀರಶೈವ ಕರದರ್ಪಣ ಸಂ.ಟಿ.ಎನ್ ಚನ್ನಪ್ಪ ಬಿ. ಪಟ್ಟಸ್ವಾಮಯ್ಯ ಪುಟ – ೪

೩೩. ಡಾ. ಹಿರೇಮಲ್ಲುರ್‌ಈಶ್ವರನ್ ಲಿಂಗಾಯಿತ ಧರ್ಮ ಸಮಾಜ ಮತ್ತು ಸಂಸ್ಕೃತಿ ಪುಟ : ೧೬೯–೧೭೦

ಮುಳ್ಳಾವಿಗೆ ಕಾಯಕದವರದು ನೇರವಾಗಿ ಪಂಚಪೀಠಾಧೀಶರಿಗೂ (ಕೆಲವು ವೇಳೆ ಪಟ್ಟಾಧ್ಯಕ್ಷರಿಗೂ) ಗ್ರಾಮಮಟ್ಟದ ಭಕ್ತರಿಗೂ ನಡುವಿನ ವ್ಯವಹಾರವಾಗಿರುತ್ತದೆ. ಈಪಂಚಾವೃತ್ಯಾಚಾರ್ಯರು, ಕಾಯಕದಯ್ಯಗಳು, ಇನ್ನುಳಿದ ವಸ್ತ್ರದವರು, ಕಂಥೆಯವರು, ಶಿವದಾರದವರು ಮುಂತಾದವರೆಲ್ಲ ಗೃಹಸ್ಥರೇ ಆಗಿದ್ದು ಜಂಗಮಜಾತಿಯ ಉಪಜಾತಿಗಳವರಾಗಿರುತ್ತಾರೆ. ಇವರುಗಳಿಗೆ ಮಠಾಧಿಪತಿಗಳಾಗುವ ಗುರುತ್ವ ಪದವಿಗೇರುವ ಅವಕಾಶವಿರುವುದಿಲ್ಲ. ಗುರುವರ್ಗದವರೆಲ್ಲ ಮಠದಯ್ಯ (ಹಿರೇಮಠಸ್ಥ)ನಿಗೆ ಮಾತ್ರ ಧರ್ಮಭಿಕ್ಷೆ ಎತ್ತುವ ಅಧಿಕಾರವಿತ್ತು. ಉಳಿದ ವೃತ್ಯಾಚಾರ್ಯರುಗಳಿಗಾಗಲೀ ಅಥವಾ ಕಾಯಕದಯ್ಯಗಳಿಗಾಗಲೀ ಈ ಧರ್ಮಭಿಕ್ಷೆ ಎತ್ತುವ ಅಧಿಕಾರವಿರಲಿಲ್ಲ.

ಹಿಂದಿನ ಕಾಲದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಪಂಚವೃತ್ಯಾಚಾರ್ಯರ ಜೊತೆಗೆ ಗ್ರಾಮದ ಶೆಟ್ಟಿ, ಯಜಮಾನ, ಬಣಕಾರ ಮುಂತಾದ ಭಕ್ತ ಪ್ರಮುಖರು ಸೇರಿ ವೀರಶೈವ ಧಾರ್ಮಿಕ ವ್ಯವಸ್ಥೆಯ ನೀತಿ–ನಿಬಂಧನೆಗಳನ್ನು ಕರಾರುವಕ್ಕಾಗಿ ನಡೆಸಿಕೊಂಡು ಹೋಗುತ್ತಿದ್ದರು. ಈ ರೀತಿ ವೀರಶೈವ ಧರ್ಮಿಯರೆಲ್ಲ ತಮ್ಮ ಧಾರ್ಮಿಕ ನಿತ್ಯನೇಮಗಳನ್ನು ಸಾಂಗವಾಗಿ ಜರುಗುವಂತೆ ವ್ಯವಸ್ಥೆ ಮಾಡಿದ್ದವರು ಪ್ರಾಚೀನಪೀಠಾಚಾರ್ಯರು ಎಂಬ ನಂಬಿಕೆ ಇದೆ. ಇಂತಹ ಅಳಿದುಳಿದ ವ್ಯವಸ್ಥೆಯನ್ನು ಗ್ರಾಮಾಂತರ ಭಾಗಗಳಲ್ಲಿ ಈಗಲೂ ಗುರುತಿಸಬಹುದಾಗಿದೆ. ಹೀಗೆ ಪಂಚಪೀಠಗಳು, ಪಟ್ಟ(ದೇವರ)ದ ಮಠಗಳು ಹಾಗೂ ಹಿರೇಮಠಗಳು ಇವೇ ಮೊದಲಾದ ಗುರುಮಠಗಳು, ಗುರುವರ್ಗದ ಬೇರೆ ಬೇರೆ ಮಠೀಯ ಸಂಸ್ಥೆಗಳಾಗಿರುತ್ತವೆ.

**ವಿರಕ್ತ ವರ್ಗ (ಶೂನ್ಯ ಪೀಠದ) ಮಠಗಳು:–**

"ವಿರಕ್ತರೆಂದರೆ ಸನ್ಯಾಸಿಗಳು ಸನ್ಯಾಸಾಶ್ರಮದ ದೀಕ್ಷೆಯನ್ನು ಪಡೆದು ಸರ್ವಸಂಗ ಪರಿತ್ಯಾಗಿಗಳಾಗಿ ವೈರಾಗ್ಯ ಸಂಪನ್ನರಾದವರು, ಸದಾ ಸಂಚಾರಿಗಳಾದ ಇವರು ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿಯಂತೆ ಸಂಚರಿಸುತ್ತಾ, ಕರತಲಭಿಕ್ಷೆ ತರುಲತವಾಸ ಮಾಡುವರು. ಇವರೆ ನಿರಾಭಾರಿಜಂಗಮರು"[೩೪] ಎಂಬಿತ್ಯಾದಿಯಾಗಿ ವಿರಕ್ತರನ್ನೂ ಕುರಿತ ಮಾತುಗಳಿವೆ. 'ಜಂಗಮ' ಎಂದರೆ ವೈರಾಗ್ಯಕ್ಕಾಗಿ ಸಂಚರಿಸುವವನು ಎಂದರ್ಥ. ದೇಶದ ತುಂಬಾ ಜ್ಞಾನ ವೈರಾಗ್ಯಪರನಾಗಿ ಸಂಚರಿಸುವನು. ಮೊದಲು ಗುರುವಿನಿಂದ ಅನುಗ್ರಹೀತನಾದವ ಭಕ್ತ(ವೀರಶೈವ)ನಾಗುತ್ತಾನೆ. ಭಕ್ತನಾದವನು ಆಮೇಲೆ ಸಂಸಾರವನ್ನು ತೊರೆದು ಸಂಚಾರ ಕೈಗೊಂಡು ಜಂಗಮನಾಗುತ್ತಾನೆ. ಇಷ್ಟಾದರೂ ಇಂತಹ ಜಂಗಮ ಲೌಕಿಕ ಸುಖಗಳಿಂದ ಅತೀತನಾದವನಲ್ಲ. ವಿರಕ್ತತೆ ಇವಲ್ಲಕ್ಕೂ

---

೩೪. ಡಾ.ಬಿ.ಸಿ ವೀರಪ್ಪ ಬೇಂಗಳೂರು ನಗರ ವೀರಶೈವ ಮಠಗಳ ಸಾಂಸ್ಕೃತಿಕ ಅಧ್ಯಯನ ಪುಟ – ೪೮

ಮೀರಿದ್ದು. ಚನ್ನಬಸವಣ್ಣ ಹೇಳುವಂತೆ ಶ್ರೀಗುರು ಶಿಷ್ಯನಭವಿ ಪೂರ್ವಾಶ್ರಮವ ಕಳೆದು ಭಕ್ತನ ಮಾಡಿದ ಬಳಿಕ ಆ ಭಕ್ತ ಜಂಗಮನಾಗುತ್ತಾನೆ.

ಹನ್ನೆರಡನೆ ಶತಮಾನದಲ್ಲಿ ಜಂಗಮತ್ವಕ್ಕೆ ಹೆಚ್ಚಿನ ಮಾನ್ಯತೆ ಇತ್ತು "ಗುರುವಿನ ಗುರು ಜಂಗಮ" ಗುರುವಿನ ಗುರು ಪರಮಗುರು, ಜಂಗಮ ಎಂಬಿತ್ಯಾದಿ ವಚನಕಾರಕ ಮಾತುಗಳು ಜಂಗಮತ್ವದ ಹಿರಿಮೆಗೆ ಹಿಡಿದ ಕನ್ನಡಿಯಂತಿವೆ. ಜಂಗಮತ್ವ, ವಿರಕ್ತತ್ವದ ಹಿಂದಿನ ಹೆಜ್ಜೆ, ಜಂಗಮನಾದವನು ಸರ್ವಸ್ವವನ್ನೂ ತೊರೆದು ಸಂಪೂರ್ಣ ವೈರಾಗ್ಯಪರನಾದಾಗ ವಿರಕ್ತನಾಗುತ್ತಿದ್ದನು. ಇಂತಹ ವಿರಕ್ತರನ್ನು 'ನಿರಾಭಾರಿ'ಗಳೆಂದು ಕರೆಯಲಾಗುತ್ತದೆ. ಈ ನಿರಾಭಾರಿ ವಿರಕ್ತ ಇಲ್ಲವೆ ಜಂಗಮ ಸಂಪ್ರದಾಯವು ವೀರಶೈವ ಸಮಾಜದಲ್ಲಿ ಹುಟ್ಟಿಕೊಂಡಿದ್ದೇ ಬಸವಾದಿ ಪ್ರಮಥರ ಕ್ರಾಂತಿಯ ಫಲವಾಗಿ. ಇದನ್ನೆ ಕಪಟರಾಳ ಕೃಷ್ಣರಾಯರು "ವೀರಶೈವರ ಹೊಸ ಗುರುವರ್ಗ" ಎಂದು ಕರೆದಿದ್ದಾರೆ. ಹನ್ನೆರಡನೇ ಶತಮಾನದಲ್ಲಿ ವಿರಕ್ತ ಸಮಯಾಚಾರಕ್ಕೆ ಪರಮ ಗುರುವಾಗಿದ್ದ ಅಲ್ಲಮಪ್ರಭುವು ಜಂಗಮರ ರೀತಿ–ನೀತಿಗಳನ್ನು ಕುರಿತು ಹೇಳುತ್ತಾ "ನಿಸ್ಸಂಗಿ ಚ ನಿರಾಭಾರಿ ನಿಸ್ಸೀಮಂ ಎಂಬ ನಿರುಪಾಧಿಕಂ । ನಿರ್ದೇಹಂ ನಿರ್ಮಲಂ ನಿತ್ಯಂ ಜಂಗಮ ಲಕ್ಷಣಂ॥ ಎಂಬ 'ಶಿವರಹಸ್ಯ'ದ ಜಂಗಮ ಲಕ್ಷಣವನ್ನು ಉದಾಹರಿಸಿ ಹೊನ್ನು, ಹೆಣ್ಣು ರುಚಿ ಹಿಂಗಿ ಜಂಗಮವಾದಲ್ಲದೆ ಭವ ಹಿಂಗದು ಎಂದಿದ್ದಾನೆ. ವೀರಶೈವ ಜಂಗಮತ್ವ ನಿರಂಜನವಾದುದು, ನಿರ್ಮಾಯವಾದುದು, ಉಪನಿಷತ್ತುಗಳಲ್ಲಿ ಹೇಳಿರುವಂತೆ ಪರವಸ್ತುವಿನ ಲಕ್ಷಣವುಳ್ಳದ್ದು ಜಾತಿವಿರಹಿತವಾದದ್ದು "ಶರಣರು ಗುರುತಿಸಿರುವಂತೆ ಜೀವ–ಆತ್ಮಗಳ ಸಂಬಂಧವಾದ ಶೂನ್ಯ ವಸ್ತುವಿನ ಜ್ಞಾನವುಳ್ಳ ಮಹಾನುಭವಿಯ ಜಂಗಮ ಅಥವಾ ಗುರುವಿನ ಗುರು. ಅಲ್ಲಮಪ್ರಭು ಇಂತಹ ಜ್ಞಾನವುಳ್ಳ ಶೂನ್ಯ ವಸ್ತುವಿನ ಮಹಾನುಭವಿಯಾದುದರಿಂದಲೇ ಆತನನ್ನು ಜಂಗಮನೆಂದೂ, ಜಗದ್ಗುರುವೆಂದೂ ಬಸವೇಶ್ವರನು ಪೂಜಿಸಿದನ್ನಲ್ಲದೆ ಆತನುಮಂಡಿಸಿದ ಪೀಠಕ್ಕೆ 'ಶೂನ್ಯಪೀಠ' ಅಥವಾ 'ಶೂನ್ಯಸಿಂಹಾಸನ'ವೆಂದು ಹೆಸರಾಯಿತು. ಹೀಗೆ ಬಸವಣ್ಣನ ಕಾಲದಲ್ಲಿ ಕಲ್ಯಾಣದಲ್ಲಿ ಪ್ರಾರಂಭವಾದ ಶೂನ್ಯಪೀಠವೇ ಮುಂದಿನ ನಿರಾಭಾರಿ ಜಂಗಮ ಸಂಪ್ರದಾಯದ ಅಡಿಗಲ್ಲು. ಇದೇ ವಿರಕ್ತ ಪರಂಪರೆಯ ಮೂಲಪೀಠವು. 'ಲಿಂಗಾಯಿತ ಮತೋತ್ಪತ್ತಿ ನಿರ್ಣಯ'ದಲ್ಲಿ ವಿರಕ್ತರು ಹಾಗೂ ಅವರ ಹುಟ್ಟನ್ನು ನಿಷ್ಕಲವೆನಿಸಿತ್ತು. ಆ ನಿಷ್ಕಲವೆ ನಿರಂಜನವೆನಿಸಿತು. ಆ ನಿರಂಜನವೇ ಅಲ್ಲಮಪ್ರಭುವಿನ ಸಂಪ್ರದಾಯಕರು. ವಿರಕ್ತರಾದ ಕಾರಣ ಇಂಥ ವಿರಕ್ತರೇ ತ್ರಿಭುವನವರ್ತಿಗಳಾದ ದೇವದಾನವ ಮಾನವರುಗಳಿಂದ ಪೂಜ್ಯರು' ಎಂದು ಹೇಳಿದೆ.

**ಸಮಯಭೇದಗಳು:** ಸಮಯ ಎಂದರೆ ಒಂದು ಒಪ್ಪಿತವಾದ ವ್ಯವಸ್ಥೆ. ಒಂದೇ ಬಗೆಯ ಧಾರ್ಮಿಕ ಆಚರಣೆಗಳಿಗೆ ಬದ್ದವಾದ ನಿಯಮ ಅಥವಾ ಕಟ್ಟುಪಾಡು ಎಂದರ್ಥ. ಈ ವಿರಕ್ತ ಪರಂಪರೆಯಲ್ಲಿ ಹದಿನೇಳನೆಯ ಶತಮಾನದ ವೇಳೆಗೆ ವಿಭಿನ್ನ ಬಗೆಯ ಸಮಯಭೇದಗಳು ಹುಟ್ಟಿಕೊಳ್ಳಲಾರಂಭಿಸಿದವು. ಶೂನ್ಯಸಿಂಹಾಸನದ ಇಪ್ಪತ್ತಮೂರನೆಯ ಚರಂತಿಗೆ ಪಟ್ಟಾಧಿಕಾರಿಗಳಾಗಿದ್ದ ಕಟ್ಟಿಗೆಹಳ್ಳಿಸ್ವಾಮಿಗಳ ಕಾಲದ (ಕ್ರಿ.ಶಸುಮಾರು ೧೬೨೦-೧೬೪೦)ವರೆಗೆ ನಿರಂಜನ ಪೀಠಾಧಿಕಾರಿಗಳು ಒಬ್ಬರೇ ಇದ್ದಂತೆ ತಿಳಿದುಬರುತ್ತದೆ. ಇವರ ಕಾಲದ ನಂತರ ಶೂನ್ಯಸಿಂಹಾಸನಾಧಿಕಾರಿಗಳ ಭಿನ್ನ ಸಮಯ ಭೇದಗಳು ಹುಟ್ಟಿಕೊಳ್ಳಲಾರಂಭಿಸಿದವು ಎನ್ನಲಾಗಿದೆ. ಡಾ. ಎಂ. ಚಿದಾನಂದಮೂರ್ತಿಗಳು ವೀರಶೈವ ಧರ್ಮದ ಇತಿಹಾಸದಲ್ಲಿ ಹದಿನೇಳನೆಯ ಶತಮಾನದ ಆದಿಭಾಗದಲ್ಲಿ ಕಾಣಿಸಿಕೊಂಡ ಐದು ಸಮಯಭೇದಗಳು ಯಾವುದೆಂದರೆ

೧. ಕೆಂಪಿನ ಸಮಯ ೨. ಕುಮಾರ ಸಮಯ ೩. ಸಂಪಾದನೆಯ ಸಮಯ ೪. ಚೀಲಾಳ ಸಮಯ ೫. ಮುರಿಗೆ ಸಮಯ ಎಂದು ಹೇಳಿದ್ದಾರೆ. ಮುರಿಗಶಾಂತವೀರರ ಐವರು ಶಿಷ್ಯರಲ್ಲಿ ಮೊದಲ ನಾಲ್ವರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ಬಂದು ವಿರಕ್ತ ಸಂಪ್ರದಾಯದ ಅವರ ಹೆಸರಿನ ಸಮಯ ಭೇದಗಳಿಗೆ ಕಾರಣವಾದರು ಎಂದಿದ್ದಾರೆ. ಚನ್ನಮಲ್ಲಿಕಾರ್ಜುನರು  ಈ ಐದು ಸಮಯದ ಮೂಲ ಮಠಗಳನ್ನು ಪ್ರಸ್ತಾಪಿಸುತ್ತಾ, "ಮುರಿಗಿ ಸಮಯಕ್ಕೆ' ಮೂಲ ಗುರುಗಳಾದ ಮುರಿಗಾಶಾಂತವೀರ ಸ್ವಾಮಿಗಳ ಮಠವೇ "ಚಿತ್ರಕಲ್ ದುರ್ಗದ ಮಠ" ಕುಮಾರ ಸಮಯಕ್ಕೆ ಮೂಲಗುರುಗಳಾದ ಕುಮಾರಸ್ವಾಮಿಗಳ ಮಠವೇ "ಇಸಳೂರು ಮಠ" ಅನಂತರ ಕೆಳದಿ ಸೀಮೆಗೆ ಸೇರಿದ 'ಜಡೇದ ಮಠ', ಚೀಲಾಳ ಸಮಯಕ್ಕೆ ಸೇರಿದ ಮೂಲ ಗುರುಗಳಾದ ತೋಟದ ಸ್ವಾಮಿಗಳ ಮಠವೇ 'ಡಂಬಳ ಮಠ'. ಸಂಪಾದನೆಯ ಸಮಯಕ್ಕೆ ಮೂಲಗುರುಗಳಾದ ಸಿದ್ದವೀರಸ್ವಾಮಿಗಳ ಮಠವೇ 'ಹಾಗಲವಾಡಿ ಮಠ' ನಂತರ ಮಂಟಮುರಿಗಮಠ, ಕೆಂಪಿನಸಮಯಕ್ಕೆ ಮೂಲಗುರುಗಳಾದ ಕೆಂಪಿನಪ್ಪನವರ ಶಿಷ್ಯರಾದ ಸಂಗದಬಸವಪ್ಪನವರ ಮಠವೇ ಹುಮನಾಬಾದಿ ಕಲ್ಯಾಣ ಸೀಮೆಪೈಕಿ ಹುಲೆಕುಂಟೆಯ ಬಸವತೀರ್ಥ ಮಠವೆಂದೂ ವಿವರಿಸಿದ್ದಾರೆ. ಈ ಐದು ಪ್ರಧಾನ ಸಮಯ ಭೇದಗಳ ಜೊತೆಗೆ ಅದೆ ಇನ್ನೂ ಅನೇಕ ಸಮಯಭೇದಗಳಿದ್ದುದಾಗಿಯೂ, ಕಾಲಾನಂತರದಲ್ಲಿ ಅವುಗಳೆಲ್ಲಾ ಮೂಲಭೇದಗಳಲ್ಲೇ ವಿಲೀನವಾದಂತೆಯೂ ತಿಳಿದುಬರುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಿಬೇಕಾದ ಅಂಶವೆಂದರೆ, ಎಲ್ಲಾ ಸಮಯಗಳವರೂ ಅಲ್ಲಮಪ್ರಭುವಿನ ಜೊತೆಗೆ ತಮ್ಮ ಪರಂಪರೆಯನ್ನೂ ಹೇಳಿಕೊಳ್ಳುವಾಗ ನಿರಾಭಾರಿಜಂಗಮ ಅಲ್ಲಮಪ್ರಭು ಪರಂಪರೆ ಅಥವಾ ತೋಂಟದ ಸಿದ್ದಲಿಂಗೇಶ್ವರ ಪರಂಪರೆ ಎಂದು ತಪ್ಪದೆ ಹೇಳಿಕೊಳ್ಳುತ್ತಾರೆ. ಇಲ್ಲಿ ನಿರಂಜನಜಂಗಮ ಆದಿಜಗದ್ಗುರು ಅಲ್ಲಮಪ್ರಭುವಿನ ಆದಿಯಾಗಿ ತೋಂಟದಸಿದ್ದಲಿಂಗೇಶ್ವರರವರೆಗೆ ಆದ ಗುರುಪರಂಪರೆಯ ವೃಕ್ಷ ಒಂದೇ ಆಗಿದೆ. ಈ ಸಮಯ

ಭೇದಗಳೇನಿದ್ದರೂ ಕ್ರಿ.ಶ ೧೬೬೦ ರಿಂದ ಪ್ರಾರಂಭವಾಗಿ ಕ್ರಿ.ಶ.೧೭೨೦ ರಲ್ಲಿ ಆದವುಗಳಾಗಿವೆ. ಆಗ ಮುರಿಗಾಶಾಂತವೀರರು(ಮುರಿಗೇಂದ್ರರು) ಹಾಗೂಅವರಶಿಷ್ಯ ಇಮ್ಮಡಿ ಗುರುಸಿದ್ದ(ಮುರಿಗಾಗುರುಸಿದ್ದ)ರ ಕಾಲವಾಗಿತ್ತು. ವಿರಕ್ತವರ್ಗದವರ ಸಮಯ ಭೇದಗಳ ಮೂಲಸ್ಥಾನ ಚಿತ್ರದುರ್ಗದಬೃಹನ್ಮಠವೇ ಆಗಿದೆ. ಅಲ್ಲಿನ ಶಿಖಾಪಟ್ಟ ಶಿವಾನುಭವ ಪಟ್ಟಗಳ ನಡುವಿನ ಭಿನ್ನಾಭಿಪ್ರಾಯಗಳಿಂದಾಗಿಯೇ ಈ ಸಮಯ ಭೇದಗಳು ಹುಟ್ಟಿಕೊಳ್ಳಲಿಕೆ ಕಾರಣವಾಗಿವೆ. ಒಟ್ಟಿನಲ್ಲಿ ಈ ಸಮಯಭೇದಗಳು ಶೂನ್ಯಪೀಠ ಸಂಬಂಧವಾದ ಜಂಗಮವರ್ಗದವರ ಜಗಳದಿಂದ ಉಂಟಾದುವೇ ಹೊರತು. ಯಾವ ಹಿರಿಯ ಜಗದ್ಗುರುಗಳಾಗಲಿ, ಪೀಠಾಧೀಶರಾಗಲಿ ಸಂತೋಷದಿಂದ ಏರ್ಪಡಿಸಿಕೊಟ್ಟ ವ್ಯವಸ್ಥಿತ ಒಪ್ಪಂದಗಳೇನಲ್ಲ ಎಂಬ ಚನ್ನಮಲ್ಲಿಕಾರ್ಜುನರ ಮಾತು ಸಂದರ್ಭೋಚಿತವಾಗಿದೆ.

**ಉತ್ತರಾಧಿಕಾರತ್ವದ ಅರ್ಹತೆ :**

ವೀರಶೈವ ಗುರುವಿರಕ್ತ ಪೀಠಗಳ ಉತ್ತರಾಧಿಕಾರಿಗಳಾಗಬೇಕಾದವರಿಗೆ ಕೆಲವೊಂದು ವಿಶೇಷವಾದ ಅರ್ಹತೆಗಳಿರಬೇಕಾಗಿತ್ತು. ಏಕೆಂದರೆ ಮಠಾಧಿಕಾರವನ್ನು ನಡೆಸತಕ್ಕ ಗುರುವು ತಾನು ಮೊದಲು ವಿದ್ಯಾವಿನೀತನೂ, ಸದ್ಗುಣ ಸಂಪನ್ನನೂ ಆಗಿದ್ದರೆ ತನ್ನ ಮಠದ ಭಕ್ತರನ್ನ ಸದಾಚಾರ ಸಂಪನ್ನರನ್ನಾಗಿ ಮಾಡಬಲ್ಲನು ಎಂಬುದು ವೀರಶೈವರ ಸದೃಢ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸುಶೀಲ ಸುಸಂಪನ್ನ, ಒಳ್ಳೆಯಜಾತಕ, ಹಸ್ತಸಾಮುದ್ರಿಕೆ, ಮುಖಮುದ್ರಿಕೆಗಳ ಜೊತೆಗೆ ಅಯ್ಯಾಚಾರ ಹೊಂದಿದ ಅಯ್ಯನವರ(ಜಂಗಮರ) ಮಗನೆ ಆಗಿರಬೇಕೆಂಬುದು ಸಾಮಾನ್ಯ ನಿಯಮವಾಗಿತ್ತು. ಆದರೆ ಇತ್ತೀಚಿಗೆ ವಿರಕ್ತಮಠಗಳ ಉತ್ತರಾಧಿಕಾಗಳಾಗಲು ಯಾವುದೇ ಜಂಗಮೇತರ ಭಕ್ತ ಜಾತಿಗಳಲ್ಲಿನ ವಟುವಾದರೂ ಮೇಲ್ಕಂಡ ಲಕ್ಷಣಗಳಿದ್ದಲ್ಲಿ ಮಠಾಧಿಪತಿಯಾಗುವ ಅವಕಾಶಗಳಿವೆ.

ಮಠಾಧಿಪತಿಯಾಗ ತಕ್ಕವನು ಲೌಕಿಕ ಮತ್ತು ಪಾರಮಾರ್ಥಿಕ ವಿದ್ಯೆಗಳಲ್ಲಿ ಪಾರಂಗತನಾಗಿರಬೇಕು. ಉಪನಿಷತ್ತಿನ ಉಕ್ತಿಯಂತೆ 'ಸ ಗುರುದೇವ ಅಭಿಗಚ್ಛೇತ್ ಶ್ರೋತ್ರಿಯಂ ಬ್ರಹ್ಮ ನಿಷ್ಠಂ ಅಂದರೆ ಗುರುವು ಶ್ರೋತ್ರೀಯನೂ ಬ್ರಹ್ಮನಿಷ್ಠನೂ ಆಗಿರಬೇಕು'. ಯಾರು ಶ್ರೋತ್ರಿಯೂ, ಬ್ರಹ್ಮನೂ ಆಗಿರುವನೋ ಅವನೇ ಗುರುಪದವಿಗೆ ಅರ್ಹನೆಂದು ಎಂ.ಜಿ.ನಂಜುಂಡಾರಾಧ್ಯರು ಹೇಳಿದ್ದಾರೆ. ವೀರಶೈವಾಚಾರ ಕೌಸ್ತುಭದಲ್ಲಿ ಗುರುಸ್ಥಾನಕ್ಕೆ ಬರುವವನು ಸತ್ಕುಲ ಪ್ರಸೂತನಾಗಿಯೂ, ಸತ್ಯಶೀಲನಾಗಿಯೂ, ಲಿಂಗವೈಕಲ್ಯಾದಿ ಯಾವುದೇ ಒಂದು ದೋಷವಿಲ್ಲದವನ್ನಾಗಿಯೂ, ಸತ್ಯಶೀಲನಾಗಿಯೂ, ಶಿಷ್ಟಾಚಾರದ ಮನೆತನದವನಾಗಿಯೂ ಇದ್ದಾನೆಯೊ ಇಲ್ಲವೊ ಎಂಬುದನ್ನು ಶಾಸ್ತ್ರಜ್ಞರು ಚೆನ್ನಾಗಿ ಪರೀಕ್ಷಿಸಿ ಅಂಥ ಯೋಗ್ಯತೆಯಿದ್ದವರಿಗೆ ಮಾತ್ರ ಮಠಾಧಿಕಾರವನ್ನೂ ಕೊಡಿಸಬೇಕೆಂದು ಹೇಳಿದೆ. 'ಕ್ರಿಯಾಸಾರ'ದಲ್ಲೂ ಕೂಡ ಮಠಾಧಿಕಾರಿಗಳಾತಕ್ಕವರು ಮಠಸ್ಥಲದ ವಂಶಜರಾಗಿಯೂ , ವಿದ್ಯಾನೀತಿ ಸೌಜನ್ಯ ಶಮದಮಾದಿ ಗುಣ ಸಂಪತ್ತಿಸತ್ಕುಲಪ್ರಸೂತಿ

ಮೊದಲಾದ ಸದ್ಗುಣವುಳ್ಳವರಾಗಿಯೂ, ಇರಬೇಕೆಂದು ಹೇಳಲ್ಪಟ್ಟಿದೆ. ಶಿವಾಗಮೊಕ್ತವಾಹಿ ಗುರುಪೀಠಾಧಿಕಾರಿ(ಸಾಭಾರಿ)ಯಾಗತಕ್ಕವನ ಗುಣಲಕ್ಷಣಗಳನ್ನೂ ಹೇಳುವುದಾದರೆ ಲಿಂಗದಲ್ಲಿ ಸಮುಪಸ್ಥಿತವಾದ, ಪರಿತತ್ವ ಬೋಧಕವಾದ, ಚಿತ್ಕಲೆಯ ಜಪಾಸಕ್ತನಾದ, ಶಾಂತನಾದ, ಸತ್ಯಸಂಧವಾದ, ನಿರ್ಮಾತ್ಸರ್ಯವಾದ, ಕರುಣಾಶಾಲಿಯಾದ, ವೇದಾಗಮಾದಿ ಸರ್ವತಂತ್ರಗಳಲ್ಲಿಯೂ ನಿಪುಣನಾದ, ಯಂತ್ರೋದ್ಧರಣ ಕ್ರಮವನ್ನ ಬಲ್ಲವನಾದ, ಸದಾಲಿಂಗಾರ್ಚನಾಸಕ್ತನಾದ, ಶಿವಭಕ್ತರಲ್ಲಿ ಪ್ರೀತಿಯುಳ್ಳವನಾದ, ಸದ್ದಂಶದಲ್ಲಿ ಹುಟ್ಟಿದವನಾದ ಈ ಎಲ್ಲಾ ಗುಣಗಳುಳ್ಳವನೇ ಗುರುಪೀಠಾರೋಹಣ ಮಾಡಲಿಕ್ಕೆ ಯೋಗ್ಯನೆಂದು ಸಂಪಿಗೆಸಿದ್ದಲಿಂಗಶಾಸ್ತ್ರಿಗಳು (೧೯೧೩) ಹೇಳಿದ್ದಾರೆ. ಹಾಗೆಯೇ ನಿರಂಜನಚರಪಟ್ಟಾಧಿಕಾರಿ (ವಿರಕ್ತ ನಿರಾಭಾರಿ)ಯಾಗಬೇಕಾದವನು "ಇಂದ್ರಿಯಗಳನ್ನೆಲ್ಲ ನಿಗ್ರಹಿಸಿಕೊಂಡಥ ಸತ್ಯ ಶುದ್ಧಮನಸ್ಸಿನವನಾದ ಶಿವಾನುಭವ ಶಾಸ್ತ್ರ ವಿಶಾರದನಾದ, ಸನ್ಮಾರ್ಗ, ಸದ್ಭವವುಳ್ಳ, ಸತ್ಕಲ ಪ್ರಸೂತನಾದ, ಲಿಂಗ ಜಂಗಮ ಪೂಜಾನಿರತನಾದ, ಪರಸತಿ, ಪರಧನಗಳಿಗೆ ಪರವಸ್ತುಗಳಿಗೆ ಅಪ್ರಿಯನಾದ ಸಲಕ್ಷಣಗಳುಳ್ಳ ಬುದ್ಧಿಶಾಲಿ, ಸದ್ಗುಣ ಪ್ರಸೂತನಾದ, ಮಠಸ್ಥಲ (ಆಯ್ಯಾಚಾರ)ದ ವಟುವಾಗಿರಬೇಕು ಎಂದು ಡಾ.ವಿ.ಎಸ್ ಕಂಬಿ ಹೇಳಿದ್ದಾರೆ.

**ಗುರು–ವಿರಕ್ತ ವರ್ಗದ ಮಠಗಳ ಒಂದು ಸಮೀಕ್ಷೆ :**

ಗುರು–ವಿರಕ್ತ ಪೀಠಾಧಿಕಾರಿಗಳ ನಡುವೆ ಉಡುಗೆ–ತೊಡುಗೆ ಆಚಾರ–ವಿಚಾರ ಮುಂತಾದ ವಿಷಯಗಳಲ್ಲಿ ಮೇಲ್ನೊಟಕ್ಕೆ ಕೆಲವು ಸಾಂಕೇತಿಕ ಸಾಮ್ಯಗಳು ಕಂಡು ಬರುತ್ತವೆಯಾದರೂ, ಗೋತ್ರ–ಸೂತ್ರಾದಿ ಮೂಲ ಕ್ರಿಯಾಚಾರಣೆಗಳ ಸಂಬಂಧವಾಗಿ ಸಾಕಷ್ಟು ಭಿನ್ನತೆಗಳಿರುವುದು ಕಂಡುಬರುತ್ತದೆ. ಗುರು–ವಿರಕ್ತರಿಬ್ಬರು 'ಷಟ್‌ಸ್ಥಲ' ಮಾರ್ಗಾನುಸಾರಿಗಳೇ ಆಗಿದ್ದರೂ 'ಸಾಬಾರಿ'ಗಳಾದ ಗುರುವರ್ಗದವರದು ಕ್ರಿಯಾಪ್ರಾಧಾನ್ಯ ಮಾರ್ಗ ಇವರದು ಲಯದೀಕ್ಷೆ 'ನಿರಾಭಾರಿ' ವಿರಕ್ತ ವರ್ಗದವರು ಜ್ಞಾನಪ್ರಧಾನಮಾರ್ಗ ಇವರದು ಲಯದೀಕ್ಷೆ. ಆಶ್ರಮ ಬದ್ಧವಾದ ಗುರುವರ್ಗದವರ ಮಠಗಳು ಸಾಮಾನ್ಯವಾಗಿ ಊರಿನ ಮಧ್ಯೆ ಇರುತ್ತವೆ. ಗುರುಗಳಾದವರು ಭಕ್ತರ ಮಧ್ಯದಲ್ಲಿಯೂ ಇದ್ದ ಅವರ ಕಷ್ಟಸುಖಗಳಲ್ಲಿ ಭಾಗಿಗಳಾಗುತ್ತಾ. ಅವರಿಗೆ ಲಿಂಗದೀಕ್ಷೆಯನ್ನು ಕೊಡುವುದರ ಮೂಲಕ ಮತ್ತು ಅವರ ಜನನ, ಮರಣ, ಮದುವೆ ಮತ್ತು ಹಬ್ಬ ಹರಿದಿನಗಳಲ್ಲಿ ಪೌರೋಹಿತ್ಯ ಕಾರ್ಯಗಳನ್ನು ನಡೆಸುವುದರ ಮೂಲಕ ಅವರ ಬದುಕಿನಲ್ಲಿ ಸನ್ಮಾರ್ಗವನ್ನು ತೋರುತ್ತಾರೆ. ಅಂತ್ಯದಲ್ಲಿ ಮೋಕ್ಷವನ್ನು ದಯಾಪಾಲಿಸುತ್ತಾರೆ. ಇದು ಗುರುವರ್ಗದವರ ಹಕ್ಕು. ಆಶ್ರಮಾತೀತರಾದ ವಿರಕ್ತವರ್ಗದವರು ಸಾಮಾನ್ಯವಾಗಿ ಊರ ಹೊರಗಿರುತ್ತಾರೆ. ಇವರಿಗೆ ಭಕ್ತರ ಪೌರೋಹಿತ್ಯಗಳನ್ನು ನಡೆಸುವ ಅಥವಾ ಲಿಂಗವಂತ ದೀಕ್ಷೆ ನೀಡುವ ಅಧಿಕಾರವಿರುವುದಿಲ್ಲ. ಪ್ರಾಪಂಚಿಕ ವ್ಯವಹಾರಗಳಿಂದ ದೂರವಿರುವ ಇವರು ಮಠ ಮಾನ್ಯಗಳನ್ನು ಕಟ್ಟಿಕೊಂಡು ಒಂದೆಡೆ

ಶಾಶ್ವತವಾಗಿ ನಿಲ್ಲದೆ ಆಸ್ತಿ-ಪಾಸ್ತಿಗಳ ಹಂಗಿಲ್ಲದೆ ಇದೆಲ್ಲಕ್ಕೂ ಮೀರಿದ ಜ್ಞಾನಮಾರ್ಗದ (ಆಧ್ಯಾತ್ಮ ಸಾಧನೆಯ)ಲ್ಲಿ ಮಗ್ನರಾಗಿರುತ್ತಾರೆ.

ಸರ್ವಸಂಗ ಪರಿತ್ಯಾಗಿಗಳಾದ ನಿರಾಭಾರಿಗಳು ಬಾಹ್ಯಾಡಂಬರಕ್ಕೆ ದೂರ. ಸಾಭಾರಿಗಳು ಕೇವಲ ಬ್ರಹ್ಮಚಾರಿಗಳಷ್ಟೆ. ಹಿಂದಿನ ಗುರುವರ್ಗದವರು ವಿವಾಹಿತರೇ ಆಗಿರುತ್ತಿದ್ದರು. ಇವರಿಗೆ ಸಿಂಹಾಸನ, ಕಿರೀಟ, ಪಲ್ಲಕ್ಕಿ ಮುಂತಾದ ಸಕಲ ವಸ್ತು ವಾಹನಾದಿ ಭೋಗ-ಭಾಗ್ಯಗಳ ಆಡಂಬರ ವೈಭವಗಳುಂಟು. ಸಾಭಾರಿಗಳಿಗೆ ಸಕಲ ವೈಭವಯುಕ್ತವಾದ ಪಂಚಸಿಂಹಾಸಗಳಿದ್ದರೆ ನಿರಾಭಾರಿಗಳಿಗೆ ಕೇವಲ ಆಧ್ಯಾತ್ಮಸಿರಿಯ ಶೂನ್ಯಸಿಂಹಾಸನವಿದೆ.

ಗುರು-ವಿರಕ್ತ ಪೀಠಗಳ ಉತ್ತರಾಧಿಕಾರಕ್ಕೆ ಇರಬೇಕಾದ ಅರ್ಹತೆಗಳ (ಗುರುವು ಏಕಪತ್ನಿ ವ್ರತಸ್ಥನೆಂಬುದೊಂದನ್ನು ಉಳಿದು) ಉಭಯರೂ ಸಮಾನರೆ ಆಗಿದ್ದಾರೆ. ಸಾಭಾರಿ- ನಿರಾಭಾರಿಗಳ ಉತ್ತರಾಧಿಕಾರತ್ವ ಹಾಗೂ ಪಟ್ಟಾಧಿಕಾರತ್ವದ ವಿಧಾನಗಳು ಒಂದೇ ಸಾಮ್ಯವುಳ್ಳವಾಗಿದ್ದರೂ. ಕೆಲವೊಂದು ಭಿನ್ನತೆಗಳಿರುವುದು ಕಂಡು ಬರುತ್ತದೆ. ಸಾಭಾರಿಗಳು ಪಂಚಕಳಸಗಳನ್ನು ಹೂಡಿದರೆ ನಿರಾಭಾರಿಗಳು ಷಟ್ಕಳಸಗಳನ್ನು ಹೂಡುತ್ತಾರೆ. ಆಮೇಲೆ ವಟುವಿನ ಮಸ್ತಕಾಭೀಷೆಕವಾದ ನಂತರ ಹಸ್ತಮಸ್ತಕ ಸಂಯೋಗವಾಗಿ ಪಾದೋದಕ ಪ್ರಸಾದಗಳ ವಿನಿಮಯ ಹಾಗೂ ಷಟ್‌ಸ್ಥಲ ಜ್ಞಾನೋಪದೇಶಗಳು ಉಭಯರಿಗೆ ಸಮಾನವಾಗಿಯೇ ನಡೆಯುತ್ತವೆ. ಇದೆಲ್ಲ ಮುಗಿದ ಮೇಲೆ ಶಿಷ್ಯ ಭಿಕ್ಷೆಗೆ ಹೋಗುವಾಗ ಬೆನ್ನಿಗೆ ನಿರಾಭಾರಿಯು ಶಿವಾನುಭವ ಗ್ರಂಥಗಳನ್ನು ಕಟ್ಟಿಕೊಂಡು ಹೋದರೆ ಸಾಭಾರಿಗೆ ಇಂತಹ ಆಚರಣೆಗಳಿರುವುದಿಲ್ಲ. ಇನ್ನೂ ಪಂಚಮುದ್ರೆಗಳು ಉಭಯತರಿಗೂ ಒಂದೇ ಆಗಿರುತ್ತವೆ.

ಗುರುಪೀಠಸ್ಥರು ಸಾಮಾನ್ಯವಾಗಿ ಬ್ರಹ್ಮಚಾರಿಗಳಾಗಿರುತ್ತಾರೆ. ಬಯಸಿದರೆ ಗೃಹಸ್ಥರಾಗಲೂ ಬಹುದು. ಇವರ ಮಠಗಳ (ಹಿರೇಮಠಗಳ)ಲ್ಲಿ ಪೂರ್ವಾಶ್ರಮದ ತಂದೆ-ತಾಯಿ ಅಣ್ಣ-ತಮ್ಮಂದಿ ಮಕ್ಕಳಲ್ಲೆ ಒಬ್ಬರನ್ನು ಅಥವಾ ತಮ್ಮ ರಕ್ತ ಸಂಬಂಧಿಗಳಲ್ಲಿ ಒಬ್ಬರನ್ನು ಆರಿಸಿಕೊಳ್ಳುತ್ತಾರೆ. ಇವರದು ಪುತ್ರಸಂತಾನ ಶೈಲಿ. ಆದರೆ ವಿರಕ್ತ ಪೀಠಗಳವರದು ಇದಕ್ಕೆ ತದ್ವಿರುದ್ಧವಾದ ನೀತಿ ಇವರು ಅಜನ್ಮ ಬ್ರಹ್ಮಚಾರಿ ಸನ್ಯಾಸಿಗಳು ಇವರಿಗೆ ಸಂಸಾರ ನಿಷಿದ್ಧ ವಿರಕ್ತಾಶ್ರಮ ದೀಕ್ಷೆಯನ್ನು ಪಡೆದಾಕ್ಷಣ ಇವರ ಪೂರ್ವಾಶ್ರಮದ ಸಂಬಂಧಗಳೆಲ್ಲ ಕಡಿದುಹೋಗುತ್ತವೆ. ಇವರು ತಮ್ಮ ಉತ್ತರಾಧಿಕಾರಿಯನ್ನು ತಮ್ಮ ಶಿಷ್ಯವರ್ಗದಲ್ಲೆ ಒಬ್ಬರನ್ನು ಆರಿಸಿಕೊಳ್ಳುತ್ತಾರೆ. ಇವರದು ಶಿಷ್ಯಸಂತಾನ ಶೈಲಿ, ಗುರುವರ್ಗದ ಉತ್ತರಾಧಿಕಾರಿ ಜಂಗಮನೆ ಅಂದರೆ ಗುರುಸ್ಥಲ (ಮಠಸ್ಥಲ)ದವನೆ ಆಗಿರಬೇಕೆಂಬುದು ನಿರ್ಬಂಧ. ವಿರಕ್ತ ವರ್ಗದಲ್ಲಿ ಜಂಗಮೇತರರಿಗೂ ಈ ಅವಕಾಶ ಕಲ್ಪಿಸಿದೆ. ಗುರುಪೀಠಸ್ತರು ಸಾಮಾನ್ಯವಾಗಿ ಸಂಸ್ಕೃತ ಪರವಾದ ಸಿದ್ಧಾಂತಶಿಖಾಮಣಿ, ಶ್ರೀಕರಬಾಷ್ಯ, ಶಿವಾಗಮಗಳು ಇವೇ ಮೊದಲಾದ

ಸಿದ್ಧಾಂತಗ್ರಂಥಗಳನ್ನು ಓದಿ ಓಲೈಸಿದರೆ,ವಿರಕ್ತರಿಗೆ ವಚನಗಳ ಕಡೆಗೆ ಹೆಚ್ಚಿನ ಒಲವು ಬಸವಪುರಾಣ, ಪ್ರಭುಲಿಂಗಲೀಲೆ, ಶೂನ್ಯಸಂಪಾದನೆಗಳು ಮತ್ತಿತರ ಕನ್ನಡಪರ ಸಾಹಿತ್ಯಗ್ರಂಥಗಳನ್ನು ಇವರು ವಿಶೇಷವಾಗಿ ಆಧರಿಸುತ್ತಾರೆ,ಆರಾಧಿಸುತ್ತಾರೆ.

ಮುಂದೆ ಗುರುವರ್ಗದ ಪೀಠಗಳು ತಮ್ಮ ಮೂಲ ಪ್ರೇರಕರಾದ ಪಂಚಾಚಾರ್ಯರನ್ನು ಎತ್ತಿಹಿಡಿದರೆ, ವಿರಕ್ತವರ್ಗದವರು ತಮ್ಮ ಮೂಲ ಪ್ರೇರಕರಾದ ಶೂನ್ಯಪೀಠದ ಅಧಿಪತಿಗಳು ಮತ್ತು ವಚನಕಾರರನ್ನು ಎತ್ತಿಹಿಡಿಯುತ್ತವೆ. ಒಟ್ಟಾರೆ ನಾವು ಅಧ್ಯಯನ ಮಾಡಿರುವ ಪ್ರಕಾರವಾಗಿ ಈ ಎರಡು ಪೀಠಗಳಲ್ಲಿ ಕೆಲವೊಂದು ಧಾರ್ಮಿಕ ವಿಧಿವಿಧಾನಗಳನ್ನು ಕುರಿತ ಕರ್ತವ್ಯ ಭೇದಗಳಿವೆಯೋ, ಹೊರತು ಇಬ್ಬರ ಧ್ಯೆಯೋದ್ದೇಶಗಳೂ ಒಂದೇ ಎಂಬುದನ್ನು ಮರೆಯುವಂತಿಲ್ಲ. ಡಾ.ಎಂ.ಚಿದಾನಂದಮೂರ್ತಿಯವರು ಹೇಳಿರುವಂತೆ ಗುರು–ವಿರಕ್ತ ಪೀಠಗಳೆರಡೂ ವೀರಶೈವ ಸಮಾಜದ ಭದ್ರತೆಗಾಗಿ, ಪ್ರಗತಿಗಾಗಿ ದುಡಿಯುತ್ತಿರುವ ಧಾರ್ಮಿಕ ಸಂಸ್ಥೆಗಳು. ಅವರೆಡೂ ವೀರಶೈವ ಸಮಾಜದ ಎರಡು ಕಣ್ಣುಗಳಿದ್ದಂತೆ.

ಇದಲ್ಲದೆ ಮೈಸೂರು ಪ್ರಾಂತ್ಯದಲ್ಲಿ ದಾಸೋಹ ಮಠಗಳು ಸಹ ಇವೆ. ಇವುಗಳನ್ನು ಭಿಕ್ಷದ ಮಠಗಳೆಂತಲೂ ಕರೆಯುತ್ತಾರೆ. ಮಠಕ್ಕೆ ಬಂದಂತ ಭಕ್ತರಿಗೆ ನಿತ್ಯ ಅನ್ನದಾಸೋಹ ನಡೆಸುವ ಮಠಗಳು ಇವೆ. ಅಲ್ಲದೆ ಇಲ್ಲಿನ ಪೀಠಾಧಿಪತಿಗಳಿಗೆ ಪ್ರತಿನಿತ್ಯ ವ್ರತ ನಿಯಮದಂತೆ ತಮ್ಮ ಸುತ್ತಲಿನ ಗ್ರಾಮಗಳ ಭಕ್ತರ ಮನೆಯಲ್ಲಿ ಕಂತೆಭಿಕ್ಷೆ ಮಾಡಿ ಅದನ್ನು ಮಠಕ್ಕೆ ಬಂದಂತ ಭಕ್ತರಿಗೆ ಬಡಿಸುವ ಕಾಯಕ ಮಾಡುತ್ತಾರೆ. ಇಂಥ ಅನೇಕ ಮಠಗಳು ಮೈಸೂರು ಪ್ರಾಂತ್ಯದಲ್ಲಿವೆ. ಹೀಗೆ ಪಟ್ಟದ ಮಠಗಳು, ಸೂರ್ಯಸಿಂಹಾಸನ ಮಠಗಳು, ವೀರಸಿಂಹಾಸನ ಮಠಗಳು, ಭಿಕ್ಷದ ಮಠಗಳು ಮತ್ತು ದಾಸೋಹಮಠಗಳು ಹಾಗೂ ವಿರಕ್ತಮಠಗಳು ಎಂದು ಕರೆಯಲ್ಪಡುವ ಸುಮಾರು ನೂರಕ್ಕೂ ಹೆಚ್ಚು ಮಠಗಳನ್ನು ನಾವು ಕಾಣಬಹುದು